ಬೆಲೆ: ಎರಡು ಆಣೆ

ಕರ್ಮವೀರ

ಜಾತೀಯತೆಗಾಗಿ ವಿಚಾರಿಸಿ

ಸಂಪಾದಕರು :
ಹ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor
H. R. Purohit, M.A.

ಸಂಪುಟ ೧೯] ಹುಬ್ಬಳ್ಳಿ ಸೋಮವಾರ ತಾರೀಖು ೧೪—೪—೧೯೪೭ [ಸಂಚಿಕೆ

"ಐಕ್ಯ ಕೇರಳ" ವಾದಿಗಳ ವಿಚಿತ್ರ ವಾದ

ಕನ್ನಡ ನಾಡಿನ ಭಾಗಗಳನ್ನು ನುಂಗಲು ಪುರಾಣ—ಕಂತೆಯ ಆಧಾರ! —ಕನ್ನಡಿಗರು ಜಾಗ್ರತರಾಗಲಿ

ಸಂ. ಮುಳಿಯ ತಿಮ್ಮಪ್ಪಯ್ಯ ಅವರಿಂದ

ಕಳೆದ ಎಪ್ರಿಲ್ ತಾ. ೨೧ ರಂದು ಮದ್ರಾಸಿನ ನ್ಯಾಯವಿಧಾಯಕ ಸಭೆಯೊಳಗೆ ಭಾಷಾನುಸಾರವಾಗಿ ಪ್ರಾಂತರಚನೆಯಾಗಬೇಕು ಎಂಬ ಮಸೂದೆ ಅಂಗೀಕೃತವಾಯಿತು. ಮುಸ್ಲಿಂಲೀಗಿನ ಪ್ರತಿನಿಧಿಗಳೇನೋ ಇಷ್ಟಪಟ್ಟು ಅಲ್ಲಿಗಳೆದರು; ಹಿಂದಣ ಜಸ್ಟಿಸ್ ಪಾರ್ಟಿಯು ಉಳಿದಿಷ್ಟರಿದವಾಗಿ "ಈ ಭಿನ್ನ ಭಿನ್ನ ಪ್ರಾಂತರಚನೆಗಳಾವುವೂ ಬೇಡ; ಎಲ್ಲವೂ ಸಂಯುಕ್ತ ಸ್ವರೂಪವಿರುವ ದ್ರಾವಿಡಸ್ಥಾನವೊಂದೇ ಆಗಬೇಕು" ಎಂಬ ಭಿನ್ನತಂತ್ರೀ ಸ್ವರವೂ ಕೇಳಿಸಿತು. ಅದು ಹೇಗೂ ಇರಲಿ; ಈ ಸಂದರ್ಭದಲ್ಲಿ ನಮ್ಮ ಕನ್ನಡ ನಾಡಿನ ಮಾನ್ಯ ಪ್ರತಿನಿಧಿಗಳಾದ ಶ್ರೀ ಕೆ. ಆರ್. ಕಾರಂತರು, ನಮ್ಮ ಅಖಂಡ ಕರ್ನಾಟಕ ಪ್ರಾಂತವು ರೂಪಿತವಾಗಲೇಬೇಕು ಎಂಬುದನ್ನು ನ್ಯಾಯಬದ್ಧವಾಗಿ ಸದಸ್ಯರ ಮುಂದೆ ಮಂಡಿಸಿದರು. ಈ ವರೆಗೆ ಭಿನ್ನ ಭಿನ್ನ ಸರಕಾರಗಳೊಳಗೆ ಹರಿದುಹಂಚಾಗಿ ಸಿಲುಕಿ ಹೋಗಿ ಅದರಿಂದೊದಗುತ್ತಿರುವ ಅನಾನುಕೂಲ್ಯಗಳು, ಭಾಷಾ-ಸಂಸ್ಕೃತಿ-ಆಚಾರ ವ್ಯವಹಾರ-ಆರ್ಥಿಕ ವಿಚಾರಗಳಲ್ಲಿ ಅದಕ್ಕೊದಗುತ್ತಿರುವ ಸಂಕಷ್ಟ ಪರಂಪರೆಗಳು ಮೊದಲಾದುವನ್ನು ಮುಂದಿಟ್ಟಾಗುವಂತೆ ನಿವೇದಿಸಿದರು. ಭಾಷಾನುಸಾರ ಪ್ರಾಂತ ರಚನೆ ಎಂಬ ಪ್ರಮುಖವಾದ ಮಸೂದೆಯಲ್ಲಿ ಶ್ರೀ ಕಾರಂತರ [illegible]ಚನೆ ಒಂದಂಗವಾಗಿರುವುದರಿಂದ ನಿರಾತಂಕವಾಗಿ ಅದೂ ಸ್ವೀಕೃತವಾಯಿತು, ಎನ್ನುವ. ಮದ್ರಾಸು ಸರಕಾರದೊಳಗಿನ ಎಲ್ಲ ಪ್ರಾಂತಗಳ ರಾಷ್ಟ್ರಸಭಾ ಪ್ರತಿನಿಧಿಗಳೂ ಮಸೂದೆಯಂದನ್ನು ಸಮ್ಮತಿಸಿದ್ದಾರೆ ಎಂಬುದನ್ನು ಮರೆಯಬಾರದು.

೨

ಒಂದೇ ಒಂದು ವಾರದೊಳಗೆ ಮಲಬಾರಿನೊಳಗಣ ತ್ರಿಚೂರಿನಲ್ಲಿ ಶ್ರೀ ಕೆ. ಕೇಳಪ್ಪನ್ ಅವರ ಅಧ್ಯಕ್ಷತೆಯೊಳಗೆ "ಐಕ್ಯ ಕೇರಳ—ಕಲೋತ್ಸವವು" ಎಂಬುದು ನೆರವೇರಿತು. ಶ್ರೀ ಶ್ರೀ ಕೊಚ್ಚಿನ್ ಮಹಾರಾಜರೇ ಉತ್ಸವ ಸಮಾರಂಭದ ಉದ್ಘಾಟನವನ್ನೆಸಗಿದವರು. ಶ್ರೀ ಮಹಾರಾಜರು ತಮ್ಮ ಸೋದರ-ನರೇಂದ್ರ ಮಂಡಲಿಯವರನ್ನುದ್ದೇಶಿಸಿ, "ಪ್ರಕೃತ ಕಾಲದ ಸಂದರ್ಭಗಳನ್ನನುಸರಿಸಿ ನಾವೆಲ್ಲರೂ ವರ್ತಿಸತಕ್ಕದ್ದು. ಹಿಂದಿನ ಉತ್ತಮ ರಾಜಸತ್ತಾ ಪದ್ಧತಿ ಅತ್ಯುತ್ತಮವಾಗಿದ್ದರೂ ಅದನ್ನದು ನೆಲೆಗೊಳಿಸಲಾರದೆ ಹೋಯಿತು. ಆದರಿಂದ, ಇನ್ನಾದರೂ ಎಚ್ಚತ್ತು ನಾವು ಉತ್ತಮ ಪ್ರಜಾಸತ್ತೆಯನ್ನು ಅಂಗೀಕರಿಸಬೇಕು. ಪ್ರಜಾಸತ್ತಾತ್ಮಕ ಪದ್ಧತಿ ಇಷ್ಟರಲ್ಲೇ ರೂಪಿತವಾದ ನಮ್ಮ ಕೊಚ್ಚಿ ಸಂಸ್ಥಾನವು, ನ್ಯಾಯಬದ್ಧರಾದ ಪ್ರತಿನಿಧಿಗಳ ಮೂಲಕವಾಗಿ ನೂತನ ರಾಜ್ಯಭಾರ ಸಂಘಟನ ಸಮಿತಿಯಲ್ಲಿ ಒದಗೂಡುವುದು. ಮುಂದೆ ಈ ಐಕ್ಯಕೇರಳ ಸಮಿತಿಯ ಉದ್ದೇಶವು ನೆರವೇರಿದಲ್ಲಿ—ಬ್ರಿಟಿಶ್ ಮಲಬಾರು ಮಾತ್ರವೇ ಆಗಿರಲಿ ಅಥವಾ ಇತರ ಬ್ರಿಟಿಶ ಪ್ರಾಂತಗಳೂ ಸೇರಿರಲಿ. ಅವುಗಳೊಡನೆ ತನ್ನ ಸ್ವತ್ವವನ್ನು ಕಳೆದುಕೊಳ್ಳದೆ ಒಂದಾಗುವಲ್ಲಿ ನಮ್ಮ ಕೊಚ್ಚಿನ್ ಸಂಸ್ಥಾನವು ಹಿಂಜರಿಯದು" ಎಂದು ಮೊದಲಾಗಿ ಸೂಚಿಸಿ ಮಹಾರಾಜರು ತಮ್ಮ ಉದ್ಘಾಟನ ಭಾಷಣವನ್ನು ಪೂರೈಸಿದರು. ಆ ಮೇಲೆ ಶ್ರೀ ಕೆ. ಕೇಳಪ್ಪನ್ ಅವರು ತಮ್ಮ ಅಧ್ಯಕ್ಷ ಭಾಷಣವನ್ನು ಮಾಡಿದರು. ಭಾಷಣದ ಸಾರಾಂಶ ಹೀಗಿದೆ—"ಕೆಂಕಣ ಕಡಲೇ ಗಡಿಯಾದ ಕನ್ಯಾಕು[illegible]

ಮಾಹಾತ್ಮ್ಯ ಎಂಬ ಪುರಾಣಪ್ರಸಿದ್ಧವಾದ ಹೆಸರು ಪೂರ್ವದಲ್ಲಿ ಪರ್ವತಾವಳಿ ಪಶ್ಚಿಮದಲ್ಲಿ ಸಾಗರವೇ ಗಡಿಗಳಾದ ನಾಡಿದಕ್ಕೆ ಪ್ರಾಕೃತಿಕ ದೃಶ್ಯ—ವನೌಷಧಿ ಪ್ರಾತ-ಏಕರೀತಿಯ ಆಚಾರ ವ್ಯವಹಾರಗಳ ಜನಸಮಾಜ-ಇವುಗಳೆಲ್ಲವೂ ಈ ನಾಡು ಸಂಪೂರ್ಣವಾಗಿ ಕೇರಳವೆಂಬುದನ್ನು ಸೂಚಿಸುತ್ತಿದೆ. ಭಾಷಾವಿಷಯದಲ್ಲಿ, ಚಂದ್ರಗಿರಿಯಿಂದುತ್ತರಭಾಗದಲ್ಲಿ ಕನ್ನಡವಿದ್ದರೂ ಮೊದಲು 'ತುಳು'ವೆ ಅಲ್ಲಿಯ ಭಾಷೆಯಾಗಿತ್ತು. ಮಲೆಯಾಳ ಲಿಪಿಯನ್ನೆ ಅಲ್ಲಿ ಪೂರ್ವಕಾಲದಲ್ಲಿ ಉಪಯೋಗಿಸುತ್ತಿದ್ದುದು ಮಾತ್ರವಲ್ಲ. ಕನ್ನಡ ತುಳು ಕೊಡಗು ಮೊದಲಾದ ಭಾಷೆಗಳೆಲ್ಲ ಏಕಜಾತೀಯಗಳಾಗಿದ್ದು ಮಲಿಯಾಳಕ್ಕೂ ಅವಕ್ಕೂ ಅತಿರಿಕ್ತವಾದ ಜಾತೀಯತ ಸಂಬಂಧಗಳಿವೆ. ಭಾಷಾವಾರು ಪ್ರಾಂತ ರಚನೆಯನ್ನು ನಾವೇನೋ ಅಂಗೀಕರಿಸುತ್ತೇವೆ ಆದರೆ ಅದೊಂದೇ ಪ್ರಾಂತರಚನೆಯ ಪ್ರಮುಖ ಲಕ್ಷಣವಾಗಬಾರದು ಈ ಐಕ್ಯಕೇರಳದಲ್ಲಿ ಕೊಡಗು—ಗುಡಲೂರು—ನೀಲಗಿರಿಗಳೂ ಸೇರಬೇಕು." ಎಂಬುದೇ ಅವರ ಭಾಷಣ ಸಾರ.

೩

ಶ್ರೀ ಕೆ. ಕೇಳಪ್ಪನ್ ಅವರು ತಮ್ಮ ಭಾಷಣವನ್ನು ಬಲು ದೀರ್ಘವಾಗಿ ಬೆಳೆಯಿಸಿದ್ದರು. ಅದನ್ನೆಲ್ಲ ಈ ಕೂಡಲೆ ವಾಚಕ ಮಹನೀಯರು ಅವಗಾಹಿಸಿರಬಹುದಾದುದರಿಂದ, ನಾನಿಲ್ಲಿ ಪುನಃ ಪಾರಾಯಣ ಮಾಡಬೇಕಾಗಿಲ್ಲ; ಅದು ಸಮಂಜಸವೂ ಅಲ್ಲ. ಮ. ರ. ದಿನಾಂಕ (ತಾ ೨೮-೪-೪೭) 'ಹಿಂದೂ'ಪತ್ರಿಕೆ ತನ್ನ ಅಗ್ರಲೇಖನದಲ್ಲಿ ಶ್ರೀ ಕೇಳಪ್ಪನವರ ಭಾಷಣವನ್ನು ಸಂಪೂರ್ಣವಾಗಿ ಮಾತ್ರವಲ್ಲ- ಮುಷ್ಟಿಪ್ಟು ಕಟ್ಟಾಗಿ ಉದ್ಧರಿಸಿದೆ. ಹೊರಗಿನ ಹಿಂದೂ ಪತ್ರಿಕೆ ಏನೇ ಹೇಳಲಿ; ನಮ್ಮ ದಕ್ಷಿಣೋತ್ತರ ಕನ್ನಡ ಜಿಲ್ಹೆಗಳಾಗಲಿ, ಕೊಡಗು ನೀಲಗಿರಿ ಮೊದಲಾದ ಪ್ರಾಂತೀಯರಾಗಲಿ, ಐಕ್ಯಕೇರಳ ರೂಪದ ಆತಿಕ್ರಮವನ್ನೆಂದೂ ಸೈಸಲಾರರು. "ಕನ್ಯಾಕುಮಾರಿಯಿಂದ ಗೋಕರ್ಣಪರ್ಯಂತದ ಈ ಪಡುಕರಾವಳಿಯ ಮಲಯಾಳ ಭಾಷೆ ಬೇರೆ ಯಾವ ಪ್ರಾಂತಗಳಲ್ಲಿಯೂ ಇಲ್ಲ; ಆದರೆ ಈ ಐಕ್ಯ ಕೇರಳದಲ್ಲಿ ಹತ್ತರೊಳಗೆ ಒಂಬತ್ತು ಮಂದಿ ಮಲಯಾಳವನ್ನೇ ಆಡುತ್ತಿದೆ" ಎಂಬುದು ಹಿಂದೂ ಪತ್ರಿಕೆಯ ಹೇಳಿಕೆ. ಐಕ್ಯ ಕೇರಳ ಪ್ರಚಾರವನ್ನು ಪ್ರೋತ್ಸಾಹಿಸುವ ಸಂದರ್ಭದಲ್ಲಿ "ಹಿಂದೂ" ಪತ್ರಿಕೆ, "ಪಶ್ಚಿಮ ಕರಾವಳಿಯಲ್ಲಿ ತಿರುವನಂತಪುರದ ಕನ್ಯಾಕುಮಾರಿಯಿಂದ, ದಕ್ಷಿಣ ಕನ್ನಡದ ಗೋಕರ್ಣ ವರೆಗಿನ (Between Gokarnam in South Kanara...)" ಎಂದೂ ಹೇಳಿದಿಹುದು? ಗೋಕರ್ಣ ಮುಂಬಯಿ ಪ್ರಾಂತದ ಉತ್ತರ ಕನ್ನಡದ ಬಡಗಣ ಗಡಿ, ಎಂದು ಇನ್ನಾದರೂ ತಿದ್ದಿಕೊಂಡರೆ ಒಳ್ಳೆಯದು. ಇದನ್ನವಗಾಹಿಸುವಲ್ಲಿ 'ಓತಪ್ರೋತ-ಕಟಿ ಪ್ರಯಾಣ' ಎಂಬ ಗಾದೆಯೊಳಗೆ ಅಡಕವಾದ ಚಿಕ್ಕ ಕತೆಯೊಂದು ನೆನಪಾಗುತ್ತದೆ:

> ಗಣಿತಶಾಸ್ತ್ರ ಪಾರಂಗತನಾದೊಬ್ಬನು ದಾರಿ ನಡೆಯುತ್ತಾ ಒಂದು ಹೊಳೆಯ ತೀರಕ್ಕೆ ಬಂದನು. ತೀರದಲ್ಲಿ ದೋಣಿ ಇದ್ದಿಲ್ಲ. ಅವನಿಗೆ ಕೂಡಲೆ ಆಚೆಯ ದಡಕ್ಕೆ ಹೋಗಬೇಕಾಗಿತ್ತು. ಮೊಳಗಾಲು ಮುಳುಗುವಷ್ಟು ದೂರಕ್ಕೆ ನೀರಿಗಿಳಿದು, ಊಹಾಪೋಹವಾಗಿ ಅತ್ತಿತ್ತಣ ತೀರಗಳ, ಮತ್ತು ಒಂದೆರಡಾಳಿನಷ್ಟು ಆಳವಾದ ಹೊಳೆಯ ಮಧ್ಯಭಾಗದ ನೀರಿನ ಪ್ರಮಾಣಗಳನ್ನು ಗುಣಿಸಿ ಭಾಗಿಸಿ ಓತಪ್ರೋತವಾಗಿ ಸರಾಸರಿಯನ್ನು ನಿರ್ಧರಿಸಿದನು. ಬಂದ ಗಣಿತ ಫಲಿತವೆಂದರೆ ನೀರು ಸರಾಸರಿ ಸೊಂಟದವರೆಗಾಗುತ್ತಿದೆ, ಅಥವಾ ಕಟಿ ಪ್ರಮಾಣವಿದೆ ಎಂಬುದು. ಹಾಗೆ ನಿರ್ಧರಿಸಿದುದಷ್ಟೇ ಅಲ್ಲ, ನಿರ್ಧಾರದಂತೆ ಹೊಳೆಗಿಳಿದು ಹೋದ ಆ ಪ್ರಯಾಣಿಕನು ಮುಳುಗಿಯೇ ಹೋದನಂತೆ.

ಆ ಕಡೆಯ ಪರಿಣಾಮವನ್ನು ಸೂಚಿಸಿದುದರ ಕಾರಣವಿಷ್ಟೇ. ಅಲ್ಲಿ ಹೊಳೆ ದಾಟಿದವನೇ ಆ ಸಿದ್ಧಾಂತವನ್ನು ಮಾಡಿಕೊಂಡು ಮುಳುಗಿದುದು. ಇಲ್ಲಿ ಹಾಗಲ್ಲ; ಇತರರ ಸಿದ್ಧಾಂತಕ್ಕೆ ಸಿಲುಕಿದರೆ ಕನ್ನಡಿಗರು ಮುಳುಗಬೇಕು.

ಈ 'ಓತಪ್ರೋತ ಕಟಿ ಪ್ರಮಾಣ' ಸಿದ್ಧಾಂತಕ್ಕೆ ಕನ್ನಡಿಗರೇ ಮೊದಲಾದವರು ಖಂಡಿತವಾಗಿಯೂ ಸಮ್ಮತಿಸುವಂತಿಲ್ಲ. ಬೇಕಾದರೆ ದಕ್ಷಿಣ ಕನ್ನಡದ ತೆಂಕಣ ಗಡಿಯಿಂದ ಉತ್ತರ ಕನ್ನಡ ಜಿಲ್ಹೆಯ ಬಡಗಣ ಗಡಿವರೆಗಿನ ಗೋಕರ್ಣ—ಕಾರವಾರದ ವರೆಗಿನ ಭಾಷಾವಾರು ಜನಸಂಖ್ಯೆಯನ್ನು ಪರಾಂಬರಿಸಲಿ. ಈ ಕನ್ನಡನಾಡಿನೊಳಗೆ ಸುಮಾರು ಮೂವತ್ತು ಲಕ್ಷ ಕಡಿಮೆಯಿಲ್ಲದ ಜನಸಂಖ್ಯೆ ಇದೆ. "ಹಿಂದೂ" ಪತ್ರಿಕೆಯ ಘೋಷಣೆಗೆ ಬಡಲಾಗಿ ಹತ್ತರೊಳಗೆ ಒಬ್ಬಿಬ್ಬರಾದರೂ ಈ ಭಾಗದೊಳಗೆ ಮಲಯಾಳ ನುಡಿಯುವರಿದ್ದಾರೋ ಎಂಬುದನ್ನು ನಿಷ್ಪಕ್ಷಪಾತಿ ಮಧ್ಯಸ್ಥರು ವಿವೇಚಿಸಲಿ. ಈಗಣ ದಕ್ಷಿಣಕನ್ನಡದ ಕಾಸರಗೋಡು ತಾಲೂಕಿನ ಚಂದ್ರಗಿರಿ ನದಿಯಿಂದ ತೆಂಕಣ ಪಯ್ಯನ್ನೂರು ಪೇಂಟಲ್ಲಿ ವರೆಗಿನ ಭಾಗವು ಕನ್ನಡ-ಮಲಯಾಳಗಳ ಗಡಿನಾಡಾದುದರಿಂದ ಆ ಎಡೆಯಲ್ಲಿ ಮಾತ್ರ ಮಲಯಾಳ ಜನಸಂಖ್ಯೆ ಕನ್ನಡಿಗರಿಂದ ಒಂದಿಷ್ಟು ಅಧಿಕವಿರಬಹುದು. ಬೇಕಾದರೆ ಆ ಭಾಗ ಮಾತ್ರ ಕನ್ನಡವೋ ಮಲಯಾಳವೋ ಎಂಬುದನ್ನು ಮಧ್ಯಸ್ಥರು ನಿರ್ಣಯಿಸಲಿ. ಇತರರಿಗೆ ಉಪದೇಶಿಸುವ ಹಿಂದೂ ಪತ್ರಿಕೆ, ಮೊದಲು ತಾನೇ ಅದನ್ನು ಆಚರಿಸಿ ತೋರಿಸಬೇಕಾಗಿತ್ತು. ಪಡುಕರಾವಳಿಯಂತೆ ಪೂರ್ವಕರಾವಳಿಯೂ ಇದೆಯಷ್ಟೆ. ಅದೂ ಅತಿ ದೀರ್ಘವಾಗಿ ಏಕ ಸಂಸ್ಕೃತಿ—ಪ್ರಾಕೃತಿಕ ದೃಶ್ಯದ ಏಕರೂಪಾದಿ ಗುಣಗಳಿಂದ ಕೂಡಿದುದಾಗಿಯೇ ಇದೆ. ಅದರೊಳಗೆ ಮದ್ರಾಸಿನ ಅರ್ಧಭಾಗವು ತಮ್ಮ ಪ್ರಾಂತಕ್ಕೆ ಸೇರಬೇಕೆಂದು ನಮ್ಮ ಆಂಧ್ರಬಂಧುಗಳು ಬಹುಕಾಲದಿಂದ ವಾದಿಸುತ್ತಲೇ ಇದ್ದಾರೆ. ಮೊದಲು ಆ ತಮ್ಮೊಳಗಿನ ವಾದವನ್ನು ನಿರ್ಣಯಿಸಿ ಕಾರ್ಯರೂಪದಲ್ಲಿ ಆಚರಿಸುವಂತೆ ಮಾಡಿ ಆ ಮೇಲೆ ನಮ್ಮ ಕೇರಳ—ಕನ್ನಡಗಳ ಐಕ್ಯವನ್ನು ಬೋಧಿಸಲು ಕೈಯಿಕ್ಕಬೇಕಾಗಿತ್ತು.

ಪುರಾತನಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಮಲಯಾಳ ಲಿಪಿಯನ್ನೇ ಉಪಯೋಗಿಸುತ್ತಿದ್ದರೆಂದು ಶ್ರೀ ಕೇಳಪ್ಪನ್ ಅವರ ಹೇಳಿಕೆ. ಅದು ಮಲಯಾಳ ಲಿಪಿ ಅಲ್ಲವೇ ಅಲ್ಲ, ತುಳು ಲಿಪಿ. ಈ ಲೇಖಕನು ತುಳು—ಮಲಯಾಳ ಲಿಪಿಗಳೆರಡನ್ನೂ ಬಲ್ಲವನು ಎಂಬುದನ್ನು ವಾಚಕರಿಗೆ ನಿವೇದಿಸುತ್ತೇನೆ. ಮಲಯಾಳ ತಮಿಳು ಲಿಪಿಗಳೂ, ಆಂಧ್ರ ಕರ್ನಾಟಕ ಲಿಪಿಗಳೂ, ಮೇಲಿಂದ ಮೇಲೆ ನೋಡುವವರಿಗೆ ಒಂದೇ ರೀತಿಯಲ್ಲಿ ತೋರುತ್ತಿವೆ. ಅಷ್ಟರಿಂದ "ಇದು ತಮಿಳು ಲಿಪಿ, ಇದು ಆಂಧ್ರಲಿಪಿ" ಎಂದು ಸಿದ್ಧಾಂತಿಸಬಹುದೇ? ಅದೂ ಹಾಗಿರಲಿ. ಅತಿ ಪೂರ್ವಕಾಲದಲ್ಲಿ ಉತ್ತರದಿಂದ ಕಳಭ್ರರು ಮತ್ತು ತುಳುವ್ರರು ಎಂಬ ರಾಜವಂಶೀಯರು ಕೇರಳೀಯರಾದ ತಮ್ಮ ಇಚ್ಛಾನುಸಾರವಾಗಿಯೆ ದಕ್ಷಿಣದ ಕನ್ಯಾಕುಮಾರಿ ಪರ್ಯಂತ ಆಳಿದ್ದರು ಎಂಬುದನ್ನು ಚಾರಿತ್ರಿಕಾಧಾರದ ಮೇಲೆ ಅಧ್ಯಕ್ಷರು ಹೇಳುತ್ತಾರೆ. ಆ 'ಕಳಭ್ರ'ರೆಂದರೆ ಯಾರು? ಎಂಬುದನ್ನು ವಿದ್ವಾಂಸರಿನ್ನೂ ನಿರ್ಧರಿಸಿಲ್ಲವಾಗಿ ತೋರುತ್ತದೆ. ಹೇಗೂ ಇರಲಿ. 'ಕಳಭ್ರ'ರೆಂದರೆ [illegible] ಕನ್ನಡಿಗರಾಗಿದ್ದ [illegible] ಬರು. ತುಳುವ್ರರೆಂದರೆ ತುಳುವರಾಜರೆಂಬವ[illegible]

ನಾವು ಹಿಂಸೆಯನ್ನು ಖಂಡಿಸುತ್ತೇವೆ............

ಇತ್ತೀಚೆಗೆ ಸಂಭವಿಸಿದ ಹಿಂಸೆ ಮತ್ತು ಪುಂಡಾಟಿಕೆಯ ಕೃತಿಗಳಿಂದ ನಮಗೆ ಅತ್ಯಂತ ಖೇದವಾಗಿದೆ. ಈ ಕೃತಿಗಳೆನ್ನೆಸಗಿದವರೂ ಇವುಗಳಿಗೆ ಬಲಿಯಾದವರೂ ಯಾರೇ ಇರಲಿ, ಇವುಗಳಿಂದ ಭಾರತದ ಅಮಲ ಕೀರ್ತಿಗೆ ಅಳಿಸಲಾಗದ ಕಲಂಕ ವುಂಟಾಗಿದೆ ಮತ್ತು ನಿರಪರಾಧಿ ಜನತೆಗೆ ಮಿತಿಯಿಲ್ಲದ ಹಾನಿಯಾಗಿದೆ.

ರಾಜಕೀಯ ಗುರಿಗಳನ್ನು ಸಾವುನೋವುಗಳಿಂದ ಸಾಧಿಸುವದನ್ನು ನಾವು ತ್ರಿಕಾಲದಲ್ಲಿಯೂ ಖಂಡಿಸುತ್ತೇವೆ. ಯಾವತ್ತು ಜಾತಿ, ಮತ, ಪಂಥಗಳು ಹಿಂಸೆ ಮತ್ತು ಪುಂಡಾಟಿಕೆಯ ಕೃತಿಗಳಿಂದ ದೂರವಿರಬೇಕೆಂದೂ ಮತ್ತು ಇಂಥ ಕೃತಿಗಳಿಗೆ ಪುಟ ಕೊಡುವ ಭಾಷಣ ಮತ್ತು ಲೇಖಗಳನ್ನು ತ್ಯಜಿಸಬೇಕೆಂದೂ ನಿರ್ದೇಶಿಸುತ್ತೇವೆ.

M. A. Jinnah 15/4/47   [illegible]   M. K. Gandhi

(ಎಂ. ಎ. ಜಿನ್ನಾ)   (ಮೋ. ಕ. ಗಾಂಧಿ)

ಸರಸ್ವತಿಯ ಮಂದಿರದಲ್ಲಿ ಅಸ್ಪೃಶ್ಯತೆಗೆಡೆಯಿಲ್ಲ

ಸಾಹಿತ್ಯದಲ್ಲಿ ಕಚ್ಚಾಟ ಹೋಗಿ ಅನಂತಮುಖವಾಗಿ ಅಭಿವೃದ್ಧಿಯಾಗಲಿ— ಅನುಕರಣ ಪ್ರಿಯತೆ ಬೇಕು
೩೦ನೇ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರ ಭಾಷಣ

“ಕನ್ನಡ ಸಾಹಿತ್ಯವು ಮಹೋನ್ನತವಾಗಿ ಬಾಳುವ ಮುಂದಿನ ಮಂಗಳದ ದಿನಗಳಿಗೆ ಇಂದು ನಾಂದಿಯು ಪ್ರಾರಂಭವಾಗಬೇಕು. ಮುಂದೆ ಸಿದ್ಧವಾಗಬೇಕಾದ ಕನ್ನಡ ಸಾಹಿತ್ಯ ಸೌಧಕ್ಕೆ ಇಂದು ತಳಹದಿ ಬೀಳಬೇಕು. ಹಿರಿಯರ ಕಾಲ ಸಂದಿತು. ಕಿರಿಯರು ಮುಂದೆ ಬರಬೇಕೆಂದು ಹರಪನಹಳ್ಳಿಯಲ್ಲಿ ಸೇರಿದ ೩೦ನೇ ಕನ್ನಡ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಸ್ಥಾನದಿಂದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ತಮ್ಮ ಸುದೀರ್ಘ ಗಂಭೀರ ಭಾಷಣಮಾಡಿದರು.

ಭೂಮಾನುಭೂತಿ

ಮುಂದಿನ ವರ್ಷದಿಂದ ಭರತಖಂಡದ ಭಾಗ್ಯ ಶಕ್ತಿಯು ಮೇಲಕ್ಕೇರುವದಾಗಿದೆ. ಭರತಖಂಡದ ಇತರಪ್ರಾಂತಗಳೊಡನೆ ಕನ್ನಡ ನಾಡಿನ ಅಭ್ಯುದಯವನ್ನು ನಾವು ಯಥಾಶಕ್ತಿಯಾಗಿ ಸಾಧಿಸಬೇಕಾಗಿದೆ. ಇದುವರೆಗಿನ ನಮ್ಮ ಹೊಂಗನಸುಗಳೆಲ್ಲ ಸವಿನನಸುಗಳಾಗುವ ಸನ್ನಿವೇಶವು ಒದಗುವುದಾಗಿದೆ. ಮುಂದಿನ ಅಗಾಧವಾದ ಕಾರ್ಯರಂಗಕ್ಕೆ ತಕ್ಕ ಅಪರಿಮಿತವಾದ ಪ್ರಯತ್ನಗಳೇ ನಡೆಯಬೇಕು. ಅಲ್ಪದಲ್ಲಿ ಸುಖವನ್ನು ಕಾಣುವ ಸಣ್ಣತನವು ಹೋಗಿ ಭಾರೀ ಭಾರೀ ಕಲ್ಪನೆಗಳನ್ನಿಟ್ಟುಕೊಂಡು ದೊಡ್ಡವರಲ್ಲಿ ಸಂತೋಷವನ್ನು ಕಾಣುವ ದೊಡ್ಡತನವು ಬಲಿಯಬೇಕು.

ಸಮಸ್ತ ವಿಧಗಳಲ್ಲಿ ದೇಶೋನ್ನತಿ ಸಾಧನೆ ಮಾಡುವದಕ್ಕೂ ಮುಖ್ಯವಾದ ಸಾಧನವು ನಾಡಿನ ಮೇಲಿನ ಮಮತೆ. ಅದೇ ನಮ್ಮಲ್ಲಿ ಇನ್ನೂ ತಕ್ಕಷ್ಟು ಬಲಿತಿಲ್ಲ. ತಮಿಳ ನಾಡಿನ ನಮ್ಮ ಸೋದರರು ಆಂಧ್ರರಾದ ಶ್ರೀ ತ್ಯಾಗರಾಜ ಜಯಂತಿಯನ್ನು ನಡೆಯಿಸುವಷ್ಟು ಉತ್ಸಾಹ ಸಂಭ್ರಮಗಳಿಂದ ಕನ್ನಡಿಗರಾದ ನಾವು ಕರ್ನಾಟಕ ಸಂಗೀತ ಪಿತಾಮಹರಾದ ಶ್ರೀ ಪುರಂದರ ದಾಸರ ಜಯಂತಿಯನ್ನು ನಡೆಯಿಸುತ್ತಿಲ್ಲವೆಂಬುದು ಇದಕ್ಕೊಂದು ನಿದರ್ಶನ. ಅಂಥ ಉತ್ಸವಕ್ಕೆ ಹೋಗುವುದೇ ಒಂದು ಪುಣ್ಯವೆಂಬ ಭಾವನೆಯೇ ನಮ್ಮಲ್ಲಿ ಬಲವಾಗಿಲ್ಲ. ಇದು ನಮ್ಮ ಕನ್ನಡತನ!

ಕನ್ನಡ, ಇಂಗ್ಲೀಷ, ಹಿಂದೀಗಳ ಮಹತ್ವವನ್ನು ತುಲನಾತ್ಮಕವಾಗಿ ವಿಚಾರಿಸುತ್ತ ಅಧ್ಯಕ್ಷರು ಹೇಳಿದ್ದು:

ಮುಂದೆ ಹಿಂದಿಯೇನಾದರೂ ರಾಷ್ಟ್ರಭಾಷೆಯಾದರೆ ಕನ್ನಡಿಗರು ಹಿಂದಿಯನ್ನು ಕಲಿಯಬೇಕೆ? ಎಂಬ ಪ್ರಶ್ನೆಯು ಬರುವುದು ಸಹಜವಾಗಿಯೇ ಇದೆ. ಕನ್ನಡಿಗರು ಮೊದಲು ಗಮನ ಕೊಡಬೇಕಾದುದು ಕನ್ನಡ ಭಾಷೆಗೆ; ಅದಕ್ಕೆ ಎರಡನೆಯದಾಗಿ, ಸಂಸ್ಕೃತ ಮತ್ತು ಇಂಗ್ಲೀಷ ಭಾಷೆಗಳಿಗೆ. ಇಷ್ಟೂ ಆದ ಮೇಲೆ ತಕ್ಕಷ್ಟು ವ್ಯವಧಾನವೂ ಸಾಮರ್ಥ್ಯವೂ ಇರುವವರು ಹಿಂದಿಯನ್ನು ಅವಶ್ಯವಾಗಿ ಕಲಿಯಬಹುದು.

ಏಕೀಕರಣ ಸಾಧನ

ಇದು ಸಾಹಿತ್ಯ ಸಮ್ಮೇಳನವಾದ ಕಾರಣ, ರಾಜಕೀಯ ವಿಚಾರಗಳನ್ನು ಕುರಿತು ಚರ್ಚಿಸುವುದು ಇಲ್ಲಿ ಅಪ್ರಕೃತವೇ ಸರಿ. ರಾಜಕೀಯ ವಿಚಾರಗಳಲ್ಲಿ ಪರಿಣತರಾದವರು ಕೂಡ ಕನ್ನಡ ನಾಡಿನ ಏಕೀಕರಣ ವಿಚಾರವಾಗಿ ಈಗ ನಿರ್ದಿಷ್ಟವಾಗಿ ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲ. ಅದನ್ನು ನಿರ್ಧರಿಸಬಲ್ಲವರ ಮನಸ್ಸೂ ಮತ್ತು ಅಧಿಕಾರ ಪಾಣಿಯಿಂದ ಅದರ ವಿಚಾರವಾಗಿ ನುಡಿಯಬಲ್ಲವರ ಮನಸ್ಸೂ ಸದ್ಯಕ್ಕೆ ಭರತಖಂಡದ ಮುಂದಿನ ರಾಜ್ಯಾಂಗ ರಚನೆಯಲ್ಲಿ ಮಗ್ನವಾಗಿವೆ. ಭಾಷಾನುಗುಣವಾಗಿ ಪ್ರಾಂತಗಳನ್ನು ವಿಂಗಡಿಸಬೇಕೆಂದು ಮದರಾಸು ಪ್ರಾಂತ ಶಾಸನ ಸಭೆಯಿಂದ ನಿರ್ಣಯವೂ ಭರತಖಂಡದ ರಾಜ್ಯಾಂಗ ರಚನಾ ಸಭೆಗೆ ಹೋಗುವದಾಗಿದೆ. ಇದೊಂದು ಶುಭಸೂಚನೆ. ಈಚೆಗೆ ಐಕ್ಯ ಕೇರಳ ಚಳವಳಿಯು ಪ್ರಾರಂಭವಾಗಿದೆ. ಅಖಂಡ ಕೇರಳ ಪ್ರಾಂತವೊಂದು ಏರ್ಪಡಬೇಕೆಂದೂ ಅದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯೂ ಕೊಡಗೂ ನೀಲಗಿರಿಯೂ ಸೇರಬೇಕೆಂದೂ ವಾದವೆದ್ದಿದೆ. ಈ ಮೂರು ಕನ್ನಡ ಪ್ರಾಂತಗಳೂ ಹಿಂದೆ ಕೇರಳಕ್ಕೆ ಸೇರಿದ್ದುವಂತೆ; ಆದಕಾರಣ, ಈಗ ಅವು ಮತ್ತೆ ಕೇರಳ ಪ್ರಾಂತಕ್ಕೆ ಸೇರಬೇಕಂತೆ. ಕನ್ನಡಿಗರಾಗಲಿ, ಇತರರಾಗಲಿ ಕೇವಲ ಭಾಷೆಯೊಂದರ ಆಧಾರದ ಮೇಲಿಂದ ಮಾತ್ರವೇ ಪ್ರತ್ಯೇಕ ಪ್ರಾಂತಗಳನ್ನು ಬಯಸಬಾರದಂತೆ. ಪ್ರತ್ಯೇಕ ಪ್ರಾಂತಗಳ ರಚನೆಯಲ್ಲಿ ಸಂಸ್ಕೃತಿಯು [illegible] ಪರ್ಯಾಲೋಚನೆಗೆ [illegible] ಸೇರಿದ್ದ ಕೇರಳದ ಭಾಗಗಳನ್ನು ಮೈಸೂರ ಸಂಸ್ಥಾನಕ್ಕೆ ಬಿಟ್ಟುಕೊಡಬೇಕೆ? ಕನ್ನಡಿಗರು ಈಗಲಾದರೂ ಒಕ್ಕಟ್ಟಿನಿಂದ ವರ್ತಿಸಿ, ಮದರಾಸು ಶಾಸನ ಸಭೆಯವರು ಭಾರತೀಯ ರಾಜ್ಯಾಂಗ ರಚನಾ ಸಭೆಗೆ ಕಳುಹಿಸುವ ಸಲಹೆಗನುಸಾರವಾಗಿ ಭಾಷೆಗಳಿಗನುಗುಣವಾಗಿ ಪ್ರಾಂತಗಳೇರ್ಪಡುವಲ್ಲಿ ಕನ್ನಡ ಪ್ರಾಂತಕ್ಕೆ ಅನ್ಯಾಯವಾಗದಂತೆ ಸರ್ವಪ್ರಯತ್ನಗಳನ್ನೂ ಮಾಡಬೇಕು.

ಸಾರಸ್ವತ ಪ್ರಪಂಚದಲ್ಲಿ

ಸರಸ್ವತಿಯ ದೇವಾಲಯದಲ್ಲಿ ಅಸ್ಪೃಶ್ಯತೆಗೆ ಅವಕಾಶವಿಲ್ಲ. ಹೆಂಗಸು ಗಂಡಸೆಂಬ ಅಥವಾ ಮುದುಕರು ಯುವಕರೆಂಬ ಭೇದವಿಲ್ಲ. ಧನಿಕರು ದರಿದ್ರರೆಂಬ ಕೋಟಲೆಯಿಲ್ಲ, ವೀಣಾಪುಸ್ತಕಧಾರಿಣಿಯಾದ ವಾಗ್ದೇವತೆಗೆ ಪುಷ್ಪಾಂಜಲಿಯನ್ನರ್ಪಿಸಲು ಭಕ್ತರೆಲ್ಲರಿಗೂ ಸಮಾನವಾದ ಅಧಿಕಾರವುಂಟು. ಸಂಸ್ಕೃತಿದೇವಿಯ ಕೈಯಲ್ಲಿರುವುದು ಬೃಹತೀವೀಣೆ. ಅದರಲ್ಲಿರುವ ಮೆಟ್ಟಲುಗಳಿಗೆ ಲೆಕ್ಕವಿಲ್ಲ. ಅದರಲ್ಲಿ ನುಡಿಯುವ ಸ್ವರಗಳು ಅನಂತ. ದೇವಿ ಸರಸ್ವತಿಯು ನುಡಿಸುವ ರಾಗಗಳ ಸಂಖ್ಯೆಗಾಗಲಿ ವ್ಯಾಪ್ತಿಗಾಗಲಿ ಪರಿಮಿತಿಯೇ ಇಲ್ಲ. ಸರಸ್ವತೀ ದೇವಿಯು ಲಾವಣ್ಯಮಯಿ; ಚಿನ್ಮಯಿ; ಆನಂದಮಯಿ; ಮಂಗಳಮಯಿ; ಭಕ್ತರೆಲ್ಲರ ಹೃದಯಗಳಲ್ಲಿ ಪ್ರತಿಬಿಂಬಿಸಿ ಅನುಗ್ರಹಿಸುವ ವಾತ್ಸಲ್ಯಮಯಿಯಾದ ವಿಶ್ವಮಾತೆ. ಭಕ್ತರೆಲ್ಲರ ಹೃದಯಗಳೂ ತಾಯಿ ಸರಸ್ವತಿಯ ಮೇಲಿನ ಭಕ್ತಿಯೆಂಬ ಸುವರ್ಣ ಸೂತ್ರಕ್ಕೆ ಪೋಣಿಸಿರುವ ಜೀವರತ್ನಗಳು; ಎಷ್ಟು ಜೀವರತ್ನಗಳನ್ನಾದರೂ ಧರಿಸಬಲ್ಲಷ್ಟು ದೊಡ್ಡದು, ಆ ಸುವರ್ಣ ಸೂತ್ರ. ಆ ಜೀವರತ್ನಗಳನ್ನು ನಿರಂತರವೂ ಬೆಳಗಿಸುವುದು, ದೇವಿಯ ಮಂದಹಾಸ.

ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರೇ ಕೆಲವು ಮಂದಿ; ಆ ಕೆಲವು ಮಂದಿಗಳಲ್ಲಿ ವೈಮನಸ್ಸುಂಟಾದರೆ ಉಭಯತರಿಗೂ ಚಿತ್ತಕ್ಷೋಭೆ, ಒಟ್ಟು ನಾಡಿಗೇ ದೊಡ್ಡ ನಷ್ಟ— ಎಂಬುದು ಮನದಟ್ಟಾಗುವಂತೆ ಮಾಡುವುದು ನನ್ನ ಉದ್ದೇಶ. ಮೊದಲನೆಯದಾಗಿ, ನಾಡಿನ ಹಿರಿಯರಾಗಿದ್ದು ನಮಗೆಲ್ಲರಿಗೂ ಪೂಜ್ಯರಾಗಿದ್ದವರಲ್ಲಿ ಹುಟ್ಟಿದ “ನ—ಣ” ವಾದದ ಅನ್ಯಾಯವಾದ ಹೋರಾಟದ ದೆಸೆಯಿಂದ ಅವರಿಗೂ ಇತರರಿಗೂ ಎಷ್ಟು ಬಗೆಗಳಲ್ಲಿ ಚಿತ್ತಕ್ಷೋಭೆಯಾಯಿತು! ಹಿರಿಯರು ಹಾಗೆ ಹೋರಾಡುತ್ತಿರುವಲ್ಲಿ ಕಿರಿಯರ ಸ್ಥಿತಿಯು, ತಾಯಿತಂದೆಗಳು ಜಗಳಾಡುತ್ತಿರುವಾಗಿನ ಮಕ್ಕಳ ಸ್ಥಿತಿಯಂತಾಯಿತು. ಕೊನೆಗೆ ಅದರಿಂದ ಆದ ಪರಿಣಾಮವಾದರೂ ಏನು? ನಾನು ಗೌರವದಿಂದಲೂ ವಿಷಾದದಿಂದಲೂ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಎರಡನೆಯದಾಗಿ, ಪ್ರಗತಿಶೀಲರು ಸಂಪ್ರದಾಯ ಪ್ರೇಮಿಗಳು— ಎಂಬ ಭೇದವು ಹುಟ್ಟಿ, ಪರಸ್ಪರ ದೂಷಣೆಯಿಂದ ವೃದ್ಧಿಯಾಗುತ್ತಿರುವ ಚಿತ್ತ ಕ್ಷೋಭೆಯಿಂದ ಆಗುವ ಪರಿಣಾಮವಾದರೂ ಅಷ್ಟೇ. ಇದು ಬಿದಿರನ್ನು ಕೆತ್ತಿದಂತೆ. ಸರಿಯಾಗಿ ರೂಪಿಸಿದರೆ ಕೇಳಲಾಗುವ ಬಿದಿರನ್ನು ಮನಸ್ಸು ಬಂದಂತೆ ಕೆತ್ತಿದರೆ ಅದನ್ನು ಹಾಗೆ ಕೆತ್ತಿದಷ್ಟೂ ಸಿಬಿರಾಗಿ ಪರಿಣಮಿಸುತ್ತದೆ. ಅದರಿಂದ ಒಬ್ಬರಿಗೂ ಸುಖವಿಲ್ಲ. ನಾನು ಈ ಮಾತುಗಳನ್ನು ಕೂಡ ಗೌರವದಿಂದಲೇ ಹೇಳುತ್ತಿದ್ದೇನೆ. ನಾನು ಪಕ್ಷಪ್ರತಿಪಕ್ಷಗಳನ್ನು ಹಿಡಿದು ವಾದಿಸಹೊರಟಿಲ್ಲ. ಮತಭೇದ ಮತಿಭೇದಗಳು ಈ ಪ್ರಪಂಚದಲ್ಲಿರುವ ವರೆಗೂ ಅಭಿಪ್ರಾಯ ಭೇದಗಳು ಹುಟ್ಟದೆ ತಪ್ಪುವಂತಿಲ್ಲ.

ಭಿನ್ನಾಭಿಪ್ರಾಯ ಕಾರಣಗಳನ್ನು ವಿವೇಚನೆಯಿಂದ ಹೋಗಲಾಡಿಸಿಕೊಂಡು ಅಥವಾ ಸಮನ್ವಯಮಾಡಿ ಸರಿತೂಗಿಸಿಕೊಂಡು ಮಧುರ ಬಾಂಧವ್ಯದಿಂದ ಮುಂದರಿಯಬೇಕು.

ನಾನು ಈ ವಿಚಾರವನ್ನೇ ಎತ್ತಬೇಕೆಂದಿರಲಿಲ್ಲ. ಆದರೆ ಸಂಪ್ರದಾಯ ಪ್ರೇಮಿಗಳೆಂದು ಕೊಂಡಿರುವ ಕೆಲವರೂ ಪ್ರಗತಿಶೀಲರೆಂದು ಕೊಂಡಿರುವ ಕೆಲವರೂ ಹೋದೆಡೆಗಳಲ್ಲೆಲ್ಲ ಒಬ್ಬರ ಹಿಂದೆ ಮತ್ತೊಬ್ಬರು (ಪರಸ್ಪರವಾಗಿ [illegible] ತಾವು ಅನ್ಯಾಯವಾಗಿ [illegible] ರೆಂದು ಈಗ್ಗೆ ಕೆಲವು ದಿನಗಳ ಹಿಂದೆ ಕೇಳಿ ಮನನೊಂದು ಇದನ್ನು ಪ್ರಸ್ತಾವಿಸುತ್ತಿದ್ದೇನೆ.

ಅನುಸರಣೆಯಲ್ಲಿ ಅವಸರ ಬೇಡ

“ನಾವು ಸಂಪ್ರದಾಯ ಪ್ರೇಮಿಗಳು. ಮಾರ್ಪಾಟಾಗಳೇನೂ ಬೇಡ. ಇಂತ ನಿಲುವಿನಲ್ಲೇ ನಾವಿರುವದೇ ಸರಿ” ಎನ್ನುವದೆಷ್ಟು ಅನುಚಿತವೋ, ಇಂಗ್ಲಂಡ ದೇಶದ ಅಥವಾ ಮತ್ತಾವುದಾದರೂ ದೇಶದ ಪರಿಸ್ಥಿತಿಯನ್ನು ನಮ್ಮಲ್ಲಿ ನಾಳೆಯೆ ನೆಲೆಗೊಳಿಸಬೇಕೆಂದು ನಿರ್ಧರಿಸುವುದೂ ಅಷ್ಟೇ ಅನುಚಿತ. ಹೊರಗಿನದನ್ನು ನಿಧಾನವಾಗಿ ಪರೀಕ್ಷಿಸಿ ನೋಡೋಣ; ಉತ್ತಮವಾದುದನ್ನು ಆ ಮೇಲೆ ಸ್ವೀಕರಿಸೋಣ.

ರಾಜಕೀಯ ದೃಷ್ಟಿಯಿಂದ ಕೆಲ ಕೆಲವು ಜನಾಂಗಗಳು ಬಲಿಷ್ಠವಾಗಿದ್ದ ಮಾತ್ರಕ್ಕೇ ಸಾಹಿತ್ಯವಿಚಾರಗಳಲ್ಲಿಯೂ ಸಾಮಾಜಿಕ ವಿಚಾರಗಳಲ್ಲಿಯೂ ಅವೇ ಮೇಲೆಂಬ ಭಾವನೆಯನ್ನಿಟ್ಟುಕೊಳ್ಳಬೇಕಾಗಿಲ್ಲ. ನಾವು ಭಾರತೀಯ ಸಂಸ್ಕೃತಿಯ ಅಮೃತ ಪುತ್ರರೆನಿಸಬೇಕೆ ಹೊರತು, ಮತ್ತಾವ ದೇಶದವರ ಮಾನಸಪುತ್ರರಾಗುವುದು ಬೇಡ.

ನವೀನ ದೃಷ್ಟಿ

ಪಾಶ್ಚಾತ್ಯ ಸಾಹಿತ್ಯದ ಅಳತೆಕೋಲಿನಿಂದ ನಮ್ಮ ಸಾಹಿತ್ಯವನ್ನು ಅಳೆದು ಅದಕ್ಕೆ ಕಡಿಮೆ ಬೆಲೆಯನ್ನು ಕಟ್ಟಿ ನಮ್ಮ ಸಾಹಿತ್ಯ ಸಂಸ್ಕೃತಿಗಳಿಗೆ ಅಪಚಾರಮಾಡಿ, ಅನುಕರಣಪಟುಗಳಾಗಿದ್ದುದು ಇನ್ನು ಸಾಕು. ಸ್ವಾತಂತ್ರ್ಯದ ಹೆಸರಿನಲ್ಲಿ ಪರಾನುಕರಣದ ಶೃಂಖಲೆಗಳನ್ನು ಕೀಲಿಸಿಕೊಂಡುದು ಇನ್ನು ಸಾಕು. ನಮ್ಮ ಸಾಹಿತ್ಯದ ಮತ್ತು ನಮ್ಮ ಸಂಸ್ಕೃತಿಯ ನಿಜವಾದ ಬೆಲೆಯನ್ನು ನಿಷ್ಕರ್ಷೆಮಾಡುವ ಬುದ್ಧಿಕೌಶಲ್ಯದ— ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳನ್ನು ನಮ್ಮ ಸಾಹಿತ್ಯ ಸಂಸ್ಕೃತಿಗಳ ಮಾನದಂಡದಿಂದ ಅಳತೆಮಾಡುವ ಎದೆಗಾರಿಕೆಯ— ನೂತನ ದೃಷ್ಟಿಯು ನಮಗೆ ಬೇಕು.

ಪ್ರಪಂಚಕ್ಕೇ ಹೊಸ ಮಾದರಿಗಳನ್ನು ಕಲ್ಪಿಸಿಕೊಡುವ ನವಚೈತನ್ಯದಿಂದ ಕಳಕಳಿಸುತ್ತ ಉತ್ಸಾಹಶೀಲರಾಗಿ ಮುಂದೆ ನುಗ್ಗಬೇಕು. ನಮ್ಮ ತರುಣ ಸಾಹಿತಿಗಳು; ತರುಣ ಸಾಹಿತಿಗಳ ಕಾರ್ಯಸಿದ್ಧಿಗಾಗಿ ಮೆಚ್ಚಿ ತಲೆದೂಗಿ ಅವರು ತಮ್ಮನ್ನು ಮೀರಿಸಿ ತಮಗಿಂತಲೂ ಯಶಸ್ವಿಗಳಾಗಲೆಂದು ಹಾರೈಸಬೇಕು ಹಿರಿಯ ಸಾಹಿತಿಗಳು. ತನ್ನ ಮಕ್ಕಳು ತನ್ನನ್ನು ಮೀರಿಸಬೇಕೆಂದು ತ್ರಿಕರಣಶುದ್ಧವಾಗಿ ಬಯಸದ ತಂದೆಯು ಕುಟುಂಬದ ಶತ್ರು. ಅದರಂತೆಯೇ, ತರುಣಸಾಹಿತಿಗಳು ವರ್ಧಿಷ್ಣುಗಳಾಗಿ ತಮಗಿಂತ ಯಶಸ್ವಿಗಳಾಗಬೇಕೆಂದು ಶುದ್ಧವ ಮನಸ್ಸಿನಿಂದ ಹಾರೈಸದಿರುವ ಹಿರಿಯ ಸಾಹಿತಿಗಳು ಸಮಾಜದ ಶತ್ರುಗಳೇ ಹೊರತು ಸಾಹಿತಿಗಳೆಂಬ ಹೆಸರಿಗೆ ಅರ್ಹರಲ್ಲ

ತರುಣ ಸಾಹಿತಿಗಳ ಉತ್ಸಾಹವೂ ಹಿರಿಯ ಸಾಹಿತಿಗಳ ಅನುಭವವೂ ಪರಸ್ಪರ ಪೂರಕವಾಗಿ ಒಟ್ಟುಗೂಡಿದ ಹೊಸ ಹುರುಪಿನ ಕ್ರಿಯಾಶಕ್ತಿಯು ರೂಪಿತವಾಗಿ, ಪ್ರಪಂಚವನ್ನೇ ಬೆರಗುಮಾಡುವ ಹೊಸಹೊಸ ಮಾದರಿಯ ಸಾಹಿತ್ಯ ಪ್ರಯೋಗಗಳು ಸ್ವತಂತ್ರವಾಗಿ ನಡೆಯಬೇಕು.

“ನಾನೃಷಿಃ ಕುರುತೇ ಕಾವ್ಯಂ” ಎಂಬ ಉಪದೇಶವನ್ನು ಅನುಸರಿಸಿ ಮುಂದಿನ ದೊಡ್ಡ ಕೆಲಸಕ್ಕೆ ಇಂದಿನಿಂದಲೇ ಅಧ್ಯವಸಾಯ ಮಾಡಿ ಸಿದ್ಧರಾಗಬೇಕು. ತಕ್ಕಮಟ್ಟಿಗಾದರೂ ಪಾಂಡಿತ್ಯವನ್ನು ವೃದ್ಧಿಪಡಿಸಿಕೊಂಡಲ್ಲದೆ ಗ್ರಂಥರಚನೆಗೆ ಕೈಹಾಕಬಾರದು; ತಕ್ಕಷ್ಟು ಜ್ಞಾನಾನುಭವವಿಲ್ಲದವರ ಸಾಹಿತ್ಯ ಕೃತಿಗಳು ಶೋಭಿಸಲಾರವು.

ಹೀಗೆ ಶಬ್ದಸಂಪತ್ತನ್ನೂ, ಜ್ಞಾನಾನುಭವಗಳನ್ನೂ ಹೆಚ್ಚಿಸಿಕೊಳ್ಳಬೇಕಾದರೆ ಸಂಸ್ಕೃತ ಸಾಹಿತ್ಯದಲ್ಲಿ ಬೆಳಗುತ್ತಿರುವ ಶ್ರೇಷ್ಠ ಗ್ರಂಥಗಳನ್ನೂ ಕನ್ನಡ ಸಾಹಿತ್ಯ ಮತ್ತು ಇಂಗ್ಲಿಷ ಸಾಹಿತ್ಯಗಳಲ್ಲಿರುವ ಪ್ರಾಚೀನ ಮತ್ತು ನವೀನ ಗ್ರಂಥಗಳಲ್ಲಿ ಉತ್ತಮವಾದವುಗಳನ್ನೂ ವ್ಯಾಸಂಗ ಮಾಡಬೇಕು. ಸಂಸ್ಕೃತ ಸಾಹಿತ್ಯವೂ ಹಳಗನ್ನಡ ಸಾಹಿತ್ಯವೂ ನಮ್ಮ ನಾಡಿನ ಅಮೂಲ್ಯ ಭಾಗಗಳು. ನಾವು ಅವುಗಳಲ್ಲಿ ಅದರ ಶೋಧಿಸಿ [illegible] ನಾಡಿನ ಮೇಲೆ [illegible]

ವೈಜ್ಞಾನಿಕ ದಾರಿದ್ರ್ಯ

ವಿಜ್ಞಾನದ ವಿಚಾರದಲ್ಲಂತೂ ಕನ್ನಡಿಗರಿಗೆ ಅಲ್ಪಸ್ವಲ್ಪ ಪರಿಶ್ರಮವೂ ಇಲ್ಲ. ವಿಜ್ಞಾನ ಪಿಪಾಸೆಯೇ ವೃದ್ಧಿಯಾಗಿಲ್ಲ. ಇಂಗ್ಲಿಷ್ ಭಾಷೆಯಲ್ಲಿ ವಿಜ್ಞಾನಕ್ಕೆ ಸಂಬಂಧಪಟ್ಟ ಪ್ರತಿಯೊಂದು ಮುಖ್ಯ ವಿಚಾರದಲ್ಲಿಯೂ ರಾಶಿರಾಶಿ ಗ್ರಂಥಗಳೇ ರಚಿತವಾಗಿವೆ. ಅತ್ಯಂತ ಜಟಿಲವಾದ ಪಾರಿಭಾಷಿಕ ವಿಷಯಗಳನ್ನೂ, ಕ್ಲಿಷ್ಟವಾದ ವಿಜ್ಞಾನಶಾಸ್ತ್ರ ಸಂಬಂಧವಾದ ವಿಷಯಗಳನ್ನೂ ಸಾಮಾನ್ಯರೂ ಗ್ರಹಿಸಲು ಶಕ್ಯವಾಗುವಂತೆ ನೂರಾರು ಸಾವಿರಾರು ಗ್ರಂಥಗಳನ್ನು ಪಾಶ್ಚಾತ್ಯರು ತಮ್ಮ ತಮ್ಮ ಭಾಷೆಗಳಲ್ಲಿ ರಚಿಸುತ್ತಿದ್ದಾರೆ. ನಾವು ಸ್ವತಂತ್ರವಾಗಿ ರಚಿಸುವ ಗ್ರಂಥಗಳ ಜೊತೆಗೆ ಅವುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಗ್ರಂಥರಾಶಿಯನ್ನು ಬೆಳೆಯಿಸಬೇಕು. ಜನರಲ್ಲಿ ವ್ಯಾಸಂಗ ಮಾಡಬೇಕೆಂಬ ಆಸೆಯನ್ನು ವೃದ್ಧಿಗೊಳಿಸಿ ಅವರ ಅಭಿರುಚಿಯನ್ನು ತಿದ್ದಿ ರೂಪಿಸಬೇಕಾಗಿದೆ. ಜನಪದ ಸಾಹಿತ್ಯವನ್ನೂ ಜನಗಳಲ್ಲಿ ಪ್ರಚಾರದಲ್ಲಿರುವ ಹಿಂದಿನ ಕಥೆಗಳನ್ನೂ ಸಂಗ್ರಹಿಸಿ ಮುದ್ರಿಸುವ ಕೆಲಸವು ಇನ್ನೂ ಹೆಚ್ಚು ಹೆಚ್ಚಾಗಿ ನಡೆಯಬೇಕಾಗಿದೆ.

ನಮ್ಮ ನಿತ್ಯಜೀವನಕ್ಕೆ ಸಂಬಂಧಿಸಿದ ನಾನಾ ವಿಚಾರಗಳನ್ನು ಕುರಿತ ನಾಟಕಗಳ ಮತ್ತು ಚಲಚ್ಚಿತ್ರಗಳ ಪ್ರದರ್ಶನಗಳ ಮೂಲಕ ಜನರಿಗೆ ಉಲ್ಲಾಸವನ್ನೂ ಶಿಕ್ಷಣವನ್ನೂ ಏಕಕಾಲದಲ್ಲಿ ಒದಗಿಸಬೇಕು. ಹಾಸ್ಯಪೂರಿತವಾದ ನಾಟಕಗಳಂತೆಯೇ, ಜೀವನದ ಇತರ ಆಳವಾದ ಅನುಭವಗಳನ್ನು ಚಿತ್ರಿಸುವ ನಾಟಕಗಳನ್ನೂ ಆಡಿಸಬೇಕು. ರಾಷ್ಟ್ರೀಯ ರಂಗಭೂಮಿಯು ಏರ್ಪಟ್ಟು ಜನಜೀವನದ ಬೇರೆ ಬೇರೆ ಅಂತಸ್ತುಗಳ ಜನರಿಗೂ ಮಕ್ಕಳಿಗೂ ಅವಶ್ಯವಾದ ಬೇರೆ ಬೇರೆ ನಾಟಕಗಳನ್ನು ಸಿದ್ಧಗೊಳಿಸಿ ಪ್ರದರ್ಶಿಸಬೇಕು; ತನ್ಮೂಲಕ ಜ್ಞಾನ ಪ್ರಸಾರಮಾಡಿ ಸಂಸ್ಕೃತಿಯ ಬೆಳಕನ್ನು ಹರಡಬೇಕು. ಈಗ ಶಿಶುಸಾಹಿತ್ಯವೇನೋ ಸ್ವಲ್ಪ ಮಟ್ಟಿಗೆ ಬೆಳೆದಿದ್ದರೂ ಮಕ್ಕಳಿಗೆ ಬೇಕಾದ ನಾಟಕಗಳು ತಕ್ಕಷ್ಟು ಸಂಖ್ಯೆಯಲ್ಲಿಲ್ಲ. ಎಂಟು ಒಂಬತ್ತು ವರ್ಷದ ಬಾಲಕಿಯರು ರುಕ್ಮಿಣಿಯ ಪಾತ್ರವನ್ನೋ ಶಕುಂತಲೆಯ ಪಾತ್ರವನ್ನೋ ಧರಿಸಿ, ವಿರಹವೇದನೆಯನ್ನು ಅಭಿನಯಿಸುವುದನ್ನು ನೋಡಿ ನಗುಬರುತ್ತದೆ. ಸಣ್ಣ ವಯಸ್ಸಿನ ಮಕ್ಕಳು ರಂಗಭೂಮಿಯ ಮೇಲೆ ಸಾವನ್ನು ಕುರಿತು ಮಾತನಾಡಬೇಕಾಗಿರುವುದನ್ನು ನೋಡಿ ಸಂಕಟವಾಗುತ್ತದೆ. ಆದಕಾರಣ, ದೊಡ್ಡವರಿಗೆ ಸರಿಹೋಗುವ ನಾಟಕಗಳನ್ನು ಮಕ್ಕಳಿಂದ ಆಡಿಸುವುದು ತಪ್ಪು. ಅವರ ವಯಸ್ಸಿಗೂ ಅವರ ಅನುಭವಕ್ಕೂ ತಕ್ಕ ನಾಟಕಗಳು ಸಿದ್ಧವಾಗಬೇಕು.

ವಿಧಾಯಕ ವಿಮರ್ಶೆ

ಕನ್ನಡನಾಡಿನಲ್ಲಿ ಉತ್ತಮವಾದ ವಿಮರ್ಶೆಯ ಕಲೆಯು ವೃದ್ಧಿಯಾಗಬೇಕು. “ಯಾರು ಬರೆದಿದ್ದಾರೆ?” ಎಂಬುದನ್ನು ಬಿಟ್ಟು “ಏನು ಬರೆದಿದ್ದಾರೆ?” ಎಂಬುದನ್ನು ಆಧಾರವಾಗಿಟ್ಟುಕೊಂಡು ವಿಮರ್ಶೆ ಮಾಡಬೇಕು. ಈಗ ಹೊರಬಿದ್ದಿರುವ ವಿಮರ್ಶೆ ಗ್ರಂಥಗಳ ಸಂಖ್ಯೆಯು ಸುತರಾಂ ಸಾಲದು. ಹಿಂದಿನ ಸಾಹಿತ್ಯ ಕೃತಿಗಳ ನಿಷ್ಪಕ್ಷಪಾತವಾದ ವಿಮರ್ಶೆಗಳ ದೊಡ್ಡ ದೊಡ್ಡ ಗ್ರಂಥಗಳು ಸಿದ್ಧವಾಗಬೇಕು. ವಿಮರ್ಶಾಸಾಹಿತ್ಯವನ್ನು ವೃದ್ಧಿಪಡಿಸುವುದರಲ್ಲಿ “ವಿಮರ್ಶಾ ರೂಪಿಣೀ ವಿದ್ಯಾ” ಎಂಬುವದನ್ನೂ, “ಯಥಾಶಕ್ತಿ ವಿಚಾರಮಾಡಿ, ಕುತರ್ಕ ಮಾಡಬೇಡಿ” ಎಂಬುದನ್ನೂ ಮನಸ್ಸಿನಲ್ಲಿಟ್ಟು ವರ್ತಿಸಬೇಕು. ಉದಾರಭಾವದಿಂದ ಕೂಡಿ ನಿಷ್ಪಕ್ಷಪಾತವಾಗಿ ವಿಮರ್ಶೆಯನ್ನು ಬರೆಯಬೇಕು.

ಮೇಲೆ ಹೇಳಿದ ಕೆಲಸಗಳೆಲ್ಲ ಸಾಂಗವಾಗಿ ನಡೆಯಬೇಕಾದರೆ- ಮುಂದಿನ ಬೃಹತ್ತರವೂ ಮತ್ತು ಭವ್ಯತರವಾದ ಕನ್ನಡನಾಡು ಸಿದ್ಧವಾಗಲು ಸಾಹಿತ್ಯ ಸಂಸ್ಕೃತಿಗಳ ಪುರೋಭಿವೃದ್ಧಿ ಸಾಧನೆಯಮೂಲಕವಾಗಿ ಸಹಾಯವಾಗಬೇಕಾದರೆ- ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡನಾಡಿನ ಶಕ್ತಿ ಕೇಂದ್ರವಾದ ಶಿವನ ಸಮುದ್ರವಾಗಬೇಕು. ನಮ್ಮ ಕನ್ನಡನಾಡಿನ ಕರ್ನಾಟಕ ಸಂಘಗಳೇ ಮುಂತಾದ ಸಂಸ್ಥೆಗಳು ಆ ಶಿವನಸಮುದ್ರದಲ್ಲಿ ಉತ್ಪತ್ತಿಯಾಗಿ ನಮ್ಮಲ್ಲಿಗೆ ಬಂದ ವಿದ್ಯುಚ್ಛಕ್ತಿಯನ್ನು ಒಟ್ಟು ಕನ್ನಡನಾಡಿನ ಮೂಲೆ ಮೂಲೆಗೂ ಹಂಚಿ, ಅದರಿಂದ ಬೆಳಗುವ ಜ್ಞಾನದೀಪಗಳ ಕಾಂತಿಗಳನ್ನು ನೋಡಿ ನೋಡಿ ನಲಿಯಬೇಕು. ಆ ಜ್ಞಾನದೀಪಗಳ ಕಾಂತಿಗಳಿಂದ ಕನ್ನಡತಾಯಿಯ ಅಜ್ಞಾನಾಂಧಕಾರವು ತೊಲಗಿ, ಕನ್ನಡ ತಾಯಿಯ ಪವಿತ್ರ ದೇವಾಲಯದಲ್ಲಿ ನಿತ್ಯ ದೀಪಾವಳಿಯ ಉತ್ಸವವು ನಡೆಯಬೇಕು. ಅದು ನಡೆದಂದು ಶುಭವಾರ; ಅದು ನಡೆದಂದು ದೇಶ ಮಾತೆಯ ವರ್ಧಂತ್ಯುತ್ಸವ. ಅದು ನಡೆಯುವ ವರೆಗೂ ನಾವೆಲ್ಲರೂ ಮನುಷ್ಯರ ಛಾಯೆಗಳೇ ಹೊರತು ಮನುಷ್ಯರೆಂಬ ಹೆಸರಿಗೇ ಅರ್ಹರಲ್ಲ.

ಸಂಪಾದಕೀಯ ಟೀಕೆಟಿಪ್ಪಣಿಗಳು

ಮತ್ತೆ ಸ್ಟರ್ಲಿಂಗ ಸಾಲ

ಎರಡನೆ ಜಾಗತಿಕ ಯುದ್ಧದ ಕಾಲದಲ್ಲಿ ಬ್ರಿಟನ್ನು ಹಿಂದುಸ್ತಾನದಿಂದ ಯುದ್ಧಕ್ಕೋಸ್ಕರ ಪಡೆದ ಸಾಮುಗ್ರಿಗಳ ಮತ್ತು ಸೇವೆಗಳ ಬಗ್ಗೆ ಸ್ಟರ್ಲಿಂಗ್ ರೂಪದಲ್ಲಿ ನಮ್ಮ ಲೆಕ್ಕಕ್ಕೆ ಲಂಡನ್ನಿನಲ್ಲಿ ಜಮಾ ಮಾಡಿಕೊಂಡ ಹಣವನ್ನು ತೀರಿಸುವ ವಿಚಾರದಲ್ಲಿ ಯುದ್ಧ ಮುಗಿದಂದಿನಿಂದಲೂ ಕೆಲ ಬ್ರಿಟಿಷ ಪತ್ರಿಕೆಗಳು ಅಪಪ್ರಚಾರ ನಡೆಸಿರುವದು ಹಿಂದೀ ಆರ್ಥಿಕ ವರ್ಗಗಳಲ್ಲಿ ಅಲ್ಲೋಲಕಲ್ಲೋಲವನ್ನೆಬ್ಬಿಸುತ್ತ ಬಂದಿದೆ. ಸ್ಟರ್ಲಿಂಗ ಸಾಲಗಳನ್ನು ಒಂದಿಷ್ಟು ಮುರಿಗೆಯಿಸಬೇಕೆಂಬ ಕೂಗನ್ನು ಮೊದಲು ಎಬ್ಬಿಸಿದ ಪತ್ರಿಕೆ ಲಂಡನ್ "ಇಕಾನಮಿಸ್ಟ್" ಎಂದು ತೋರುತ್ತದೆ. ಅಂದಿನಿಂದ ವಿವಿಧ ಬ್ರಿಟಿಶ ಪತ್ರಿಕೆಗಳು ನಾನಾ ವಿಧ ನೆವಗಳನ್ನು ಮುಂದೊಡ್ಡಿ ಈ ಸಾಲಕ್ಕೆ ಕತ್ತರಿ ಹಾಕಬೇಕೆಂಬ ವಾದಕ್ಕೆ ಬೆಂಬಲ ಕೊಟ್ಟವು. ಚರ್ಚಿಲ್ ಸಾಹೇಬರೂ ಈ ಹಾಡಿಗೆ ದನಿಗೂಡಿಸಿದರು. ಸ್ಟರ್ಲಿಂಗ್ ಸಾಲಗಳ ಸ್ವಾಮಿಗಳಾದ ದೇಶಗಳನ್ನು ಲಕ್ಷಿಸಿದವು. ಅವರಿಂದ ನಾವು ಪಡೆದ ಸಾಮಗ್ರಿಗಳಿಗೆ ಉಬ್ಬರದ ದರದಲ್ಲಿ ಬೆಲೆ ಹಿಡಿಯಲಾಗಿತ್ತು. ಈ ಮೊದಲಾದ ಜೊಳ್ಳುವಾದಗಳನ್ನು ಮುಂದೆ ಮಾಡಲಾಗಿತ್ತು. ಆದರೂ ಈಚೆಗಿನ ವರೆಗೆ ಬ್ರಿಟಿಶ ಸರಕಾರದ ಪರವಾಗಿ ಯಾರೂ ಅಧಿಕೃತವಾಗಿ ಈ ವಾದಗಳನ್ನು ಸಮರ್ಥಿಸಿದ್ದೂ ಇಲ್ಲ, ಸಾಲ ಮುರಿಗಿಸುವ ಮಾತನ್ನೆತ್ತಿದ್ದೂ ಇಲ್ಲ. ಆದರೆ ಕಳೆದ ವಾರ ಬ್ರಿಟಿಶ ಸರಕಾರದ ಆರ್ಥಿಕ ಮಂತ್ರಿಗಳಾದ ಡಾ. ಡಾಲ್ಟನ್ನರು ಲಂಡನ್ನಿನ ಜೆಮ್ಮಿಂಗ್ಟನ್ ವಣಿಕ್ ಸಂಘದ ಸಭೆಯಲ್ಲಿ ಸ್ಟರ್ಲಿಂಗ್ ಸಾಲಗಳನ್ನು "ಬಹಳ ಮಟ್ಟಿಗೆ" ಮುರಿಗೆಯಿಸಬೇಕಾಗುವದೆಂದು ಹೇಳಿದರು. ಅವರು ಇದಕ್ಕೆ ಬೇರಾವ ಹೆಚ್ಚಿನ ವಾದವನ್ನೂ ಮುಂದೊಡ್ಡದೆ ಬ್ರಿಟನ್ನಿಗೆ ವಿಜಯದ ಫಲವಾಗಿ ದೊರೆತ ಈ ದೊಡ್ಡ ಸಾಲವೆಂದೂ ಇದು "ಅಯೋಗ್ಯ, ಅನ್ಯಾಯ, ಅವಾಸ್ತವ ಭಾರ"ವೆಂದೂ ಸಾಧಿಸಿ ಇದನ್ನು ತೆರುವ ಸಾಮರ್ಥ್ಯ ಬ್ರಿಟನ್ನಿಗಿಲ್ಲವೆಂದರು. ಡಾಲ್ಟನ್ನರ ವಿಚಾರಗಳು ಅವರ ವೈಯಕ್ತಿಕ ವಿಚಾರಗಳೆಂದು ಯಾರೂ ಭಾವಿಸಬಾರದೆಂದು ಮುಖ್ಯಮಂತ್ರಿ ಅಟ್ಲಿಯವರು ಅದು ಬ್ರಿಟಿಶ ಸರಕಾರದ ಅಭಿಪ್ರಾಯವೇ ಎಂದು ಪಾರ್ಲಮೆಂಟಿನಲ್ಲಿ ಹೇಳಿದರು. ಸ್ಟರ್ಲಿಂಗ ಸಾಲಗಳನ್ನು "ಬಹಳಮಟ್ಟಿಗೆ" ಮುರಿಗೆಯಿಸುವದೆಂದರೆ ಈಚೆಗಿನ ಇತಿಹಾಸದಲ್ಲಿ ಅತ್ಯಂತ ಕ್ರೂರವಾದ ಕೊರಳಕೊಯ್ತವೆಂದು ಪ್ರತಿಯೊಬ್ಬ ಭಾರತೀಯನೂ ಬಗೆಯದಿರಲಾರನು. ಸ್ಟರ್ಲಿಂಗ ಸಾಲಗಳು ಬರಬೇಕಾಗಿರುವ ದೇಶ ಹಿಂದುಸ್ತಾನವೊಂದೇ ಅಲ್ಲ, ಇಜಿಪ್ತ, ದಕ್ಷಿಣ ಆಫ್ರಿಕಾ, ಆಯರ್ಲಂಡ್, ಅರ್ಜೆಂಟೈನ ಮೊದಲಾದ ದೇಶಗಳೂ ಹಿಂದುಸ್ತಾನದ ಸಾಲಿನಲ್ಲಿವೆಯೆಂಬುದು ನಿಜ. ಆದರೆ ಬ್ರಿಟನ್ನಿನ ಸ್ಟರ್ಲಿಂಗ ಸಾಲದಲ್ಲಿ ನೂರಕ್ಕೆ ೪೦ ರಷ್ಟು ಮತ್ತು ಮತ್ತಾವ ದೇಶಕ್ಕಿಂತ ಎಷ್ಟೋ ಹೆಚ್ಚು ಹಿಂದುಸ್ತಾನಕ್ಕೆ ಬರಬೇಕಾಗಿದೆ. ೧೬೦೦ ಕೋಟಿ ರೂ ಗಳಷ್ಟಾಗುವ ಈ ಹಣವನ್ನು ತೆರಿಸಲು ಹಿಂದುಸ್ತಾನ ೫ ವರ್ಷ ಕಾಲ ಎಷ್ಟು ಕಣ್ಣೀರು, ಎಷ್ಟು ಬೆವರು, ಎಷ್ಟು ರಕ್ತ ಸುರಿಸಿತೆಂಬುದನ್ನು ಬ್ರಿಟಿಶರು ಅರಿಯರೇ? ಹಿಂದುಸ್ತಾನದಲ್ಲಿ ಭಯಂಕರ ಅತಿಪ್ರಸರಣ ಹಬ್ಬಿ ಬಂಗಾಲ ಬರಗಾಲವೊಂದರಲ್ಲೇ ೩೦ ಲಕ್ಷ ಜನರನ್ನು ಆಹುತಿ ತೆಗೆದುಕೊಂಡ ಪರಿಸ್ಥಿತಿ ಈ ಸ್ಟರ್ಲಿಂಗ ಶಿಲ್ಕಿನ ಸಂಗ್ರಹದಿಂದಲೇ ಆಯಿತು. ಹಿಂದೀಯನ ಜೀವನದ ವೆಚ್ಚವನ್ನು ಮೂರುಪಟ್ಟಿಗಿಂತಲೂ ಹೆಚ್ಚಿಸಿದ್ದಾಯಿತು. ಅದೇ ಸಮಯಕ್ಕೆ ಬ್ರಿಟನ್ನಿನ ಜೀವನದ ವೆಚ್ಚ ೧೦೦ ಕ್ಕೆ ೧೩೩ಕ್ಕಿಂತ ಹೆಚ್ಚಿಗೆ ಎಂದೂ ಆಗಲಿಲ್ಲ. ಬಂಗಾಲ ಬರಗಾಲಕ್ಕೆ ಆಹುತಿಯಾದಷ್ಟು ಜನರನ್ನು ಇಡಿ ಯುದ್ಧದಲ್ಲಿ ಬ್ರಿಟನ್ನು ಕಳೆದುಕೊಳ್ಳಲಿಲ್ಲ. ಹಿಂದುಸ್ತಾನಲ್ಲಿಂದು ಚಲಾವಣೆಯಲ್ಲಿರುವ ೧೨೦೦ ಕೋಟಿ ಪೈಕ್ಕದ ನೋಟುಗಳಿಗೆ ಈ ಕಲ್ಪನಾತ್ಮಕ ಸ್ಟರ್ಲಿಂಗ ಶಿಲ್ಕುಗಳೇ ಬೆಂಬಲವಾಗಿದ್ದು ಅವು ಮುರಿಗೆಯಿಸಿದರೆ ನಮ್ಮ ಚಲನದ ಬೆಲೆ ಏನಾಗಬೇಕು? ಬ್ರಿಟಿಶ ಅರ್ಥಶಾಸ್ತ್ರಿಗಳಾದ ಲಾರ್ಡ ಕೆಯಿನ್ಸನ್ನರು ಈ ಸ್ಟರ್ಲಿಂಗಗಳಿಗೆ ಪ್ರತಿಯಾಗಿ ಮನಸಾ ಇಂಗ್ಲಂಡಿಗೆ ಸಹಾಯ ಮಾಡಿದ್ದಕ್ಕೆ ನಮ್ಮನ್ನು ಕೊಂಡಾಡಿ "ಗೌರವ ಪೂರ್ವಕ"ವಾಗಿ ಈ ಸಾಲ ತೀರಿಸುವದಾಗಿ ಬ್ರಿಟನ್‌ವುಡ್ಸ ಸಮ್ಮೇಲನದಲ್ಲಿ ಅಭಯ ಕೊಟ್ಟಿದ್ದು ಏನಾಯಿತು? ಈ ಸ್ಟರ್ಲಿಂಗ ಶಿಲ್ಕುಗಳು ಯುದ್ಧವಿಧ್ವಸ್ತವಾದ ಹಿಂದೀ ಅರ್ಥ ಪ್ರಣಾಲಿಯಲ್ಲಿ ಜೀವಕಳೆ ತುಂಬಲು ಅತ್ಯವಶ್ಯವಾಗಿವೆ. ಅದರಿಂದ ನಾಳೆ ಜೂನ ೧೦ ಕ್ಕೆ ಈ ವಿಷಯದಲ್ಲಿ ಮಾತುಕತೆ ನಡೆಸಲು ಇಂಗ್ಲಂಡಿಗೆ ಹೋಗುವ ಹಿಂದೀ ಸರಕಾರದ ಆರ್ಥಿಕ ಮಂಡಲದವರು ಇದರಲ್ಲಿ ನಿರ್ದಾಕ್ಷಿಣ್ಯವಾಗಿ ವರ್ತಿಸುವದವಶ್ಯವಾಗಿದೆ. ಬ್ರಿಟನ್ನು ತೀರಲಾರದಷ್ಟು ದುರ್ಬಲವಾಗಿದೆಯೆಂಬುದು ಸುಳ್ಳು. ಅದು ವಿದೇಶಗಳಲ್ಲಿ ತೊಡಗಿಸಿದ ಬಂಡವಲು, ಹಿಂದುಸ್ತಾನದಲ್ಲಿರುವ ಬ್ರಿಟಿಶ ಸೊತ್ತುಗಳು, ಹಿಂದೀ ಆರ್ಥಿಕ ಪುನರುಜ್ಜೀವನಕ್ಕೆ ಬೇಕಾದ ನಾನಾ ಯಂತ್ರ ತಂತ್ರಗಳು ಇವೆಲ್ಲವನ್ನು ಸಾಲ ತೀರಿಸಲು ಬ್ರಿಟನ್ನು ಉಪಯೋಗಿಸಬಹುದು. ವರ್ಷಕ್ಕೆ ೯೦೦ ಕೋಟಿ ಪೌಂಡ. ಉತ್ಪನ್ನವುಳ್ಳ ಇಂಗ್ಲಂಡು ವರ್ಷಕ್ಕೆ ೩೦ ರೂಪಾಯಿ ಉತ್ಪನ್ನವುಳ್ಳ ಬಡ ಹಿಂದೀ ರೈತನ ಮುಂದೆ ತಾನು ಬಡವನೆಂದು ಹೇಳಿಕೊಳ್ಳುವಷ್ಟು ನಾಚಿಕೆಗೇಡು ಇನ್ನಾವದಿದೆ?

ಸೂಕ್ತ ಸಲಹೆ

ಮುಂಬಯಿ ಸರಕಾರದ ಅರ್ಥ ಸಚಿವರಾದ ಶ್ರೀ ವೈಕುಂಠಲಾಲ ಮೆಹತಾರವರು ಬಾಗಲಕೋಟೆಯ ಗುಜರಾಥಿ ಶಾಲೆಯ ಉದ್ಘಾಟನ ಸಮಾರಂಭವನ್ನು ಜರುಗಿಸುತ್ತ ಕೆಲ ಮಹತ್ವದ ಮಾತುಗಳನ್ನು ಹೇಳಿದರು. ಗುಜರಾಥಿಗಳು ಕರ್ನಾಟಕದ ಇತರ ಭಾಗಗಳಲ್ಲಿ ವ್ಯಾಪಾರಕ್ಕೆಂದು ಹೋಗಿ ಅಲ್ಲಿಯೆ ನೆಲಸಿ ಮನೆ ಮಾರುಗಳನ್ನು ಮಾಡಿಕೊಂಡುದುಂಟು. ವ್ಯಾಪಾರ ಉದ್ದಿಮೆಗಳಿಂದ ತಮ್ಮ ಸಂಪತ್ತನ್ನು ಬೆಳೆಸಿಕೊಂಡದ್ದೂ ಉಂಟು. ತಮ್ಮ ಭಾಷೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಸ್ವತಂತ್ರ ಶಾಲೆಗಳನ್ನು ಸ್ಥಾಪಿಸಿಕೊಂಡು ಮಕ್ಕಳ ಶಿಕ್ಷಣ ಅಭಿವೃದ್ಧಿಯನ್ನು ಸಾಧಿಸಿಕೊಂಡದ್ದೂ ಇದೆ. ಅಂಥವರ ಸಲುವಾಗಿ ಮಾನ್ಯ ಮಂತ್ರಿಗಳು ಕೆಲ ಮಹತ್ವದ ಉಪದೇಶ ಮಾಡಿದ್ದು ಸಂತೋಷದ ಸಂಗತಿಯಾಗಿದೆ. ಗುಜರಾಥಿಗಳು ಎಲ್ಲಿಯೆ ಇರಲಿ ಅಲ್ಲಿನ ಜನರ ಸಂಬಂಧ ಹೊಂದಿಕೊಂಡು ಸಮರಸರಾಗಿ ಹೋಗಲು ಉಪದೇಶಿಸಿದರು. ಗುಜರಾಥಿ ಶಾಲೆಯಲ್ಲಿ ಆಯಾ ಪ್ರಾಂತಿಕ ಭಾಷೆಗಳಿಗೆ ಪ್ರಾಶಸ್ತ್ಯ ಕೊಟ್ಟು ಗುಜರಾಥಿಗಳೆಲ್ಲ ಸ್ಥಳೀಯ ಭಾಷೆಯಲ್ಲಿ ವ್ಯವಹಾರ ನಡೆಸುವಂತೆ ನೋಡಿಕೊಳ್ಳಬೇಕೆಂದೂ ಹೇಳಿದರು. ಮಾನ್ಯ ಮಂತ್ರಿಗಳ ಸಲಹೆಯಂತೆ ಆಯಾ ಪ್ರಾಂತಗಳಲ್ಲಿ ನೆಲಸಿದ ಪರಪ್ರಾಂತೀಯರು ವರ್ತಿಸಿದರೆ ಪ್ರಾಂತೀಯ ತಿಕ್ಕಾಟಗಳೆಲ್ಲ ಬಹುಮಟ್ಟಿಗೆ ಕಡಿಮೆಯಾಗುವವು. ಕರ್ನಾಟಕದಲ್ಲಿ ನೆಲಸಿರುವ ಮಹಾರಾಷ್ಟ್ರೀಯರು ಗುಜರಾಥಿಗಳು ಮತ್ತು ಇತರ ಪ್ರಾಂತೀಯ ಜನರು ಕನ್ನಡಿಗರೊಡನೆ ಸಮರಸರಾಗಿದ್ದುಕೊಂಡು ತಮ್ಮ ಮತ್ತು ಪ್ರಾಂತದ ಹಿತವನ್ನು ಸಾಧಿಸುವರಾಗಿ ನಂಬಿದ್ದೇವೆ.

ಆತ್ಮರಕ್ಷಣೆ ಮಾಡಿಕೊಳ್ಳಿರಿ

ಹಿಂದುಸ್ತಾನವಿಂದು ಸಂಕ್ರಮಣ ಕಾಲವನ್ನು ಕ್ರಮಿಸುತ್ತಿದ್ದು ಬೇಗನೆ ಸ್ವಾತಂತ್ರ್ಯ ಪಡೆಯಲಿದೆ. ಈ ಸಮಯದಲ್ಲಿ ಕೆಲ ಹಿತಕರ ಮತ್ತು ಕೆಲ ಅಹಿತಕರ ಘಟನೆಗಳು ಸಂಭವಿಸುವದುಂಟು. ಕೆಲವರು ಬೇಕೆಂತಲೆ ಈ ಸಂಧಿಕಾಲದ ಲಾಭ ಪಡೆದು ಸ್ವಾರ್ಥ ಸಾಧನೆಗಾಗಿ ಗೊಂದಲವನ್ನು ಹಾಕುವುದೂ ಉಂಟು. ಇದೆಲ್ಲವನ್ನು ಎದುರಿಸಿ ಆತ್ಮರಕ್ಷಣೆ ಮಾಡಿಕೊಳ್ಳುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಹಿಂದೀ ಧುರೀಣರು ಜನತೆಯಲ್ಲಿ ಆ ಬಗೆಯ ವಿಶ್ವಾಸವನ್ನು ಹುಟ್ಟಿಸಲು ಹೆಣಗುತ್ತಿರುವುದು ಅಭಿನಂದನೀಯವಾಗಿದೆ. ಸರದಾರ ವಲ್ಲಭಭಾಯಿ ಪಟೇಲರು ಹೊಸದಿಲ್ಲಿ ಗುಜರಾಥಿ ಕ್ಲಬ್ಬಿನವರು ಏರ್ಪಡಿಸಿದ ಗೌರವ ಸಭೆಯಲ್ಲಿ ಮಾತನಾಡುತ್ತ ಈ ಬಗೆಯಾಗಿ ಉಪದೇಶಿಸಿದ್ದಾರೆ. ಮಹಾತ್ಮರನ್ನಾದರೂ ಹಿಂಬಾಲಿಸಿರಿ. ಇಲ್ಲವೆ ಬಹುಜನರ ಮಾರ್ಗವನ್ನಾದರೂ ಅನುಸರಿಸಿ. ಆದರೆ ಗಂಡಾಂತರ ಬಂದಾಗ ಮಾತ್ರ ಓಡಿ ಹೋಗಬೇಡಿರಿ ಎಂದು ಸರದಾರರು ಹೇಳಿರುವರು. ಪ್ರತಿಯೊಬ್ಬನು ಪೋಲೀಸನಾಗಬೇಕು. ಎಲ್ಲಿಯಾದರೂ ಸ್ವಲ್ಪ ಗಲಭೆಯಾದರೆ ಜನರು ಗಾಬರಿಯಾಗಿ ಪೋಲೀಸ ರಕ್ಷಣೆ ಬೇಡುವುದುಂಟು. ಆದರೆ ಹಾಗೆ ಮಾಡದೆ ಪ್ರತಿಯೊಬ್ಬನು ಸ್ವತಃ ಪೋಲೀಸನಾಗಬೇಕು ಎಂದು ಹೇಳಿದ್ದು ಉಚಿತವಾಗಿದೆ. ಹೀಗೆ ಹೇಳುವದರಿಂದ ಪ್ರತಿಯೊಬ್ಬ ಕಾಯದೆಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಹಿಂಸೆಗೆಳೆಸಬೇಕೆಂದು ಅರ್ಥವಿಲ್ಲ. ಆತ್ಮರಕ್ಷಣೆ ಮಾಡಿಕೊಳ್ಳಬೇಕಾದರೆ ಎದುರಾಳಿಯನ್ನು ಹಿಂಸಿಸಬೇಕೆಂಬುದು ಅವಶ್ಯವಿಲ್ಲ. ಪರರನ್ನು ಹಿಂಸಿಸದೆ ಆತ್ಮರಕ್ಷಣೆ ಮಾಡಿಕೊಳ್ಳುವದು ಸಾಧ್ಯವಿದೆ. ಆತ್ಮರಕ್ಷಣೆಗಾಗಿ ಪರರನ್ನು ಅವಲಂಬಿಸುವದು ಹೇಡಿತನ. ನಾವು ನಮ್ಮನ್ನು ರಕ್ಷಿಸಿಕೊಳ್ಳುವದಲ್ಲದೆ ನಿರ್ಬಲರನ್ನು ರಕ್ಷಿಸಬೇಕೆಂದೂ ಸರದಾರರು ಉಪದೇಶಿಸಿದ್ದಾರೆ. ಸರದಾರರ ಈ ಮಾತಿನ ಮರ್ಮವನ್ನು ತಿಳಿದುಕೊಂಡು ಪ್ರತಿಯೊಬ್ಬ ಭಾರತೀಯ ಈ ಸಂಧಿ ಕಾಲವನ್ನು ಕ್ರಮಿಸಿ ಸ್ವಾತಂತ್ರ್ಯ ಸುಖವನ್ನು ಸವಿಯಬೇಕೆಂದು ಸೂಚಿಸುತ್ತೇವೆ.

ಅನುಕರಣೀಯ ನಿರ್ಧಾರ

ನವಾನಗರದ ಜಾಮ ಸಾಹೇಬರು ಸರದಾರ ವಲ್ಲಭಭಾಯಿ ಮೊದಲಾದ ಕಾಂಗ್ರೆಸ ಧುರೀಣರೊಡನೆ ಮಾತುಕತೆ ನಡೆಸಿ ತಾವು ಮತ್ತು ತಮ್ಮ ಸಹಕಾರೀ ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಸೇರಲು ನಿರ್ಧರಿಸಿರುವದಾಗಿ ಸಾರಿದ್ದು ತುಂಬ ಅಭಿನಂದನೀಯವು ಮತ್ತು ಅನುಕರಣೀಯ ಸಂಗತಿಯಾಗಿದೆ. ಹಿಂದುಸ್ತಾನದ ರಾಜ್ಯಘಟನೆ ಸಿದ್ಧವಾಗುತ್ತಿರುವ ಈ ಪರ್ವಕಾಲದಲ್ಲಿ ಸಂಸ್ಥಾನಗಳು ಪ್ರತ್ಯೇಕ ಹಿಡಿದು ಬಿದ್ದುಕೊಂಡರೆ ಅವುಗಳಿಗೇ ಅಹಿತವಾಗುವದು. ಬ್ರಿಟಿಶ ಸರಕಾರದವರು ೧೯೪೮ನೇ ಜೂನ ತಿಂಗಳಲ್ಲಿ ಅಧಿಕಾರ ತ್ಯಾಗ ಮಾಡಿ ಹೊರಟುಹೋಗುವದರಿಂದ ಸಂಸ್ಥಾನಿಕರು ಹಿಂದುಸ್ತಾನ ಸರಕಾರದ ಗೂಡವೆ ಒಡಂಬಡಿಕೆ ಮಾಡಿಕೊಂಡು ಇರಬೇಕಾದುದು ಕ್ರಮಪ್ರಾಪ್ತವಾಗಿದೆ. ಈ ಪರಿಸ್ಥಿತಿಯಲ್ಲಿ ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಸೇರಿದ್ದರೆ ಅವುಗಳ ಪ್ರತಿಷ್ಠೆ ಹಾಗೆಯೆ ಉಳಿಯುವದು. ಇದು ಸ್ಥಾಪಿತವಾಗಲಿರುವ ಹಿಂದುಸ್ತಾನ ಸರಕಾರಕ್ಕೂ ಸಂಸ್ಥಾನಿಕರಿಗೂ ಕೂಡಿಯೆ ಅಹಿತಕರ. ಇದನ್ನೆಲ್ಲ ತಿಳಿದುಕೊಂಡೆ ಈ ಮೊದಲು ಬರೋಡೆ ಮೊದಲಾದ ಸಂಸ್ಥಾನಿಕರು ಘಟನಾ ಸಮಿತಿಯಲ್ಲಿ ಭಾಗವಹಿಸಿರುವರು. ಈಗ ಗುಜರಾಥ ಸಂಸ್ಥಾನಿಕರು ಮುಂದೆ ಬಂದಿದ್ದು ನಾಡಿನ ಪ್ರಗತಿಯನ್ನು ವ್ಯಕ್ತಪಡಿಸುತ್ತವೆ. ಮೈಸೂರು ತಿರುವಾಂಕೂರ ಸಂಸ್ಥಾನಗಳೂ ಈ ಬಗ್ಗೆ ನಿರ್ಣಯ ತೆಗೆದುಕೊಳ್ಳಲಿರುವವೆಂದು ಸುದ್ದಿ. ಇದು ನಿಜವಿದ್ದರೆ ಹಿಂದುಸ್ತಾನದ ಸಮಸ್ಯೆ ಬಿಡಿಸುವಲ್ಲಿ ಇದ್ದ ಅಡಚಣೆ ಬಹುಮಟ್ಟಿಗೆ ನಿವಾರಿಸಲ್ಪಟ್ಟಂತಾಗುವದು. ಹೈದ್ರಾಬಾದ ಸಂಸ್ಥಾನದ ದಿವಾಣರಾದ ಸರ್ ಮಿರ್ಜಾ ಸಾಹೇಬರಿಗೂ ನಿಜಾಮ ಪ್ರಭುಗಳಿಗೂ ಈ ಸಂದರ್ಭದಲ್ಲಿ ಭಿನ್ನಾಭಿಪ್ರಾಯವಾಗಿದೆಂದೂ ಅದಕ್ಕಾಗಿ ಮಿರ್ಜಾಸಾಹೇಬರು ದಿವಾಣ ಪದವಿಗೆ ರಾಜೀನಾಮೆ ಕೊಡಲಿದ್ದಾರೆಂದೂ ಸುದ್ದಿ. ನಿಜಾಮ ಸಾಹೇಬರು ಈ ಸಂದರ್ಭದಲ್ಲಿ ಹೆಚ್ಚು ವಿಶಾಲ ದೃಷ್ಟಿಯಿಂದ ವಿಚಾರಮಾಡಿ ಸಂಸ್ಥಾನದ ಮತ್ತು ಇಡೀ ರಾಷ್ಟ್ರದ ಸ್ವಾತಂತ್ರ್ಯವನ್ನು ಮುಖ್ಯ ಧ್ಯೇಯವಾಗಿಟ್ಟುಕೊಂಡು ತಮ್ಮ ಧೋರಣವನ್ನು ನಿರ್ಧರಿಸಬೇಕು. ಈ ದೊಡ್ಡ ಸಂಸ್ಥಾನಗಳು ಘಟನಾ ಸಮಿತಿಯಲ್ಲಿ ಸೇರಿ ಪ್ರಗತಿಯನ್ನು ಸಾಧಿಸಲಣಿಯಾದರೆ ಉಳಿದ ಸಂಸ್ಥಾನಗಳೂ ಆ ಕಿತ್ತೆಯನ್ನು ತುಳಿವಲ್ಲಿ ಸಂದೇಹವಿಲ್ಲ ಈ ಬಗೆಯ ಸ್ತುತ್ಯ ಉಪಕ್ರಮ ಉಳಿದ ಸಂಸ್ಥಾನಗಳೂ ಕೈಕೊಳ್ಳುವವೊ?

ಅಸಭ್ಯತೆಯ ಪರಮಾವಧಿ

ಮುಸ್ಲಿಂ ಲೀಗಿನವರು ಒತ್ತಾಯದಿಂದ ಅಧಿಕಾರವನ್ನಾಕ್ರಮಿಸಬೇಕೆಂದು ಅಸಭ್ಯ ಅನಾಗರಿಕ, ನಿಷೇಧಾರ್ಹ ಕೃತಿಗಳನ್ನೆಸಗುತ್ತಿರುವುದು ನಿಜವಾಗಿ ವಿಷಾದಕರವಾದ ಸಂಗತಿಯಾಗಿದೆ. ಯಾವುದಾದರೊಂದು ರಾಜಕೀಯ ಪಕ್ಷವು ತನ್ನ ಹಕ್ಕು ಬಾಧ್ಯತೆಗಳನ್ನು ಪ್ರಸ್ಥಾಪಿಸುವದಕ್ಕಾಗಿ, ಪಡೆಯುವುದಕ್ಕಾಗಿ ನ್ಯಾಯ ಮತ್ತು ಸಮಂಜಸ ಮಾರ್ಗಗಳಿಂದ ಪ್ರಯತ್ನಿಸುವದು ಕ್ರಮಪ್ರಾಪ್ತವಾಗಿದೆ. ಆದರೆ ಈ ಮಾರ್ಗವನ್ನು ಬಿಟ್ಟುಕೊಟ್ಟು ಪಾಶವೀ ಬಹುಮತದ ಬೆಂಬಲದಿಂದ ಹಿಂಸಾ ಮಾರ್ಗದಿಂದ ಇಲ್ಲವೆ ಜಾತ್ಯಂಧ ಅಧಿಕಾರಿಗಳ ಪ್ರೋತ್ಸಾಹನೆಯಿಂದ ದುರುದ್ದೇಶವನ್ನು ಸಾಧಿಸಲು ಹವಣಿಸುವುದೆಂದರೆ ಅತ್ಯಂತ ನಿಂದ್ಯವಾದುದು. ಇದರಿಂದ ಉದ್ದೇಶ ಸಾಧಿಸುವದಿಲ್ಲ ಇಷ್ಟೇ ಅಲ್ಲ ತದ್ವಿರುದ್ಧವಾಗಿ ಜಾತಿ ಜಾತಿಗಳಲ್ಲಿ ತಿಕ್ಕಾಟ ಮತ್ತಷ್ಟು ಹೆಚ್ಚಿ ದುರಂತ ಘಟನೆಗಳು ಸಂಭವಿಸುವವು. ಮುಸ್ಲಿಂ ಲೀಗಿನವರು ತಮ್ಮ ದುರುದ್ದೇಶವನ್ನು ಸಾಧಿಸಿಕೊಳ್ಳಲು ಈ ಬಗೆಯ ಹಿಂಸಾ ಕೃತ್ಯಮಾಡುತ್ತಿರು ಇದರಿಂದ ಅವರ ಧ್ಯೇಯವೆಂದಿಗೂ ಸಾಧ್ಯವಾಗಲಾರದು. ಒಂದು ವೇಳೆ ತಾತ್ಕಾಲಿಕ ವಿಜಯ ದೊರೆತರೂ ಕೊನೆವರೆಗೆ ಅದು ಬಾಳಲಾರದು, ಅದರಿಂದ ಪ್ರಗತಿಯೂ ಸಾಧಿಸದು. ಕಲಕತ್ತಾ ಕಾರಪರೇಶನ್ನಿನ ಮುಸ್ಲಿಂ ಲೀಗ ಸದಸ್ಯರು ಅಲ್ಲಿನ ಜಾತ್ಯಂಧ ಸರಕಾರದ ಪ್ರೋತ್ಸಾಹನೆ ಬೆಂಬಲದಿಂದ ಈ ಬಗೆಯ ನಿಂದ್ಯ ಕೃತ್ಯವನ್ನು ಎಸಗಿ ಇಡೀ ಜಗತ್ತಿನಲ್ಲಿ ತಮ್ಮ ಮೋರೆಗೆ ಕಪ್ಪು ಬಳೆದುಕೊಂಡರು. ಬಂಗಾಲವನ್ನು ವಿಭಜಿಸಬೇಕು, ಬಂಗಾಲ ಮಂತ್ರಿಮಂಡಳವನ್ನು ವಿಸರ್ಜಿಸಬೇಕೆಂಬ ಗೊತ್ತುವಳಿ ಕಲಕತ್ತಾ ಕಾರಪರೇಶನ್ನಿನಲ್ಲಿ ಚರ್ಚೆಗೆ ಬರಲಿದ್ದಿತು, ಆದರೆ ಈ ವಿಷಯದ ಚರ್ಚೆ ಪ್ರಾರಂಭವಾಗುವ ಮೊದಲು ಮುಸ್ಲಿಂ ಲೀಗಿನ ಸದಸ್ಯರೊಬ್ಬರು ಮೇಯರರ [illegible] ಅನಾಗರಿಕತೆಯ ಪರಮಾವಧಿ! ಕಾರಪರೇಶನ್ನಿನ ಯುರೋಪಿಯನ್ ಪಕ್ಷದ ಧುರೀಣರಾದ ಪಾಮರರು ಕೂಡ ಈ ಕೃತಿಯನ್ನು ನಿಷೇಧಿಸಿ ಜಗತ್ತಿನಲ್ಲಿ ಎಲ್ಲಿಯೂ ಇಂಥ ಉದಾಹರಣೆಯನ್ನು ಕಂಡು ಕೇಳಿಲ್ಲೆಂದು ಅಭಿಪ್ರಾಯಪಟ್ಟಿರುವರು. ಈ ಬಗೆಯ ಅನಿಷ್ಟಕ ಘಟನೆ ಜರಗಬಾರದೆಂದು ಮೇಯರರು ಪೋಲೀಸರ ಸಂರಕ್ಷಣೆ ಬೇಡಿದ್ದರು. ಆದರೆ ಲೀಗ ಸರಕಾರ ಈ ಬಗೆಯ ಪುರಸ್ಕಾರ ಪಡೆಯಲಿಲ್ಲ! ಯಾರ ಹುಕುಮಿನ ಮೇಲೆ ಪೋಲೀಸರು ಕಾರಪರೇಶನ್ನಿನಿಂದ ಹೊರಟು ಹೋದರೆಂಬುದನ್ನು ವಿಚಾರಿಸುವದವಶ್ಯವಿದೆ. ಮುಸ್ಲಿಂ ಲೀಗಿನ ಆಡಳಿತದಲ್ಲಿ ಹಿಂದುಗಳ ಹಕ್ಕು ಬಾಧ್ಯತೆಗಳು ಸುರಕ್ಷಿತವಾಗಿಯುವವೆಂದು ಬಂಬ ಕೊಚ್ಚುವ ಲೀಗಿನವರು ಇಂಥ ಘಟನೆಗಳಿಗೆ ಏನು ಉತ್ತರ ಕೊಡುವರು? ಸುಹ್ರವರ್ದಿ ಸರಕಾರ ಮತ್ತು ಜ್ಯಾ. ಜಿನ್ನಾ ಸಾಹೇಬರು ಈ ಘಟನೆಯನ್ನು ಸ್ಪಷ್ಟ ಶಬ್ದಗಳಲ್ಲಿ ಖಂಡಿಸಿ ಮುಂದೆಲ್ಲಿಯೂ ಇಂಥ ಕೃತ್ಯ ಸಂಭವಿಸದಂತೆ ನೋಡಿಕೊಳ್ಳುವರೆ? ಮುಸ್ಲಿಂ ಲೀಗಿನವರ ಈ ಬಗೆಯ ನಿಂದ್ಯ ಕೃತ್ಯಗಳಿಂದಲೆ ಬಂಗಾಲ ವಿಭಜಿಸಬೇಕೆಂಬ ಬೇಡಿಕೆಗೆ ಹೆಚ್ಚು ಬೆಂಬಲ ಸಿಕ್ಕುತಿದೆಂಬುದು ನಿರ್ವಿವಾದ.

ಬಲೆಯಲ್ಲಿ ಬೀಳಬೇಡಿರಿ

ಮುಸ್ಲಿಂ ಲೀಗಿನ ಈ ಬಗೆಯ ನಿಂದ್ಯ ಕೃತಿಗಳು ನಿಲ್ಲುವುದಿಲ್ಲ. ಅವರ ಆಡಳಿತದಲ್ಲಿ ಹಿಂದು ಮತ್ತು ಇತರ ಮುಸಲ್ಮಾನೇತರರಿಗೆ ಉಳಿಗಾಲವಿಲ್ಲೆಂದು ಮನಗಂಡಿದ್ದರಿಂದಲೆ ಬಂಗಾಲದಲ್ಲಿಯ ಹಿಂದೂ ಮತ್ತು ಇತರ ಜಾತಿಯವರು ಬಂಗಾಲದ ವಿಭಜನೆಗೆ ಅಣಿಯಾಗಿರುವರು. ಇಡೀ ದೇಶದ ಬೆಂಬಲ ಅವರಿಗೆ ಸಿಕ್ಕಿದೆ. ಲಾರ್ಡ ಕರ್ಜನ್ನರ ಕಾಲಕ್ಕೆ ಬಂಗಾಲ ವಿಭಜನೆಯನ್ನು ವಿರೋಧಿಸಿ ಇಡೀ ದೇಶವೆ ಪ್ರಚಂಡ ಚಳವಳಿ ನಡೆಸಿದುದು ಕಣ್ಮುಂದಿರುವಾಗ ರಾಷ್ಟ್ರವಿಂದು ಆ ವಿಭಜನೆಗೆ ಸಿದ್ಧವಾಗಬೇಕಾದರೆ ಅಲ್ಲಿನ ಪರಿಸ್ಥಿತಿ ಎಷ್ಟು ನಿಕೃಷ್ಟವಾಗಿರಲಿಕ್ಕೆ ಬೇಕೆಂಬುದು ಸ್ಪಷ್ಟವಾಗುತಿದೆ. ಬಂಗಾಲವನ್ನು ವಿಭಜಿಸದಿದ್ದರೆ ಮುಸಲ್ಮಾನೇತರರಿಗೆ ಪ್ರಾಂತದಲ್ಲಿ ಜೀವಿಸುವದೇ ಕಠಿನವಾಗುವಂತಹ ಪರಿಸ್ಥಿತಿಯನ್ನು ಮುಸ್ಲಿಂ ಲೀಗಿನವರು ಉಂಟುಮಾಡಿರುವರು. ವಿಭಜನೆಗೆ ಇಷ್ಟೊಂದು ಪ್ರಚಂಡ ಬೆಂಬಲ ಸಿಕ್ಕುತಿರುವದನ್ನು ನೋಡಿ ಮುಖ್ಯ ಮಂತ್ರಿ ಸುಹ್ರವರ್ದಿ ಪ್ರಭೃತಿಗಳು ಹಿಂದುಗಳೊಡನೆ ಒಂದು ಬಗೆಯ ಒಡಂಬಡಿಕೆಯ ನೆವ ಮಾಡಿ ಹಿಡಿಗೊಂಡ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿಬಿಡಬೇಕೆಂದು ಬಯಸುವಂತೆ ತೋರುತ್ತದೆ. ಬಂಗಾಲದ ಪುರೋಗಾಮಿ ಪಕ್ಷದ ಪ್ರಮುಖರಾದ ಶ್ರೀ ಶರಚ್ಚಂದ್ರ ಬೋಸರು ಅವರ ಬಲೆಯಲ್ಲಿ ಸಿಕ್ಕಿಬಿದ್ದದ್ದು ಅತ್ಯಂತ ಆಶ್ಚರ್ಯಕರ ಮತ್ತು ಶೋಚನೀಯ ಸಂಗತಿಯಾಗಿದೆ. ಹಿಂದು ಮಹಾಸಭೆಯ ಧುರೀಣರಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಈ ಸಂಬಂಧದಲ್ಲಿ ಪ್ರಕಟನೆಯೊಂದನ್ನು ಹೊರಡಿಸಿ ಹಿಂದುಗಳು ಲೀಗಿನ ಬಲೆಯಲ್ಲಿ ಬೀಳಬಾರದೆಂದು ಸಕಾಲದಲ್ಲಿಯೆ ಎಚ್ಚರಿಸಿರುವರು. ಸ್ವತಂತ್ರ ಸ್ವತಂತ್ರ ಯೋಜನೆಯಾಗಲಿ ಸಾಮ್ಯವಾದಿ ಪ್ರಜಾತಂತ್ರ ವಿಚಾರವಾಗಲಿ ತಿರಸ್ಕರಿಸಬೇಕಾದ ಯೋಜನೆಗಳೇ ಎಂದು ಡಾಕ್ಟರರು ಅಭಿಪ್ರಾಯಪಟ್ಟು ಯಾವ ಹಿಂದುವೂ ಸುಹ್ರವರ್ದಿಯವರ ವಚನಗಳಲ್ಲಿ ವಿಶ್ವಾಸವಿಡಬಾರದೆಂದು ಸ್ಪಷ್ಟ ಅಭಿಪ್ರಾಯಪಟ್ಟಿರುವರು. ಅಖಂಡ ಹಿಂದುಸ್ತಾನಾಂತರ್ಗತ ಅವಿಭಕ್ತ ಬಂಗಾಲವಾಗಲಿ ಘಟನಾ ಸಮಿತಿಯ ಪ್ರಜಾತಂತ್ರ ತತ್ವಗಳಲ್ಲಿಯಾಗಲಿ ಸುಹ್ರವರ್ದಿಯವರ ನಂಬುಗೆಯುಳ್ಳ ಅಂದ ಬಳಿಕ ಅವರಿಂದ ಹಿಂದುಗಳ ಉದ್ಧಾರವೆಂತಾಗಬಲ್ಲುದು? ಈ ಪರಿಸ್ಥಿತಿಯಲ್ಲಿ ಹಿಂದುಗಳು ಸುಹ್ರವರ್ದಿಯವರ ಜಾಣ ಬಲೆಯಲ್ಲಿ ಬೀಳಬಾರದೆಂದು ಡಾ. ಶ್ಯಾಮಪ್ರಸಾದರು ಎಚ್ಚರಿಸಿದ್ದು ಸಕಾಲಿಕವಾಗಿದೆ. ಶರಚ್ಚಂದ್ರ ಪ್ರಭೃತಿಗಳು ಯಾವದೇ ಬಗೆಯ ಒಪ್ಪಂದಕ್ಕೆ ತೊಡಗಗೊಡದೆ ಇಡೀ ಬಂಗಾಲದ ಹಿತವನ್ನು ಲಕ್ಷಿಸಿ ತಮ್ಮ ಧೋರಣವನ್ನು ನಿರ್ಧರಿಸಬೇಕು. ತಮ್ಮ ಸಂಕುಚಿತ ಧೋರಣದಿಂದ ಪ್ರಾಂತದ ಮತ್ತು ಇಡೀ ರಾಷ್ಟ್ರದ ವಿನಾಶಕ್ಕೆ ಕಾರಣರಾಗಬಾರದೆಂದು ಹೇಳಬಯಸುತ್ತೇವೆ.

ಕೂಲಿಕಾರ ಮತ್ತು ಮಧ್ಯಮ ವರ್ಗ ನೌಕರರಿಗೆ ರೂ. ೫೫ ಮತ್ತು ೯೦ ಕನಿಷ್ಠ ಸಂಬಳ

ಯಾರಿಗೂ ೨೦೦೦ ಕ್ಕಿಂತ ಹೆಚ್ಚು ಸಂಬಳ ಕೂಡದು

ಕೇಂದ್ರ ಸಂಬಳ ಸಮಿತಿಯ ಸೂಚನೆಗಳು ಮತ್ತು ಕೇಂದ್ರ ಸರಕಾರದ ನಿರ್ಣಯ

ಈ ಹೊತ್ತು (೧೬—೫—೪೭) ಪ್ರಸಿದ್ಧವಾದ ಕೇಂದ್ರ ಸಂಬಳ ಸಮಿತಿಯವರ ವರದಿಯಿಂದ ಕೇಂದ್ರ ಸರಕಾರದ ವೆಚ್ಚ ವರುಷಕ್ಕೆ ೩೦ ಕೋಟಿ ರೂಪಾಯಿಗಳಿಂದ ಹೆಚ್ಚಿದೆ. ಈ ಹೆಚ್ಚಿನ ಸಂಬಳದಲ್ಲಿ ರೇಲ್ವೆ ಮತ್ತು ಪೋಸ್ಟ ಟೆಲಿಗ್ರಾಫ ಶಾಖೆಯವರಿಗಾಗಿಯೆ ೨೪ ಕೋಟಿ ರೂಪಾಯಿಗಳು ಹೋಗುವವು.

ಯಾವ ಮನುಷ್ಯನಿಗೂ ಜೀವನ ವೆಚ್ಚಕ್ಕಿಂತ ಕಡಮೆ ಸಂಬಳ ಸಿಕ್ಕಬಾರದೆಂಬ ತತ್ವವನ್ನೊಪ್ಪಿ ಸಮಿತಿಯವರು ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಕೂಲಿಕಾರ ಕುಟುಂಬದವರಿಗೆ ತಿಂಗಳಿಗೆ ೫೫ ರೂಪಾಯಿ ಮತ್ತು ಮಧ್ಯಮ ವರ್ಗದವರಿಗೆ ೯೦ ರೂಪಾಯಿ ಕನಿಷ್ಠ ಸಂಬಳವೆಂದು ಅಭಿಪ್ರಾಯಪಟ್ಟಿರುವರು. ಇಲ್ಲವೆ ಹೆಚ್ಚು ವೆಚ್ಚದ ಸ್ಥಳಗಳಲ್ಲಿ ಮನೆ ಬಾಡಿಗೆ ಭತ್ತೆ ಮತ್ತು ಕಡಿಮೆ ಸಂಬಳದವರಿಗೆ ಉಳಿದ ಹಲವು ಸೌಕರ್ಯಗಳನ್ನು ಕೊಡಬೇಕೆಂದು ಸಮಿತಿಯವರು ಸೂಚಿಸಿರುವರು. ಹೆಚ್ಚಿನ ಸಂಬಳವೆಂದು ಸಮಿತಿಯವರು ತಿಂಗಳಿಗೆ ೨೦೦೦ ರೂಪಾಯಿ ಗೊತ್ತುಪಡಿಸಿರುವರು. ಕೆಲ ವಿಶಿಷ್ಟ ಸ್ಥಳಗಳಲ್ಲಿ ಅಂದರೆ ಕೇಂದ್ರ ಸರಕಾರದ ಅಧಿಕಾರಿಗಳ ಸಂಬಳದ ಸಂಬಂಧದಲ್ಲಿ ಈ ನಿಯಮವನ್ನು ಸಡಲಿಸಬಹುದೆಂದು ಸೂಚಿಸಿರುವರು.

ವರದಿಯ ಇನ್ನುಳಿದ ಮುಖ್ಯಾಂಶಗಳು ಇಂತಿರುತ್ತವೆ:—

ಸಬಾರ್ಡಿನೇಟ ಮತ್ತು ಇನ್‌ಫೀರಿಯರ ಎಂಬ ದರ್ಜೆಗಳನ್ನು ತೆಗೆದುಹಾಕಿ ಸರಕಾರದವರು ಒಂದನೆ, ಎರಡನೆ ಮೂರನೆ ಮತ್ತು ನಾಲ್ಕನೆ ಹೀಗೆ ನಾಲ್ಕು ವರ್ಗಗಳನ್ನು ಮಾಡಬೇಕೆಂದು ಸೂಚಿಸಿದ್ದಾರೆ. ಜೀವನವೆಚ್ಚಕ್ಕನುಸಾರವಾಗಿ ಸಮಿತಿಯವರು ತುಟ್ಟಿಭತ್ತೆಯನ್ನು ಗೊತ್ತುಮಾಡಿದ್ದಾರೆ ೧೦೦೦ ಕ್ಕಿಂತ ಹೆಚ್ಚು ಸಂಬಳವಿದ್ದವರಿಗೆ ತುಟ್ಟಿಭತ್ತೆ ಕೊಡಬಾರದೆಂದು ಸೂಚಿಸಲಾಗಿದೆ ನಿವೃತ್ತಿ ಅವಧಿಯನ್ನು ೫೫ರಿಂದ ೫೮ವರ್ಷಕ್ಕೇರಿಸಬೇಕೆಂದುಸೂಚಿಸಿದ್ದಾರೆ. ತಿಂಗಳ ಪೆನಶನ್ನು ಮತ್ತು ಇನ್ನುರನ್ಸ ಯೋಜನೆಯನ್ನು ನಿವೃತ್ತಿಸಹಾಯವೆಂದು ಕೊಡಬೇಕು. (ಪ್ರೀಮಿಯಂವನ್ನು ಸರಕಾರ ಕೊಡಬೇಕು) ಪೆನಶನ್ ಸ್ಕೇಲನ್ನು ನೋಕರನ ಸರಾಸರಿ ಸಂಬಳದ ೧/೬೦ ದಿಂದ ೧/೪೦ ಕ್ಕೇರಿಸಬೇಕು ಮತ್ತು ರೇಲ್ವೆ ನೋಕರರಿಗೆ ದೊರೆಯುತ್ತಿಕ್ಕ ಪ್ರಿವಿಲೆಜ ತಿಕೀಟ ಸೌಕರ್ಯಗಳಂತಹ ಸೌಕರ್ಯಗಳನ್ನು ಸಾಮಾನ್ಯವಾಗಿ ಎಲ್ಲ ನೋಕರರಿಗೆ ಕೊಡಬೇಕು.

ಸಮಿತಿಯವರು ಸುಮ ರು ೪೦೦ ಸಾಕ್ಷಿಗಳನ್ನು ತೆಗೆದುಕೊಂಡು ೩೦೦ ಕ್ಕಿಂತ ಹೆಚ್ಚು ಉತ್ತರಗಳನ್ನು ಬೇರೆ ಬೇರೆ ಸಂಘಸಂಸ್ಥೆ ಮತ್ತು ವ್ಯಕ್ತಿಗಳಿಂದ ತಮ್ಮ ಪ್ರಶ್ನಾವಳಿಗೆ ಪಡೆದಿದ್ದಾರೆ.

ಸರಕಾರದ ನಿರ್ಣಯ

ಸಮಿತಿಯವರು ಮೂಲ ಸಂಬಳ ಮನೆಬಾಡಿಗೆ ಮತ್ತು ಉಳಿದ ಪರಿಹಾರ ಭತ್ತೆಗಳ ಸಂಬಂಧದಲ್ಲಿ ಮಾಡಿದ ಸೂಚನೆಗಳನ್ನು ಸರಕಾರದವರು ಒಪ್ಪಿಕೊಂಡಿರುವರು. ೧೦೦೦ ರೂಪಾಯಿಗಳಿಗಿಂತ ಹೆಚ್ಚು ಸಂಬಳವಿದ್ದವರಿಗೆ ತುಟ್ಟಿ ಭತ್ತೆಯನ್ನು ಕೊಡಬಾರದೆಂದು ಸಮಿತಿಯವರು ಸೂಚಿಸಿದ್ದನ್ನು ಸರಕಾರ ಒಪ್ಪದೆ ೧೦೦೧ ರೂ. ಯಿಂದ ೨೦೦೦ ರೂ. ಸಂಬಳವಿದ್ದವರಿಗೂ ನೂರಕ್ಕೆ ೧೦ ರಷ್ಟು ಆದರೆ ಒಟ್ಟಾರೆ ೧೫೦ ಕ್ಕಿಂತ ಹೆಚ್ಚಿಗಿಲ್ಲದಷ್ಟು ತುಟ್ಟಿಭತ್ತೆಯನ್ನು ಕೊಡಬೇಕೆಂದು ನಿರ್ಧರಿಸಿದ್ದಾರೆ.

ಸದ್ಯದ ಆರ್ಥಿಕ ಪರಿಸ್ಥಿತಿಯಲ್ಲಿ ಕರ ಕೊಡುವವರ ಮೇಲೆ ೩೦ ಕೋಟಿ ರೂಪಾಯಿಗಳ ಭಾರ ಹೇರುವದು. ನಿಜವಾಗಿ ಬಹಳ ಹೆಚ್ಚೆನಿಸುವದು. ಈಗಿದ್ದ ಕರಭಾರವೆ ಹೆಚ್ಚಿಗಿರುವಾಗ ಮತ್ತೆ ಹೆಚ್ಚಿನ ಭಾರ ಹೇರಿದಂತಾಗುವದೆಂದು ಸರಕಾರಕ್ಕೆನಿಸುವದು.

ಸರಕಾರ ಈ ಸಂಬಂಧದಲ್ಲಿ ಮಾಡಿದ ನಿರ್ಣಯದ ಒಕ್ಕಣಿಕೆ ಇಂತಿದೆ—

ಕೇಂದ್ರ ಸಂಬಳ ಸಮಿತಿಯ ವರದಿಯನ್ನು ಮಾರ್ಚ ೬ ನೇ ತಾರೀಕಿನ ಸರಕಾರಿ ಪ್ರಕಟನೆಯಲ್ಲಿ ಆಶ್ವಾಸನ ಕೊಟ್ಟಂತೆ ಇಂದು ಪ್ರಸಿದ್ಧಿಸಲಾಗಿದ್ದು ಅದರ ಜತೆಯಲ್ಲಿಯೆ ಸರಕಾರದ ನಿರ್ಣಯವನ್ನೂ ಪ್ರಸಿದ್ಧಿಸಿದೆ.

ಸಮಿತಿಯವರು ಸಂಬಳದ ಸಂಬಂಧದಲ್ಲಿ ಮಾಡಿದ ಸೂಚನೆಯನ್ನು ಮತ್ತು ಭತ್ತೆ, ಮನೆ ಬಾಡಿಗೆ ಮತ್ತು ಉಳಿದ ಪರಿಹಾರಗಳ ಸಂಬಂಧದಲ್ಲಿ ಮಾಡಿದ ಸೂಚನೆಗಳನ್ನು ಸರಕಾರ ಸ್ವೀಕರಿಸುತ್ತದೆ.

ಅವರು ಸೂಚಿಸಿದ ಕೂಲಿಕಾರ ಕುಟುಂಬದವರಿಗೆ ತಿಂಗಳಿಗೆ ೫೫ ರೂಪಾಯಿ ಕನಿಷ್ಠ ಸಂಬಳ ಮತ್ತು ಮಧ್ಯಮ ವರ್ಗದ ಕುಟುಂಬಿಗಳಿಗೆ ೯೦ ರೂಪಾಯಿ ಸಂಬಳಕ್ಕೆ ಸರಕಾರ ಒಪ್ಪುತ್ತದೆ. ಈ ೫೫ ರೂಪಾಯಿ ಸಂಬಳದಲ್ಲಿ ೨೫ ರೂಪಾಯಿ ತುಟ್ಟಿಭತ್ತೆ ಇರುವದು. ೨೧ ವರುಷಕ್ಕಿಂತ ಕಡಮೆ ವಯಸ್ಸಿರುವ ಕಲಾಕೌಶಲವಿಲ್ಲದ ಸಾಮಾನ್ಯ ನೋಕರನಿಗೆ ೨೧ ಕ್ಕಿಂತ ಎಷ್ಟು ಕಡಮೆ ವಯಸ್ಸಿನವನಿರುವನೊ ಆ ಪ್ರಮಾಣವದಲ್ಲಿ ವರ್ಷಕ್ಕೆ ೧ ರೂ. ಯಂತೆ ಕಡಮೆ ಸಂಬಳ ದೊರೆಯುವದು.

ಕೆಳಗೆ ಬರೆದ ರೀತಿಯಿಂದ ತುಟ್ಟಿಭತ್ತೆ ಕೊಡಲಾಗುವದು. ಆದರೆ ಜೀವನ ವೆಚ್ಚದಲ್ಲಿ ಬಹಳ ಹೆಚ್ಚು ಕಡಮೆಯಾದರೆ ತುಟ್ಟಿಭತ್ತೆಯ ಪ್ರಮಾಣದಲ್ಲಿಯೂ ಹೆಚ್ಚುಕಡಿಮೆಯಾಗುವದು.

೫೦ ರೂಪಾಯಿ ವರೆಗೆ ಸಂಬಳ ಇದ್ದ ನೋಕರರಿಗೆಲ್ಲ೨೫ ರೂಪಾಯಿ ತುಟ್ಟಿಭತ್ತೆ—

೫೧	ರಿಂದ	೧೦೦	೩೫ ರೂ.
೧೦೧	»	೧೫೦	೪೦ »
೧೫೧	»	೨೦೦	೪೫ »
೨೦೧	»	೨೫೦	೫೦ »
೨೫೧	»	೩೦೦	೬೦ »
೩೦೧	»	೫೦೦	೭೦ »
೫೦೧	»	೭೫೦	೮೫ »
೭೫೧	»	೧೦೦೦	೧೦೦ »

ಪ್ರತಿ ಆರು ತಿಂಗಳಿಗೊಮ್ಮೆ ಪರಿಸ್ಥಿತಿಯನ್ನು ನಿಮರ್ಶಿಸಲಾಗುವದು. ಸಮಿತಿಯವರು ಸೂಚಿಸಿದಂತೆ ಜೀವನ ವೆಚ್ಚದಲ್ಲಿ ೧೦೦ ಕ್ಕೆ ೨೦ ರಷ್ಟು ಹೆಚ್ಚು ಅಥವಾ ಕಡಮೆಯಾದಲ್ಲಿ ಅದರಂತೆ ಭತ್ತೆಯಲ್ಲಿ ಬದಲಾವಣೆ ಅವಶ್ಯವಾಗುವದು.

ಸಮಿತಿಯವರು ಸೂಚಿಸಿದಂತೆ ಉಳಿದೆಲ್ಲ ಭತ್ತೆಗಳು ಅಥವಾ ಹಣ ಅಥವಾ ಪದಾರ್ಥಗಳ ರೂಪದಲ್ಲಿ ಕೊಡಲಾಗುತಿದ್ದ ಸವಲತ್ತುಗಳು ಇನ್ನು ಮೇಲೆ ಈ ಭತ್ತೆಯಲ್ಲಿಯೇ ಬರುವವು.

೧೦೦೦ ರೂ. ಮೇಲಿನ ಸಂಬಳದವರಿಗೆ ಈಗಿನ ತುಟ್ಟಿಕಾಲವನ್ನನುಲಕ್ಷಿಸಿ ಸಮಿತಿಯವರು ಸೂಚಿಸಿದಂತೆ ತುಟ್ಟಿಭತ್ತೆ ಕೊಡಬಾರದೆನ್ನುವ ತತ್ವವನ್ನು ಸರಕಾರವು ಒಪ್ಪಲಾರದು. ೧೦೦೧ ರೂಪಾಯಿಂದ ೨೦೦೦ ರೂ. ವರೆಗಿನ ಸಂಬಳದವರಿಗೆ ನೂರಕ್ಕೆ ೧೦ ರಂತೆ ತುಟ್ಟಿಭತ್ತೆ ಕೊಡಲಾಗುವದು. ಆದರೆ ಅವರ ತುಟ್ಟಿಭತ್ತೆ ಪರಮಾವಧಿ ೧೫೦ ರೂ. ಮಿಕ್ಕಕೂಡದು. ಅಲ್ಲದೆ ಗ್ಯಾಜಿಟೆಡ್ ನೌಕರರಲ್ಲಿ ವಿವಾಹಿತ ಹಾಗೂ ಅವಿವಾಹಿತ ನೌಕರರಿಗೆ ಕೊಡಲಾಗುತಿದ್ದ ತುಟ್ಟಿಭತ್ತೆಯಲ್ಲಿರುವ ತಾರತಮ್ಯವನ್ನು ತಿತ್ತಿಹಾಕಬೇಕೆಂಬ ಸೂಚನೆಯನ್ನೂ ಸರಕಾರವು ಸ್ವೀಕರಿಸಲಾರದು. ಈ ತಾರತಮ್ಯವು ಅತ್ಯಂತ ತರ್ಕಬದ್ಧವಿರುವದು. ಅವರವರ ಕೌಟುಂಬಿಕ ಹೊಣೆಗಾರಿಕೆಯನ್ನರಿತು ತಾರತಮ್ಯವನ್ನು ನಿಶ್ಚಯಿಸಲಾಗಿದೆ. ನಾನ್-ಗ್ಯಾಜಿಟೆಡ್ ಅವಿವಾಹಿತ ನೌಕರರಿಗೆ ಮಾತ್ರ ವಿವಾಹಿತರಿಗೆ ಕೊಡುವಷ್ಟೆ ತುಟ್ಟಿಭತ್ತೆಯನ್ನು ಕೊಡಲಾಗುವದು.

ತುಟ್ಟಿಯ ನಗರಗಳಲ್ಲಿ ಗ್ಯಾಜಿಟೆಡ್ ಮತ್ತು ನಾನ್-ಗ್ಯಾಜಿಟೆಡ್ ನೌಕರರಿಗೆ ಸಂಬಳ ಮತ್ತು ತುಟ್ಟಿಭತ್ತೆಯಲ್ಲದೆ, ಮನೆ ಬಾಡಿಗೆ ಮತ್ತು ಪರಿಹಾರ ಭತ್ತೆಗಳು ಸಿಕ್ಕುವವು. ಈ ಭತ್ತೆಗಳನ್ನು ಆಯಾ ನಗರಗಳಲ್ಲಿ ಎಷ್ಟೆಷ್ಟು ಕೊಡಬೇಕೆಂಬದನ್ನು ಸರಕಾರದವರು ತಮ್ಮ ಗೊತ್ತುವಳಿಯಲ್ಲಿ ಸ್ಪಷ್ಟೀಕರಿಸಿರುವರು.

ಈಗಿರುವ ಟಾಯಮ ಸ್ಕೇಲ ಪದ್ಧತಿಯನ್ನು ಇನ್ನು ಮುಂದೆಯೂ ಅನುಸರಿಸಲಾಗುವದು. ಸಬಾರ್ಡಿನೇಟ ಮತ್ತು ಇನ್‌ಫೀರಿಯರ ವರ್ಗಗಳನ್ನು ತೆಗೆದುಹಾಕಿ ಅವುಗಳಿಗೆ ಅನುಕ್ರಮವಾಗಿ ಮೂರು ಮತ್ತು ನಾಲ್ಕನೇ ವರ್ಗಗಳೆಂದು ಹೆಸರಿಡಲಾಗುವದು. ಸರಕಾರದ ಭಿನ್ನ ಭಿನ್ನ ವರ್ಗದ ಸಾವಿರಾರು ನೌಕರರನ್ನು ಅನುರೂಪವಾದ ಪ್ರಮಾಣದಲ್ಲಿ ಸೇರಿಸಬೇಕಾಗಿರುವದು. ಸರಕಾರದವರು ಈ ಕೆಲಸವನ್ನು ಆದಷ್ಟು ಬೇಗ ಪೂರೈಸಿ, ಆಯಾ ವರ್ಗದವರಿಗೆ ಅನ್ವಯಿಸುವ ಸಂಬಳ ಪ್ರಮಾಣಗಳನ್ನು ತೀವ್ರ ಪ್ರಸಿದ್ಧಿಸಿ ಹೆಚ್ಚಿನ ಸಂಬಳ ಹಾಗೂ ಹಿಂದಿನ ಬಾಕಿ ಬೇಗನೆ ಅವರ ಕೈಗೆ ಹತ್ತುವಂತೆ ಪ್ರಯತ್ನಿಸುವರು.

ನೌಕರರು ತಮಗೆ ಅನ್ವಯಿಸುವ ಹೆಚ್ಚಿನ ಸಂಬಳ ಮತ್ತು ಭತ್ತೆಗಳನ್ನು ೧—೧—೪೭ ರಿಂದ ಮತ್ತು ಹೊಸ ಸಂಬಳ ಜಾರಿ ಮಾಡಿದ ಆಜ್ಞೆ ಹೊರಡಿಸಿದಂದಿನಿಂದ ಇವುಗಳಲ್ಲಿ ಅವರಿಗೆ ಯಾವುದು ಲಾಭದಾಯಕವಿರುವದೋ ಆ ದಿನದಿಂದ ಪಡೆಯುಕೊಳ್ಳಬಹುದು.

ರಜೆ, ನಿವೃತ್ತಿ ವೇತನ ಮೊದಲಾದವುಗಳನ್ನು ಸರಕಾರದವರು ಇನ್ನೂ ವಿಚಾರಿಸುತಿದ್ದು ನಿರ್ಣಯವಾದ ಕೂಡಲೇ ಪ್ರಸಿದ್ಧಿಸಲಾಗುವದು.

ಕೊನೆಯದಾಗಿ ಈ ಹೆಚ್ಚಿನ ವೆಚ್ಚದಿಂದ ಸರಕಾರಕ್ಕೆ ೩೦ ಕೋಟಿ ರೂ. ಹೆಚ್ಚು ಖರ್ಚು ಬರುವದು. ಅದರಲ್ಲಿ ೨೪ ಕೋಟಿ ರೂಪಾಯಿಗಳು ರೇಲ್ವೆ ಹಾಗೂ ಅಂಚೆ ಮತ್ತು ತಂತಿ ಶಾಖೆಗಳಿಗಾಗಿಯೇ ವೆಚ್ಚ ಮಾಡಬೇಕಾಗುವದು. ರಾಷ್ಟ್ರದ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ಮೊದಲೇ ಕರಭಾರದಿಂದ ಬಳಲುವ ಜನರ ಮೇಲೆ ಇದು ಹೆಚ್ಚಿನ ಭಾರವಾಗುವದು. ಆದಾಗ್ಯೂ ಸರಕಾರದ ನೌಕರರಿಗೆ ಸಾಕಷ್ಟು ಸಂಬಳ ಕೊಡುವದು ನ್ಯಾಯ್ಯವೆಂಬ ಮಾತನ್ನು ಪ್ರಜರು ಒಪ್ಪುವರೆಂದು ಸರಕಾರಕ್ಕೆ ವಿಶ್ವಾಸವಿರುವದು. ಅದರಂತೆ ಸರಕಾರದ ಸೇವೆಯಲ್ಲಿರುವ ಎಲ್ಲ ನೌಕರರು ಇನ್ನು ಸಂತುಷ್ಟರಾಗಿ ಅವಿಚ್ಛಿನ್ನವಾಗಿ ಕೆಲಸ ಮಾಡಿ ಉತ್ಪಾದನೆಯನ್ನು ಹೆಚ್ಚಿಸಬೇಕೆಂಬ ಸರಕಾರದ ಕರೆಯಲ್ಲಿ ಜನರೂ ದನಿಗೂಡಿಸುವರೆಂದು ನಂಬಿರುತ್ತೇವೆ.

ಈ ಕೇಂದ್ರ ಸಂಬಳ ಸಮಿತಿಯನ್ನು ೧೯೪೬ ನೇ ಇಸ್ವಿಯ ಮೇ ೧೦ ನೇ ತಾರೀಕಿಗೆ ಸರ್ ಶ್ರೀನಿವಾಸ ವರದಾಚಾರಿಯವರ ಅಧ್ಯಕ್ಷತೆಯಲ್ಲಿ ನೇಮಿಸಲಾಗಿತ್ತು, ಶ್ರೀ ಹುಸೇನ ಇಮಾಮ ಕೌನ್ಸಿಲ್ ಆಫ್ ಸ್ಟೇಟಿನ ಅಧ್ಯಕ್ಷರು, ಎನ್. ವಿ ಗಾಡಗೀಳ, ಫ್ರ್ಯಾಂಕ ಆಂಥನಿ, ಡಾ. ಜೆ. ಸಿ. ಚತರ್ಜಿ, ಸರದಾರ ಮಂಗಳಸಿಂಗ, ಎನ್. ಎಂ. ಜೋಶಿ, ಶ್ರೀ ವಡೀಲಾಲ ಲಲ್ಲೂಭಾಯಿ, ಮತ್ತು ಸಿ ವಿ ಎಸ್ ರಾವ ಇವರು ಉಳಿದ ಸದಸ್ಯರಾಗಿದ್ದರು. ಶ್ರೀ ಕೆ. ಆರ್. ಸಿ. ಅಯ್ಯಂಗಾರರು ಕಾರ್ಯದರ್ಶಿಗಳಾಗಿದ್ದರು.

ಸಮಿತಿಯ ಎಲ್ಲ ಸದಸ್ಯರು ವರದಿಗೆ ಸಹಿಮಾಡಿರುವರು. ಕೆಲ ವಿಶಿಷ್ಟ ಮುದ್ದೆಗಳಲ್ಲಿ ಮಾತ್ರ ಸ್ವಲ್ಪ ಭಿನ್ನಾಭಿಪ್ರಾಯಗಳನ್ನು ಟಿಪ್ಪಣಿಯಲ್ಲಿ ವ್ಯಕ್ತಪಡಿಸಲಾಗಿದೆ. ಈ ವರದಿ ೪೩೬ ಪುಟಗಳದಿದ್ದು ಮೂರು ಮುಖ್ಯ ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಹುಸೇನ ಇಮಾಮರು ಒಂದು ಟಿಪ್ಪಣಿಯನ್ನು ಜೋಡಿಸಿರುವರು.

ಮೊದಲನೇ ಭಾಗ ಕೇವಲ ಐತಿಹಾಸಿಕವಾಗಿದ್ದು ಸಮಿತಿಯವರು ಯಾವ ಪದ್ಧತಿಯನ್ನನುಸರಿಸಿರುವರೆಂಬದನ್ನು ಅದರಲ್ಲಿ ವಿವೇಚಿಸಲಾಗಿದೆ. ಎರಡನೇ ಭಾಗದಲ್ಲಿ ಎಲ್ಲ ಕೇಂದ್ರ ನೋಕರ ವರ್ಗದವರ ಪರಿಸ್ಥಿತಿಗೆ ಸಂಬಂಧಿಸಿದ ಸಮಸ್ಯೆಗಳ ಮುಖ್ಯಾಂಶವನ್ನು ವಿವರಿಸಲಾಗಿದೆ. ಎರಡನೆ ಭಾಗದಲ್ಲಿ ವಿವೇಚಿಸಲ್ಪಟ್ಟ ಮುದ್ದೆಗಳಿಗನುಸಾರವಾಗಿ ಮುಖ್ಯ ಖಾತೆಗಳಲ್ಲಿಯ ನೋಕರರ ಬಗ್ಗೆ ವಿವರವಾಗಿ ಸೂಚನೆಗಳನ್ನು ಮೂರನೆ ಭಾಗದಲ್ಲಿ ಕೊಡಲಾಗಿದೆ.

ಸಮಿತಿಯವರು ಮಾಡಿದ ಸೂಚನೆಗಳು ಗವರ್ನರ ಜನರಲ್‌ರ ಆಡಳಿತಕ್ಕೊಳಪಟ್ಟ ನೌಕರರಿಗೆ ಮಾತ್ರ ಅನ್ವಯಿಸುತ್ತವೆ.

೧೯೪೮ ಮೊದಲೇ ಬ್ರಿಟಿಶರ ಅಧಿಕಾರ ತ್ಯಾಗ?

ಮೌಂಟ ಬ್ಯಾಟನ್ನರ ಯೋಜನೆಯ ಬಗ್ಗೆ ಬ್ರಿಟಿಶ ಮಂತ್ರಿಮಂಡಲದಲ್ಲಿ ಮತಭೇದ?

ಮೊನ್ನೆ ಶನಿವಾರ ತಾ. ೧೦ ಕ್ಕೆ ವಾಯಿಸರಾಯರು ಅಕಸ್ಮಾತ್ತಾಗಿ ಒಂದು ಪ್ರಕಟನೆ ಹೊರಡಿಸಿ, ಪಂ. ಜವಾಹರಲಾಲ ನೆಹರೂ, ಎಂ. ಎ. ಜಿನ್ನಾ ಸರದಾರ ವಲ್ಲಭಭಾಯಿ ಪಟೇಲ, ಲಿಯಾಕತ ಅಲ್ಲಿಖಾನ, ಸರದಾರ ಬಲದೇವಸಿಂಗರನ್ನು ಒಟ್ಟಾಗಿ ಮೇ ೧೭ ಮುಂಜಾನೆ ೧೦—೩೦ ಕ್ಕೆ ತಮ್ಮನ್ನು ಕಾಣಲು ಆಮಂತ್ರಿಸಿದ್ದೇವೆಂದು ತಿಳಿಸಿದರು. ಅಂದು ಸಂಜೆ ಸಂಸ್ಥಾನ ಸಂಧಾನ ಸಮಿತಿಯಲ್ಲಿದ್ದ ಹಿಂದೀ ಸಂಸ್ಥಾನಗಳ ಪ್ರತಿನಿಧಿಗಳನ್ನೂ ಆಮಂತ್ರಿಸಲಾಗಿತ್ತು. ಹಿಂದೀಯರ ಕೈಗೆ ಅಧಿಕಾರ ವರ್ಗಾಯಿಸಲು ಚಕ್ರವರ್ತಿ ಸರಕಾರದವರು ಈಗ ಮಾಡಿದ ಯೋಜನೆಯನ್ನು ಮುಂದಾಳುಗಳ ಮುಂದಿಡುವದೇ ಸಭೆಯ ಉದ್ದೇಶವೆಂದು ಪ್ರಕಟನೆಯಲ್ಲಿ ಸೂಚಿಸಲಾಗಿತ್ತು. ಆದರೆ ಮರು ದಿನ ಅಷ್ಟೇ ಅಕಸ್ಮಾತ್ತಾಗಿ ಇನ್ನೊಂದು ಪ್ರಕಟನೆ ಹೊರಟು ತಾ. ೧೭ ರ ಸಭೆಯನ್ನು ರದ್ದುಗೊಳಿಸಲಾಗಿದೆಯೆಂದೂ ಬದಲಿಗೆ ಜೂನ ೨ ಕ್ಕೆ ಅದನ್ನು ಸೇರಿಸಲಾಗುವದೆಂದೂ ತಿಳಿಸಿತು.

ವಾಯಿಸರಾಯ-ಮಂತ್ರಿಮಂಡಲ ಮತಭೇದ?

ಈ ಅಕಸ್ಮಾತ್ ಬದಲಾವಣೆಯಿಂದ ಸ್ವಾಭಾವಿಕವಾಗಿ ಅನೇಕ ತರ್ಕವಿತರ್ಕಗಳು ಹೊರಟವು. ಲಾರ್ಡ ಇಸ್ಮೆಯವರು ಹಿಂದುಸ್ತಾನದಿಂದ ಒಯ್ದ ಮೌಂಟಬ್ಯಾಟನ್ನರ ಅಧಿಕಾರ ತ್ಯಾಗ ಯೋಜನೆಯ ಬಗ್ಗೆ ಬ್ರಿಟಿಶ ಮಂತ್ರಿಮಂಡಲದಲ್ಲಿ ತೀವ್ರ ಮತಭೇದವಾಗಿದೆಯೆಂದು ಭಾವಿಸಲಾಯಿತು. ಮುಖ್ಯವಾಗಿ, ಹಿಂದುಸ್ತಾನದ ವಿಭಜನೆಯ.. ಅರ್ಥಾತ್ ಪಂಜಾಬ, ಬಂಗಾಲ ವಿಭಜನೆಗಳನ್ನೊಳಗೊಂಡ ಹಿಂದುಸ್ತಾನ ವಿಚ್ಛೇದನ— ಯೋಜನೆಯೇ ಮೌಂಟಬ್ಯಾಟನ್ನರದಾಗಿದ್ದು ಇದಕ್ಕೆ ಬೆವಿನ್, ಕ್ರಿಪ್ಸ, ಎ. ವಿ. ಅಲೆಗ್ಝಾಂಡರ ಮೊದಲಾದ ಬ್ರಿಟಿಶ ಮಂತ್ರಿಗಳು ಒಪ್ಪಿಲ್ಲವಂತೆ. ವಿಭಜನೆಯಿಂದ ಹಿಂದುಸ್ತಾನದ ಸಂರಕ್ಷಣೆ ತೀರ ದುರ್ಬಲವಾಗಿ ಅದು ಹೆರವರಿಗೊಂದು ಭಾರಸ್ವರೂಪವಾಗುವದೆಂದು ಅವರು ಬಗೆದಿದ್ದಾರಂತೆ. ಈ ಮತಭೇದವನ್ನು ಸರಿಪಡಿಸಿಕೊಳ್ಳುವಗೋಸ್ಕರವೇ ಸಭೆಯನ್ನು ಮುಂದೆ ಹಾಕಲಾಯಿತೆಂದು ತರ್ಕಿಸಲ್ಪಟ್ಟಿತು. ಈ ಊಹೆಗಳನ್ನು ನಿರಸನಗೊಳಿಸಲು ಹಿಂದುಸ್ತಾನ ಕಚೇರಿ ಮಾಡಿದ ಪ್ರಯತ್ನಗಳು ಅಷ್ಟು ಯಶಸ್ವಿಯಾಗಲಿಲ್ಲವೆನ್ನಬೇಕು. ಪಾರ್ಲಮೆಂಟ ಸಭೆಗೆ ಈಗ ಕೆಲ ದಿನಗಳ ಮಟ್ಟಿಗೆ ರಜೆ ಇರುವದರಿಂದ ಬ್ರಿಟಿಶ ಸರಕಾರದ ನಿಶ್ಚಿತ ಯೋಜನೆಯನ್ನು ಹಿಂದುಸ್ತಾನದಲ್ಲೂ ಇಂಗ್ಲಂಡಿನಲ್ಲೂ ಏಕಕಾಲಕ್ಕೆ ಪ್ರಸಿದ್ಧಿಸುವ ದೃಷ್ಟಿಯಿಂದ ಪಾರ್ಲಮೆಂಟು ಮರಳಿಸೇರುವಹೊತ್ತಿಗೆ ಪಂಚಪ್ರಮುಖರ ಸಭೆಸೇರಿಸುವದೊಳಿತೆಂದು ಈ ಬದಲಾವಣೆ ಮಾಡಲ್ಪಟ್ಟಿದೆಯೆಂದು ನಂಬಿಸಲು ಬ್ರಿಟಿಶ ಅಧಿಕಾರಿ ವರ್ಗಗಳು ಹವಣಿಸಿದವು. ಆದರೆ ಅದರನಂತರದಘಟನೆಗಳು ಈ ನೆವವನ್ನು ಸಮರ್ಥಿಸುವಂತಿಲ್ಲ. ಏಕೆಂದರೆ ಬ್ರಿಟಿಶ ಸರಕಾರದೊಡನೆ ವಾಯಿಸರಾಯರ ಯೋಜನೆಯನ್ನು ಚರ್ಚಿಸಿ ಒಪ್ಪಿಗೆ ಪಡೆದು ಬರಲು ಹೋದ ಜನರಲ್ ಲಾರ್ಡ ಇಸ್ಮೆಯವರು ಇನ್ನೂ ಉಚ್ಚ ಮಂತ್ರಿ ವರ್ಗಗಳೊಡನೆ ವಿಚಾರ ವಿನಿಮಯವನ್ನು ಸಾಗಿಸುತ್ತಲೆ ಇದ್ದಾರೆ. ತಮ್ಮ ಯೋಜನೆಯನ್ನು ಸಮರ್ಥಿಸಿಕೊಳ್ಳಲು ಸ್ವತಃ ವಾಯಿಸರಾಯರು ಲಂಡನ್ನಿಗೆ ಹಾರಲಿರುವರೆಂಬ ಸುದ್ದಿ ಕೂಡ ಹಬ್ಬಿತ್ತು.

೧೯೪೮ ಜೂನ್ ಮೊದಲೇ ಅಧಿಕಾರತ್ಯಾಗ?

ಈ ನಡುವೆ ಬ್ರಿಟಿಶ ಸರಕಾರದವರು ಅಧಿಕಾರತ್ಯಾಗಕ್ಕಾಗಿ ಮಾಡಿದ ಯೋಜನೆಯ ಸ್ವರೂಪದ ಬಗ್ಗೆ ಸಿಕ್ಕ ಸಿಕ್ಕಂತೆ ಊಹಾಪೋಹಗಳು ನಡೆದಿವೆ. ಈ ಯೋಜನೆ ಮೂರ್ತಸ್ವರೂಪಕ್ಕೆ ಬರಬೇಕಾದರೆ ಲಾರ್ಡ ಇಸ್ಮೆಯವರು ಹಿಂದುಸ್ತಾನಕ್ಕೆ ಮರಳಿ ವಾಯಿಸರಾಯರ ಯೋಜನೆಗೆ ಬ್ರಿಟಿಶ ಸರಕಾರದ ಪ್ರತಿಕ್ರಿಯೆಯೇನೆಂದು ತಿಳಿಸಿದ ನಂತರ ವಾಯಿಸರಾಯ–ಬ್ರಿಟಿಶ ಮಂತ್ರಿಮಂಡಲಗಳ ನಡುವೆ ಮತ್ತೆ ವಿಚಾರ ವಿನಿಮಯವಾಗುವದವಶ್ಯವೆಂದು ರಾಯಟರ ವಿಶೇಷ ಸುದ್ದಿಗಾರನ ಹೇಳಿಕೆ. ಇಂದಿಗಾದರೂ ಸರಕಾರವು ವಾಯಿಸರಾಯ ಮೌಂಟಬ್ಯಾಟನ್ನರೂ ಮೇ ೧೬ ರ ಬ್ರಿಟಿಶ ಯೋಜನೆಯೇ ಹಿಂದೀ ಸಮಸ್ಯೆಗೆ ಅತ್ಯುತ್ತಮ ಪರಿಹಾರವೆಂದು

—೧೩ ನೇ ಪುಟಕ್ಕೆ

ಅಂತರರಾಷ್ಟ್ರೀಯ

"ಯುಕ್ತರಾಷ್ಟ್ರ"ದಲ್ಲಿ ಪಾಲಿಸ್ತಾನ

ಯುಕ್ತರಾಷ್ಟ್ರ ಸಂಘದ ವಿಶೇಷಾಧಿವೇಶನದಲ್ಲಿ ನಡೆದ ಪಾಲಿಸ್ತಾನ ಪ್ರಶ್ನೆಯ ಚರ್ಚೆ ಈ ಸಂಚಿಕೆ ಓದುಗರ ಕೈಸೇರುವ ಮೊದಲೇ ಮುಗಿದು ಒಂದು ನಿರ್ಣಯಕ್ಕೆ ಬರುವಂತೆ ತೋರುತ್ತದೆ. ಆದರೆ ಈ ನಿರ್ಣಯು ಒಂದು ನಿರ್ಣಯವೆನಿಸಲು ಯೋಗ್ಯವಾಗುವಂತೆ ಕಾಣುವದಿಲ್ಲ. ಅರಬ ರಾಷ್ಟ್ರಗಳೂ ಹಿಂದುಸ್ತಾನವೂ ರಶಿಯವೂ ಸೇರಿ ಪಾಲಿಸ್ತಾನದ ಸ್ವಾತಂತ್ರ್ಯದ ಪ್ರಶ್ನೆಯನ್ನು ಎದುರಿಗೆ ತರಲು ಮಾಡಿದ ಪ್ರಯತ್ನಗಳನ್ನು ಆಂಗ್ಲೋ ಅಮೇರಿಕನ್ನರು ಸಾಹಸಪಟ್ಟು ಸೋಲಿಸಿದರು. ಪಾಲಿಸ್ತಾನ ಸಮಸ್ಯೆಯ ಬಗ್ಗೆ ವಿಚಾರಣೆ ನಡೆಸಿ ವರದಿಮಾಡಲು ನೇಮಿಸಲ್ಪಡಬೇಕಾದ "ಸತ್ಯಶೋಧಕ ಸಮಿತಿ"ಯ ಕಾರ್ಯಕ್ಷೇತ್ರದ ಸೀಮೆ ಹಾಕಿಕೊಡುವಾಗ, ಪಾಲಿಸ್ತಾನಕ್ಕೆ ಒಡನೆ ಸ್ವಾತಂತ್ರ್ಯಕೊಡುವ ವಿಷಯದಲ್ಲಿಯೂ ಸಮಿತಿಯುವರು ಸಲಹೆ ಕೊಡಬೇಕು" ಎಂಬ ಅಂಶವನ್ನು ಸೇರಿಸಲು ಅರಬ, ಹಿಂದೀ, ರಶಿಯನ್ ಪ್ರತಿನಿಧಿಗಳು ಪಟ್ಟ ಶ್ರಮ ವಿಫಲವಾಯಿತು. ಬದಲಿಗೆ "ಪಾಲಿಸ್ತಾನದಲ್ಲಿ ಅರಬರ, ಯಹೂದ್ಯರ ಮತ್ತು ಕ್ರಿಶ್ಚಿಯನ್ನರ ಧಾರ್ಮಿಕ ಹಿತಸಂಬಂಧಗಳನ್ನೂ ಸಮಿತಿ ಗಮನಿಸಬೇಕು" ಎಂಬ ಅಂಶ ಸೇರಿಸಲ್ಪಟ್ಟಿತು. "ಪಾಲಿಸ್ತಾನದ ಜನತೆಯ ಹಕ್ಕುಬಾಧ್ಯತೆಗಳ" ವಿಚಾರವನ್ನು ಪರಿಶೀಲಿಸಲಿಕ್ಕೂ ಈ ಸತ್ಯಶೋಧಕ ಸಮಿತಿಗೆ ಅಧಿಕಾರ ಕೊಡಲಾಗಿದ್ದರೂ ಈ "ಜನತೆ" ಯೆಂಬ ಶಬ್ದ ಎಷ್ಟು ಚಪಲವಾದುದೆಂದೂ ಅದೆಷ್ಟು ಅನರ್ಥಕಾರಿಯಾಗಲಿಲ್ಲದೆಂದೂ ಹಿಂದೀ ಪ್ರತಿನಿಧಿ ಅಸಫ ಅಲ್ಲಿಯವರು ವಿವರಿಸಿದರು. ಸತ್ಯಶೋಧಕ ಸಮಿತಿಯು ವರದಿ ಸೆಪ್ಟೆಂಬರದೊಳಗೆ, ಅಂದರೆ ಯುಕ್ತರಾಷ್ಟ್ರ ಸಂಘದ ಮುಂದಿನ ಸಾಮಾನ್ಯ ಅಧಿವೇಶನ ಸಮಯಕ್ಕೆ ಸರಿಯಾಗಿ, ಸಿದ್ಧವಾಗಬೇಕೆಂದು ನಿರ್ದೇಶಿಸಲಾಗಿದೆ.

ಬಡ ಪಾಲಿಸ್ತಾನದ ಪ್ರಶ್ನೆಯಲ್ಲಿ ಕೂಡ ಹಿರಿ ರಾಷ್ಟ್ರಗಳ ವೈಷಮ್ಯ ತಲೆದೋರದಿರಲಿಲ್ಲ. ಪಾಲಿಸ್ತಾನದ ಸ್ವಾತಂತ್ರ್ಯದ ಪ್ರಶ್ನೆಯಲ್ಲಿ ಆಸ್ಥೆವಹಿಸಿದ ರಶಿಯಾದ ವಿರುದ್ಧ ಆಂಗ್ಲೋ-ಅಮೇರಿಕನ್ ಗುಂಪು ಹೋರಾಡಿತು ಈಗ ಈ "ಸತ್ಯಶೋಧಕ" ಸಮಿತಿಯ ಸದಸ್ಯತ್ವಕ್ಕೆ ಯಾವ ಯಾವ ರಾಷ್ಟ್ರವನ್ನಾರಿಸಬೇಕೆಂಬ ಪ್ರಶ್ನೆಯಲ್ಲಿ ಇನ್ನಷ್ಟು ಜಟಿಲವಾದ ಬಿಕ್ಕಟ್ಟು ತಲೆದೋರುವಂತಿದೆ. ಆಂಗ್ಲೋ ಅಮೇರಿಕನ್ನರು ಈ ಸಮಿತಿಯಿಂದ ರಶಿಯಾವನ್ನು ಹೊರಗಿರಿಸುವ ಉದ್ದೇಶದಿಂದ ಲಿಯೋ ಏನೋ ಎಂಬಂತೆ ಸಮಿತಿಯಲ್ಲಿ ಚಿಕ್ಕ ರಾಷ್ಟ್ರಗಳ "ತಟಸ್ಥ" ಸಮಿತಿಯನ್ನು ಆರಿಸಬೇಕನ್ನುತ್ತಾರೆ ಅಂದರೆ, ಪ್ರಮುಖ ರಾಷ್ಟ್ರಗಳನ್ನೂ "ಹಿತಸಂಬಂಧವುಳ್ಳ" ಅರಬ ರಾಷ್ಟ್ರಗಳನ್ನೂ ಹೊರಗಿರಿಸಬೇಕೆಂದು ಅವರ ಹಟ. ಭದ್ರತಾ ಮಂಡಲದ ೧೧ ಸದಸ್ಯ ರಾಷ್ಟ್ರಗಳೇ ಸತ್ಯಶೋಧಕ ಸಮಿತಿಯಾಗಬೇಕೆಂದು ರಶಿಯಾದ ಸೂಚನೆ. ಈ ಭಿನ್ನಾಭಿಪ್ರಾಯ ಯಾವ ಬಗೆಯಲ್ಲಿ ಬಿಡಿಸಲ್ಪಡುವದೋ ಹೇಳಲಾಗಲ್ಲ.

ನ್ಯಾಯದ ಆಶೆಯಿಲ್ಲ?

ಈ ಸತ್ಯಶೋಧಕ ಸಮಿತಿಯಿಂದ ಅಂಥದೇನನ್ನೂ ನಿರೀಕ್ಷಿಸುವವರು ನಿರಾಶರಾಗಬೇಕಾದೀತೆಂದು ಈಗಾಗಲೇ ಊಹಿಸಬಹುದಾಗಿದೆ. ಮೊದಲನೆಯದಾಗಿ ಪಾಲಿಸ್ತಾನದ ಸ್ವಾತಂತ್ರ್ಯದ ಪ್ರಶ್ನೆಯನ್ನೇ ಮೂಲೆಗುಂಪು ಮಾಡಬಯಸಿದವರ ಸಾಹಸ ಯಶಸ್ವಿಯಾದುದರಿಂದ ಸಮಿತಿಯ ಮಹತ್ವ ಅರ್ಧದಷ್ಟು ಇಳಿದುಹೋಗಿದೆ. ನಿಜವಾಗಿ ಈ ನಿರ್ಣಯದಿಂದ ಅರಬ ರಾಷ್ಟ್ರಗಳು ಎಷ್ಟು ಮನನೊಂದಿವೆಯೆಂದರೆ, ಸಿರಿಯನ್ ಪ್ರತಿನಿಧಿ ಖೋರಿಯವರು ಇದನ್ನು ಪ್ರತಿಭಟಿಸುವ ಸಲುವಾಗಿ ಈ ಅಧಿವೇಶನವನ್ನೇ ಬಹಿಷ್ಕರಿಸಬೇಕೆಂದು ಸೂಚಿಸಿದರಂತೆ. ಎರಡನೆಯದಾಗಿ, ಯಹೂದ್ಯ ಪಕ್ಷಪಾತಿಗಳ ಬಹುಮತವಿರುವ ಯುಕ್ತರಾಷ್ಟ್ರ ಸಂಘದಲ್ಲಿ ಆರಿಸಲ್ಪಡುವ "ತಟಸ್ಥ" ಅರಬೇತರ ರಾಷ್ಟ್ರಗಳ ಸತ್ಯಶೋಧಕರಾದರೂ ಈ ವಿಷಯದಲ್ಲಿ ಆಂಗ್ಲೋ ಅಮೇರಿಕನ್ನರ ಬಾಲ ಬಡಿಯುವವರೇ ಆಗದಿರರು. ಗ್ರೀಸ, ಅಲ್ಬೇನಿಯಾಗಳ ಬಗ್ಗೆ ನೇಮಿಸಲ್ಪಟ್ಟ ಯುಕ್ತರಾಷ್ಟ್ರ ಸತ್ಯಶೋಧಕ ಸಮಿತಿಗಳಲ್ಲಿ ಪ್ರಬಲ ರಾಷ್ಟ್ರಗಳ ಬಣಗಳು ಸ್ಪಷ್ಟವಾಗಿ ತಲೆದೋರಿದ್ದು ಇಲ್ಲಿ ನಿದರ್ಶನವಾಗಬಹುದು. ಯಹೂದ್ಯರ ಮತ್ತು ಪಾಲಿಸ್ತಾನ ಅರಬರ ಪ್ರಾತಿನಿಧಿಕ ಸಂಸ್ಥೆಗಳಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಆಮಂತ್ರಣ ಕೊಡುವಾಗಲೂ ಯುಕ್ತರಾಷ್ಟ್ರ ಸಂಘದಲ್ಲಿ ಯಹೂದ್ಯ ಪಕ್ಷಪಾತವೇ ಗೋಚರಕ್ಕೆ ಬಂತು. ಪಾಲಿಸ್ತಾನ ಯಹೂದ್ಯ ಏಜನ್ಸಿಯ ಹೇಳಿಕೆಯನ್ನು ರಾಜಕೀಯ ಸಮಿತಿ ಕೇಳಿಕೊಳ್ಳಲೇಬೇಕು, ಅರಬ ಸಂಸ್ಥೆಯಾದ ಪಾಲಿಸ್ತಾನ ಅರಬ ಪಕ್ಷ ಸಮಿತಿಯ ಹೇಳಿಕೆ ಕೇಳುವದು ಬಿಡುವದು ರಾಜಕೀಯ ಸಮಿತಿಯ ಇಚ್ಛೆಯನ್ನವಲಂಬಿಸಲಿ ಎಂದು ನಿರ್ಣಯ ಮಾಡಲ್ಪಟ್ಟಿತ್ತು. ಯಹೂದ್ಯರಲ್ಲಿಯೂ ತಮ್ಮಲ್ಲಿಯೂ ಪಂಕ್ತಿಭೇದ ಮಾಡಿದರೆ ನಾವು ಸಮಿತಿಯ ಮುಂದೆ ಸಾಕ್ಷ್ಯ ಹೇಳುವದಿಲ್ಲೆಂದು ಅರಬ ಪರಿಷ್ಕರು ಸಾರಿದ ಮೇಲೆಯೆ ಉಭಯ ಸಂಸ್ಥೆಗಳಿಗೆ ಸಮಾನ ಸ್ಥಾನಮಾನವೀಯಲ್ಪಟ್ಟಿತು.

ಅಸಫ ಅಲ್ಲಿಯವರ ಸ್ತುತ್ಯ ಕಾರ್ಯ

ಹೀಗೆ ಪಾಲಿಸ್ತಾನ ಸ್ವಾತಂತ್ರ್ಯವನ್ನು ಗವಾನಿಸವ ಸತ್ಯಶೋಧನ ಬ್ರಿಟಿಶರಿಗೂ ಯಹೂದ್ಯರಿಗೂ ಮಾತ್ರ ಅನುಕೂಲವಾಗಬಲ್ಲದು. ಅವರಿಬ್ಬರಿಗೂ ಅದು ಸಮಯವನ್ನು ಕೊಡುವದು. ಒಡನೆ ಸ್ವಾತಂತ್ರ್ಯವೆಂದರೆ ತಮಗೆ ಅನಿಯಮಿತ ವಲಸೆ ಬರುವ ಅವಕಾಶದ ಕೊನೆಯೆಂದು ಯಹೂದ್ಯರಿಗೆ ಗೊತ್ತಿದೆ. ಬ್ಯಾಲ್ಫೋರ ಘೋಷಣೆಯನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ. ಅದರ ಪ್ರಕಾರ ವಲಸೆ ಬಂದು ತಮ್ಮ ಸಂಖ್ಯೆ ಪಾಲಿಸ್ತಾನದಲ್ಲಿ ಅರಬರನ್ನು ಮೀರಿಸಿದಾಗಲೆ ಯಹೂದ್ಯರು ಸ್ವಾತಂತ್ರ್ಯಕ್ಕೆ ಅಣಿಯಾಗಿರುವರು. ಆಗ ಆ ರಾಜ್ಯದಲ್ಲಿ ೧೫೦೦ ವರ್ಷಗಳಿಂದ ಅಲ್ಲಿ ಬಾಳಿದ ಅರಬರು ಅಲ್ಪಸಂಖ್ಯಾಕರಾಗುವರು. ಬ್ರಿಟಿಶರಾದರೂ ಯುಕ್ತರಾಷ್ಟ್ರ ಸಂಘಕ್ಕೆ ಈ ಪ್ರಶ್ನೆಯನ್ನೊಪ್ಪಿಸಿದ ನೆವದಿಂದ, ಪಾಲಿಸ್ತಾನದಲ್ಲಿ ಬಲವಾಗಿ ಊರಿದ ಕಾಲನ್ನು ಹಿಂದೆಗೆಯದಿರಲು ಹವಣಿಸುತ್ತಿದ್ದಾರೆ. ಈ ವಿಚಾರಗಳಲ್ಲಿ ಯಹೂದ್ಯ ಮತ್ತು ಪಾಲಿಸ್ತಾನ ಅರಬ ಪ್ರತಿನಿಧಿಗಳಿಗೆ ಹಿಂದೀ ಪ್ರತಿನಿಧಿಗಳಾದ ಅಸಫ ಅಲ್ಲಿಯವರು ಅನೇಕ ಹೃದಯಭೇದಕ ಪ್ರಶ್ನೆಗಳನ್ನು ಹಾಕಿದರು. "ಮೃತ ಸಮುದ್ರ (ಪಾಲಿಸ್ತಾನಕ್ಕೆ ಹೊಂದಿಕೊಂಡಿದೆ) ದಲ್ಲಿ ೫೦೦೦ ಕೋಟಿ ಡಾಲರು ಬೆಲೆ ಬಾಳುವಷ್ಟು ಖನಿಜಗಳೂ ರಸಾಯನಿಕ ದ್ರವ್ಯಗಳೂ ಇವೆಯೆಂದು ೧೯೧೫ ರಲ್ಲಿಯೇ ಪ್ರಸಿದ್ಧವಾಗಿದ್ದು ಆ ಬಗ್ಗೆ ಹೊರಗಿನವರು ಬಹಳ ಆಸ್ಥೆ ತೋರಿಸುತ್ತ ಇಲ್ಲವೆ?" ಎಂದು ಅರಬ ಪ್ರತಿನಿಧಿಗಳಿಗೆ ಕೇಳಿದರವರು. ಯಹೂದ್ಯ ಪ್ರತಿನಿಧಿಗಳಿಗೆ ಅವರು ಕೇಳಿದ ಪ್ರಶ್ನೆಗಳು ಅತ್ಯಂತ ಅರ್ಥಪೂರ್ಣವಾಗಿದ್ದವು. ಪಾಲಿಸ್ತಾನದಲ್ಲಿ ಯಹೂದ್ಯರ ಆಕಾಂಕ್ಷೆಗಳನ್ನು ಈಡೇರಿಸುವವೆಂದರೆ ಯುದ್ಧಕ್ಕೆ ಓತಣವಿತ್ತಂತೆ ಎಂದೂ ಅವರು ಎಚ್ಚರಿಸಿದರು. ಅರಬರ ಸ್ವಾತಂತ್ರ್ಯದ ಪಕ್ಷದಲ್ಲಿ ಅವರು ನಡೆಸಿದ ಪ್ರಯತ್ನಗಳಿಂದ ಸಂತುಷ್ಟರಾಗಿ ಪಾಲಿಸ್ತಾನದಲ್ಲಿ ಶಾಂತಿ ನ್ಯಾಯ ಪ್ರತಿಪಾದಕ ಸಮಿತಿಯವರು (ಅರಬ, ಕ್ರಿಶ್ಚನ್ ಯಹೂದ್ಯರನ್ನೊಳಗೊಂಡ ಸಂಸ್ಥೆ) ಅಸಫ ಅಲ್ಲಿಯವರನ್ನೂ ಅವರ ದೇಶವನ್ನೂ ಹರಸಿದ್ದಾರೆ.

ಆದರೆ ಯಹೂದ್ಯರಿಗೆ ಡಾಲರ ಸಾಮ್ರಾಜ್ಯದ ಅಕ್ಷುಣ್ಣ ಬೆಂಬಲವುಂಟು. ಪಾಲಿಸ್ತಾನದಲ್ಲಿ ಗುಪ್ತ ಹಿಂಸಾತ್ಮಕ ಚಳವಳಿ ನಡೆಸಲು ಲಕ್ಷಾಂತರ ಡಾಲರಗಳನ್ನು ಬಹಿರಂಗವಾಗಿ ಅಮೇರಿಕೆಯಲ್ಲಿ ಪತ್ರಿಕಾ ಜಾಹೀರಾತುಗಳ ಮೂಲಕ ಕೂಡಿಸಲಾಗುತ್ತಿದೆ. ಟ್ರಾನ್ಸಜಾರ್ಡನ್, ಸೌದಿ ಅರೇಬಿಯಾ, ಇರಾಕಗಳಲ್ಲಿ ಆಂಗ್ಲೋ-ಅಮೇರಿಕನ್ನರು ಗಳಿಸಿಕೊಂಡ ಎಣ್ಣೆ ಸವಲತ್ತುಗಳ ಸ್ವಾರ್ಥವೊಂದಿಲ್ಲದಿದ್ದರೆ ಅರಬರ ಕೂಗಿಗೆ ಯಾರೂ ಕಿವಿಗೊಡುತ್ತಿದ್ದಿಲ್ಲೇನೊ! ಅದಕ್ಕೇ ಇರಬೇಕು—ಪೋಲಿಶ ಪ್ರತಿನಿಧಿ ಅರ್ಥಪೂರ್ಣವಾಗಿ ಹೇಳಿದ್ದು: "ನಾವು ಎಣ್ಣೆಯೊಂದನ್ನೇ ಚಿಂತಿಸೋಣಬೇಡ; ನ್ಯಾಯವನ್ನೂ ನೋಡೋಣ!"

ಟ್ರೂಮನ್ನರ ಯೋಜನೆಗೆ ಒಪ್ಪಿಗೆ

೨೮೭ ವಿರುದ್ಧ ೧೦೭ ಮತಗಳಿಂದ ಕಳೆದ ವಾರ ಅಮೇರಿಕನ್ ಪ್ರತಿನಿಧಿ ಸಭೆ ಟ್ರೂಮನ್ನರ ಗ್ರೀಸ-ತುರ್ಕಿ ಸಹಾಯ ಯೋಜನೆಗೆ ಒಪ್ಪಿಗೆ ಕೊಟ್ಟಿತು. ಈ ಸಹಾಯವನ್ನು ಯುಕ್ತರಾಷ್ಟ್ರ ಸಭೆಯ ಮೇಲ್ವಿಚಾರಣೆಗೆ ಒಳಗುಮಾಡಬೇಕೆಂದು ಕೆಲ ಸದಸ್ಯರು ನಡೆಸಿದ ಕೊನೆಗಳಿಗೆಯ ಪ್ರಯತ್ನಗಳು ಸೋಲಿಸಲ್ಪಟ್ಟವು. ತುರ್ಕಿ ಗ್ರೀಸುಗಳಿಗೆ ಕಮ್ಯುನಿಝಂ ವಿರುದ್ಧ ಸಹಾಯ ನೀಡಲು ಅವಶ್ಯಕ ಯೋಜನೆ ಈಗಾಗಲೆ ಸಿದ್ಧವಾಗಿದ್ದು ಶಾಸನಸಭೆಗಳ ಒಪ್ಪಿಗೆ ದೊರೆತೊಡನೆ ಅದನ್ನು ಕಾರ್ಯರೂಪಕ್ಕೆ ತರಲು ಅಧಿಕಾರಿಗಳನ್ನು ಆ ಎರಡು ದೇಶಗಳಿಗೆ ಕಳಿಸಲಾಯಿತು ಗ್ರೀಸಿಗೆ ೩ ಕೋಟಿ ಡಾಲರ ಬೆಲೆಯ ಮಿಲಿಟರಿ ಮತ್ತು ಇತರ ಸಾಮಗ್ರಿಗಳೂ ತುರ್ಕಿಗೆ ೧೦ ಕೋಟಿ ಡಾಲರ ಬೆಲೆಯ ಯುದ್ಧ ಸಾಮಗ್ರಿಗಳೂ ಕೊಡಲ್ಪಡುವವು. ಇನ್ನಲ್ಲದೆ ಮಿಲಿಟರಿ ವಿಷಯಗಳಲ್ಲಿ ಸಲಹೆ ಕೊಡಲು ವಿಶೇಷಜ್ಞರನ್ನು ಕಳಿಸಲಾಗುವದು. ಈ ಬಗೆಯಾಗಿ ಗ್ರೀಸವಲ್ಲಿ ಕಮ್ಯುನಿಝಂ ವಿರೋಧದ ಹೆಸರಲ್ಲಿ ಅತ್ಯಂತ ಪ್ರತಿಗಾಮಿಯೂ ಯುದ್ಧಪೂರ್ವ ವರ್ಷಗಳಲ್ಲಿ ಜನಪೀಡನೆಯಿಂದ ಉಚ್ಚವರ್ಗದ ಹೊಟ್ಟೆ ತುಂಬಿಸಿ ಅತೃಪ್ತಿಗೆ ಕಾರಣವೂ ಆಗಿದ್ದ ಸತ್ತೆಯನ್ನು ಗ್ರೀಕ ಜನರ ಮೇಲೆ ಶಾಶ್ವತವಾಗಿ ಸ್ಥಾಪಿಸಲು ಅಮೇರಿಕೆ ಸಹಾಯ ನೀಡಿದೆ ಗ್ರೀಕ ಕಾಟಯೋಧರು ಇನ್ನೂ ಹೋರಾಡುತ್ತಲೆ ಇರುವಾಗ ಅಧೀರವಾಗಿದ್ದ ದುಷ್ಟಸತ್ತೆಗೆ ಅಮೇರಿಕನ್ ಸಹಾಯದ ಮದವೇರಿ ಅದು "ಯಾವ ಬದಲಾವಣೆಯನ್ನೂ ಮಾಡುವದಿಲ್ಲ" ಎನ್ನತೊಡಗಿದೆ.

ರಶಿಯಾದ ಒನ್ನಡೆ?

ಟ್ರೂಮನ್ನರು ರಶಿಯಾದ ಮೇಲೆ "ರಾಜಕೀಯ ಯುದ್ಧ"ವನ್ನು ಸಾರಿ ಡಾಲರಗಳ ತುಪಾಕಿಗಳನ್ನು ಹಾರಿಸುತ್ತಿರುವದರಿಂದ ರಶಿಯಾಕ್ಕೆ ಸಿಟ್ಟು ಬಂದರೂ ಅದು ಗಾಬರಿಗೊಂಡಿಲ್ಲವೆಂದ ಮಾಸ್ಕೋ ಪತ್ರಿಕೆಗಳ ಟೀಕೆ ಟಿಪ್ಪಣಿಗಳಿಂದ ತಿಳಿಯುತ್ತದೆ. ಅಮೇರಿಕೆಯು ಪರಮಾಣು ಬಾಂಬಿಗೆ ತಾನು ಎದುರಲ್ಲವೆಂದು ರಶಿಯಾಕ್ಕೆ ಗೊತ್ತಿದ್ದರೂ ಅಮೇರಿಕೆ ರಶಿಯಾದ ಮೇಲೇರಿ ಹೋಗುವ ಸಂಭವವೂ ಕಡಿಮೆಯೆಂದು ಅದಕ್ಕೆ ಗೊತ್ತು. ಬಹಳಾದರೆ ಅದು ರಾಜಕೀಯ ರಂಗದಲ್ಲಿ ಕಮ್ಯುನಿಝಂ ವಿಸ್ತರಣೆಯನ್ನು ತಡೆಹಿಡಿದು ೧೯೧೭ ರಲ್ಲಿ ಮಾಡಿದಂತೆ ತನ್ನ ಚಿಪ್ಪಿನೊಳಗೆ ತಾನು ಸೇರಿಕೊಳ್ಳಬಹುದು. ಸ್ಟಾಲಿನ್ನರ ಈಚಿನ ಹೇಳಿಕೆಗಳು ಇಂಥ ಸಂಭಾವ್ಯತೆಯನ್ನು ಕಲ್ಪಿಸಲೆಡೆ ಮಾಡಿಕೊಟ್ಟವೆ. ಅಮೇರಿಕನ್ ಅಧ್ಯಕ್ಷಸ್ಥಾನಕ್ಕೆ ೧೯೪೮ ರಲ್ಲಿ ಸ್ಪರ್ಧಿಸಬಹುದಾದ ಸ್ಟಾಸೆನ್ನರೊಡನೆ ಸ್ಟಾಲಿನ್ನರ ಭೆಟ್ಟಿಯಾದಾಗ ಅವರು ಜಗತ್ಶಾಂತಿಯಪ್ಪ ವಿಶ್ವಾಸವನ್ನೂ ಅಮೇರಿಕೆ-ರಶಿಯಾಗಳು ಶಾಂತಿಯಿಂದಲೂ ಸಹಕಾರದಿಂದಲೂ ಸಾಗಬಹುದೆಂಬ ನಂಬಿಕೆಯನ್ನೂ ವ್ಯಕ್ತಗೊಳಿಸಿದರು. ಮಾಸ್ಕೋದಲ್ಲಿ ವಿದೇಶ ಮಂತ್ರಿಗಳಿಗೊದಗಿದ ಅಪಯಶಸ್ಸು ಶಾಶ್ವತವಾಗಿರಬೇಕಾಗಿಲ್ಲ ಭಿನ್ನಾಭಿಪ್ರಾಯದ ನಿವಾರಣೆ ಸಾಧ್ಯವಿದೆಯೆಂದೂ ಅವರು ಹೇಳಿದರು. ಅದೇ ಪ್ರಕಾರ ಇಜಿಪ್ತದೊಡನೆ ಬ್ರಿಟನ್ನಿಗಿರುವ ವಿವಾದದಲ್ಲಿ ರಶಿಯಾ ತಟಸ್ಥವಾಗಿರುವದೆಂದು ಬೆವಿನ್ನರಿಗೆ ಸ್ಟಾಲಿನ್ನರು ಮಾತುಕೊಟ್ಟಿದ್ದಾರಂತೆ. ಎರಡನೆ ಮಹಾಯುದ್ಧದಿಂದ ಕಮ್ಯುನಿಝಂಗೆ ಅಪಾರವಾದ ಪ್ರಯೋಜನ ಸಿಕ್ಕಿದೆ. ಅದನ್ನು ಅರಗಿಸಿಕೊಂಡು ತೆಪ್ಪಗಿರೋಣ ಇನ್ನೊಂದು ಮಹಾಯುದ್ಧದಲ್ಲಿ ಬಂಡವಲಗಾರರಾಜ್ಯಗಳು ಕೈಹಾಕಿ ಸೋತಾಗ ನೋಡಿಕೊಳ್ಳೋಣವೆಂದು ಸ್ಟಾಲಿನ್ನರು ಬಗೆದಿದ್ದಾರೆಯೆ?

ಸ್ವಾಭಿಮಾನಿ ಝೆಕ್ಕರು

ಕಮ್ಯುನಿಝಂ ವಿರುದ್ಧ ಹೋರಾಡುತ್ತಿರುವ ರಾಜ್ಯಗಳಿಗೆ ಸರ್ವಸಹಾಯನೀಡುವ ಅಮೇರಿಕನ್ ಔದಾರ್ಯದ ಮುಂದೆ ಕೈಯೊಡ್ಡದ ಸ್ವಾಭಿಮಾನಿ ರಾಜ್ಯವೊಂದಾದರೂ ಇದೆ: ಅದೇ ಝೆಕೊಸ್ಲೋವಾಕಿಯಾ. "ನಮಗೆ ಅಮೇರಿಕೆಯಿಂದ ಸಾಲವೇನೋ ಬೇಕಾಗಿದೆ. ಆದರೆ ಗ್ರೀಸಿನಂತೆ ಅಮೇರಿಕೆಗೆ ಕೆಲ ಸವಲತ್ತುಗಳನ್ನು ಕೊಟ್ಟು ಸಾಲತೆಗೆದುಕೊಂಡು ನಮ್ಮ ಸಾರ್ವಭೌಮತ್ವಕ್ಕೆ ಮಿತಿಯನ್ನು ಕಲ್ಪಿಸಲು ನಮಗೆ ಇಚ್ಛೆಯಿಲ್ಲ. ಪ್ರಜಾತಂತ್ರದ ಕಲ್ಪನೆ ಒಂದೊಂದು ರಾಷ್ಟ್ರದಲ್ಲಿ ಒಂದೊಂದು ಬಗೆಯಾಗಿದೆ. ನಮ್ಮ ಕಲ್ಪನೆಗೇ ನಾವಂಟಿಕೊಳ್ಳುತ್ತಿದ್ದೇವೆ. ಟ್ರೂಮನ್ ಸಿದ್ಧಾಂತಕ್ಕೆ ಒಪ್ಪಿಗೆ ಕೊಡಬೇಕೆಂಬ ಶರ್ತಿನಿಂದ ಸಾಲ ತೆಗೆದುಕೊಳ್ಳಲು ನಾವೊಲ್ಲೆವು," ಎಂದು ಲಂಡನ್ನಿಗೆ ಬಂದಿದ್ದ ಝೆಕ ಪಾರ್ಲಮೆಂಟಿನ ಪ್ರತಿನಿಧಿಗಳು ಹೇಳಿದರು.

ಫ್ರಾನ್ಸಿನಲ್ಲಿ ಕಮ್ಯುನಿಸ್ಟರಿಗೆ ಅರ್ಧಚಂದ್ರ

ಆದರೆ ಇತರ ದೇಶಗಳಲ್ಲಿ ಕಮ್ಯುನಿಸ್ಟ್ ದ್ವೇಷದಿಂದ ಕುರುಡರಾಗಿ ವಿದೇಶಿ ಸಹಾಯ ತೆಗೆದುಕೊಳ್ಳಲು ಸಿದ್ಧರಾದವರಿಲ್ಲದಿಲ್ಲ. ಟ್ರೂಮನ್ ಸಿದ್ಧಾಂತ ಫ್ರಾನ್ಸಿನಲ್ಲಿ ಹೆಜ್ಜೆಹೆಜ್ಜೆಗೆ ಅಳವಡಿಕೆಗೆ ಬರುವದನ್ನು ಕಾಣುತ್ತೇವೆ. ಕಳೆದ ವಾರ ಮುಖ್ಯಮಂತ್ರಿ ರಾಮದೀಯರು ತಮ್ಮ ಮಂತ್ರಿಮಂಡಲದಲ್ಲಿದ್ದ ಕಮ್ಯುನಿಸ್ಟರನ್ನು ಹೊರಹಾಕಿದರು. ಫ್ರೆಂಚ ಪಾರ್ಲಮೆಂಟಿನಲ್ಲಿ ಅತಿ ಪ್ರಬಲ ಪಕ್ಷವಾದ ಕಮ್ಯುನಿಸ್ಟರನ್ನು ಹೊರಹಾಕಲು ಕಾರಣವಿಷ್ಟೆ: ರೆನಾಲ್ಟ ಮೋಟರ ಕಾರಖಾನೆ ಮತ್ತು ಇತರ ಲೋಹ ಕಾರಖಾನೆಗಳ ೨೨,೦೦೦ ಕೂಲಿಕಾರರು ಹೆಚ್ಚಿನ ಕೂಲಿಯನ್ನು ಬೇಡಿ ಸಂಪು ಹೂಡಿದ್ದರು ಬೆಲೆಗಳನ್ನೂ ಕೂಲಿಯ ದರವನ್ನು ಸ್ಥಿರತೆಗೆ ತರುವ ಧೋರಣೆಗನುಸಾರವಾಗಿ ಕೂಲಿಯನ್ನು ಹೆಚ್ಚಿಸಲು ಮುಖ್ಯಮಂತ್ರಿ ರಾಮದೀಯರು ನಿರಾಕರಿಸಿದರು. ಮೋಟರ ಕೂಲಿಕಾರರ ಬೇಡಿಕೆಗೆ ಕಮ್ಯುನಿಸ್ಟರ ಬೆಂಬಲವಿತ್ತು. ಕಾರಣ ಪಾರ್ಲಮೆಂಟಿನಲ್ಲಿ ಇದು ಚರ್ಚೆಗೆ ಬಂದು ಮುಖ್ಯಮಂತ್ರಿಗೆ ಸಭೆಯ ಬೆಂಬಲ ದೊರೆಯಿತು. ಕಮ್ಯುನಿಸ್ಟ್ ಪಕ್ಷ ವಿರುದ್ಧ ಮತವಿತ್ತಿತು. ಆದರಿಂದ ಕಮ್ಯುನಿಸ್ಟ್ ಮಂತ್ರಿಗಳನ್ನು ಕಿತ್ತುಹಾಕಿ ಹೊಸ ಮಂತ್ರಿಮಂಡಲವನ್ನು ರಚಿಸಲಾಯಿತು. ಈ ನಡುವೆ ಫ್ರಾನ್ಸು ಅಮೇರಿಕನ್ ಸಾಲಕ್ಕೆ ಅರ್ಜಿ ಹಾಕಿದೆಯೆಂದು ಸುದ್ದಿ ಹೊರಟಿತು. ಈ ಸುದ್ದಿ ನಿರಾಕರಿಸಲ್ಪಟ್ಟಿದ್ದರೂ ಅಮೇರಿಕೆಯ ಬೆಂಬಲದ ಧೈರ್ಯವಿಲ್ಲದಿದ್ದರೆ ರಾಮದೀಯರು ಕಮ್ಯುನಿಸ್ಟರನ್ನು ಸೆಣಸುವ ಹವ್ಯಾಸಕ್ಕೆ ಬೀಳುತ್ತಿದ್ದರೋ ಇಲ್ಲವೊ ಸಂಶಯ. ಫ್ರಾನ್ಸಿನ ೫೦ ಲಕ್ಷ ಕೂಲಿಗಾರರು ಕಮ್ಯುನಿಸ್ಟರ ಅಂಕೆಯಲ್ಲಿದ್ದಾರೆ. ಬೇಕಾದಾಗ ಅವರು ಸಂಪು ಹೂಡಿಸಿ ರಾಮದೀಯರ ಸರಕಾರದ ಉಸಿರು ಕಟ್ಟಿಸಬಲ್ಲರವರು. ಆದರೆ ಕಮ್ಯುನಿಸ್ಟರಿನ್ನೂ ಆ ದಾರಿ ಹಿಡಿದಿಲ್ಲ ಸ್ವಲ್ಪ ಸಮಯದಿಂದಲೇ ಅವರು ವರ್ತಿಸುವಂತೆ ತೋರುತ್ತದೆ.

ಸಾಮ್ರಾಜ್ಯದ ತಲೆನೋವು

ಯುರೋಪಿಯನ್ ರಾಜ್ಯಗಳೊಡನೆ "ಒಕ್ಕೂಟ" ದಲ್ಲಿ ಸೇರಿದ ಯುರೋಪಿಯನ್ನೇತರರ ಗೌರವಕ್ಕೆ ಎಷ್ಟು ಬೆಲೆಯಿರುತ್ತದೆಯೆಂಬುದನ್ನು ತೋರಲಾಗುತ್ತಿದೆಯೆಂಬದಕ್ಕೆ ಮಡಗಾಸ್ಕರ್ವೊಂದು ಸಾಕ್ಷಿ. ಮಡಗಾಸ್ಕರ ಫ್ರೆಂಚ ಒಕ್ಕೂಟದ ಒಂದು ಭಾಗವೆಂದೆಣಿಸಲ್ಪಡುತ್ತದೆ. ಅದರಿಂದ ಮೂವರು ಪ್ರತಿನಿಧಿಗಳು ಫ್ರೆಂಚ ಪಾರ್ಲಮೆಂಟಿಗಾರಿಸಲ್ಪಡುವರು. ಆದರೆ ಮಡಗಾಸ್ಕರದಲ್ಲಿ ಸ್ವಾತಂತ್ರ್ಯ ಯುದ್ಧ ಪ್ರಾರಂಭವಾದೊಡನೆ ಸ್ವದೇಶದಲ್ಲಿದ್ದ ಇಬ್ಬರು ಪಾರ್ಲಮೆಂಟಿನ ಪ್ರತಿನಿಧಿಗಳನ್ನು ಬಂಧಿಸಲಾಯಿತು. ಫ್ರಾನ್ಸಿನಲ್ಲಿ ಪಾರ್ಲಮೆಂಟ ಸಭೆಯಲ್ಲಿ ಭಾಗವಹಿಸುತ್ತಿದ್ದ ರೋಸೆಟಾ ಎಂಬ ಮೂರನೆ ಸದಸ್ಯರಿಗೂ ವಾರಂಟಿದ್ದು, ಅವರನ್ನು ಈಗಲೋ ಇನ್ನಾವಾಗಲೊ ಹಿಡಿಯಬಹುದು ಪಾರ್ಲಮೆಂಟ ಸಭೆಯಲ್ಲಿ ಅವರನ್ನು ಕೊಲೆಗಡುಕರೆಂದುಬಹಿರಂಗವಾಗಿ ಅಪಮಾನಗೊಳಿಸಲಾಯಿತು. ರೋಸೆಟೊ ಮಡಗಾಸ್ಕರ ಪುನರುಜ್ಜೀವನಪಕ್ಷವನ್ನು ನಿಯಮಬಾಹ್ಯ ಮಾಡಲಾಗಿದೆ. ದಂಗೆಯದ್ದ ರಾಷ್ಟ್ರೀಯರನ್ನು ಹಣ್ಣು ಮಾಡಲು ಕೈಗೆ ಸಿಕ್ಕಿದ ಮೂಲನಿವಾಸಿ ಪ್ರಜೆಗಳನ್ನು ಕೊಂದುಬಿಡಬೇಕೆಂದು ಮಡಗಾಸ್ಕರದಲ್ಲಿರುವ ಫ್ರೆಂಚ ಕೋಟಧಿಪತಿಯರು ಹೇಳುತ್ತಿದ್ದಾರಂತೆ ಅತ್ಯಂತ ಕಠಿಣ ವೃತ್ತಿಯಿಂದ ದಂಗೆಯನ್ನು ಹತ್ತಿಕ್ಕಿದ್ದರೂ ಅದಿನ್ನೂ ಸಾಗಿಯೇ ಇದೆ. ಫ್ರೆಂಚಸಾಮ್ರಾಜ್ಯದ ಕೈಚೀನಾದಲ್ಲಿಯೂ ದುರ್ಗ್ರಸ್ಥಿತಿಯುಂಟಾಗಿದೆಯಂತೆ. ಸಾಮ್ರಾಜ್ಯದಲ್ಲೆಲ್ಲ ಎದ್ದ ಈ ಸಂತೋಷಕ್ಕೆ ಬೆದರಿ ಇರಬೇಕು, ಇಂಡೋಚೀನದ ವೀಟನಾಮ ಪ್ರಜಾರಾಜ್ಯವಾದಿಗಳೊಡನೆ ಫ್ರೆಂಚರು ಮಾತುಕತೆ ಪ್ರಾರಂಭ ಮಾಡಿದ್ದಾರೆ.

ಜರ್ಮನಿಯಲ್ಲಿ ಹಸಿವು

ಜರ್ಮನಿಯ ಬ್ರಿಟಿಶ-ಅಮೇರಿಕನ್ ಪ್ರದೇಶದಲ್ಲಿ ಹಸಿವಿನ ತಾಂಡವ ನಡೆದಿದೆ. ಜರ್ಮನ್ ಡೆನ್ಮಾರ್ಕ ಗಡಿಯಲ್ಲಿರುವ ಫೆನ್ಸ್‌ಬರ್ಗನಗರದ ಕೂಲಿಕಾರರು ಮೊನ್ನೆ ಆಹಾರ ಪರಿಸ್ಥಿತಿಯನ್ನು ಸುಧಾರಿಸಿದ ಹೊರತು ಕೆಲಸಕ್ಕೆ ಬರುವಂತಿಲ್ಲೆಂದು ಸಂಪುಹೂಡಿದರು. ಸ್ಥಾನಿಕ ಸಂಸ್ಥೆಗಳ ಜರ್ಮನ್ ಪ್ರತಿನಿಧಿಗಳು ರಾಜೀನಾಮೆ ಕೊಟ್ಟಿದ್ದು ಆಹಾರದ ವ್ಯವಸ್ಥೆಯಾಗದಿದ್ದರೆ ಆಡಳಿತ ಸಾಗಿಸುವದು ಶಕ್ಯವಾಗದೆಂದು ಸಾರಿದರು. ಇತ್ತ ಬ್ರಿಟಿಶ ಅಮೇರಿಕನ್ ಆಳ್ವಿಕೆ ಪ್ರದೇಶಗಳನ್ನೊಂದು ಮಾಡಿದ್ದರೂ ಉಭಯತರಲ್ಲಿ ಮತಭೇದ ಬಹಳವಾಗಿರುವದರಿಂದ ಜತೆಯಾಗಿ ಸಮಸ್ಯೆಯನ್ನು ಬಿಡಿಸುವದು ಅದರಿಂದಾಗಲೊಲ್ಲದು.

ಸಾಹಿತ್ಯ ಪರಿಷತ್ಸಭೆಯಲ್ಲಿ ಬಿರುದಾಂಕಿತರ ಅಭಿನಂದನೆಗೆ ವಿರೋಧ

ಮಲೆಯಾಳಿಗಳ ಆಕ್ರಮಣಶೀಲತೆಯ ಖಂಡನೆ

ವಿವಿಧ ಗೋಷ್ಠಿಗಳ ಕಾರ್ಯಕಲಾಪ

ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕಸಭೆ ತಾ. ೮ಕ್ಕೆ ಹರಪನಹಳ್ಳಿಯಲ್ಲಿ ಉಪಾಧ್ಯಕ್ಷರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸೇರಿ ಮುಂದಿನ ವರ್ಷದ ಅಧಿಕಾರಿ ವರ್ಗವನ್ನು ಆರಿಸಿದ್ದಲ್ಲದೆ ಹಿಂದಿನ ವರ್ಷದ ವರದಿಯನ್ನು ಸ್ವೀಕರಿಸಿತು. ಪರಿಷತ್ತಿನ ಇತಿಹಾಸದಲ್ಲಿ ಮೊದಲನೆ ಬಾರಿ ಎನ್ನಬಹುದು, ಅಧ್ಯಕ್ಷಸ್ಥಾನಕ್ಕೆ ಒಬ್ಬ ಸಾಮಾನ್ಯರನ್ನು [ಅಂದರೆ ಮಹಾರಾಜ ಅಥವಾ ಇನಾಮುದಾರರಲ್ಲದವರನ್ನು] ಆರಿಸಿದ್ದು ವೈಶಿಷ್ಟ್ಯವೆನ್ನಬೇಕು. ನ್ಯಾ. ಮೂರ್ತಿ ಲೋಕೂರರಿಗೆ ಪ್ರಥಮ ಸಾಮಾನ್ಯವರ್ಗದ ಅಧ್ಯಕ್ಷರಾಗುವ ಗೌರವ ದೊರೆತುದು ಔಚಿತ್ಯಪೂರ್ಣವಾಗಿತ್ತು. ಬೇರೆ ವಿಷಯಗಳಲ್ಲಿಯೂ ಪ್ರಾಚೀನ ರೂಢಿಗಳನ್ನು ಬದಲಿಸಲು ಕೆಲ ಸದಸ್ಯರು ಪ್ರಯತ್ನಿಸಿದರೂ ಅದು ವಿಫಲವಾಯಿತು. [ಅಧಿಕಾರಿ ವರ್ಗದ ಹೆಸರುಗಳು ಹಿಂದಿನ ಸಂಚಿಕೆಯಲ್ಲಿ ಪ್ರಕಟವಾಗಿವೆ].

ನ್ಯಾ. ಮೂರ್ತಿ ಲೋಕೂರರ ಹೆಸರನ್ನು ಈ ವರ್ಷದ ಅಧ್ಯಕ್ಷತೆಗೆ ಸೂಚಿಸಿದವರು ಶ್ರೀ ಸ. ಸ. ಬಸವನಾಳರು. ವ್ಯಾ. ತೀ. ಚಂದ್ರಶೇಖರ ಶಾಸ್ತ್ರಿಗಳು ಅದನ್ನು ಅನುಮೋದಿಸಿದ ನಂತರ ಅವರು ಅವಿರೋಧ ಆರಿಸಲ್ಪಟ್ಟರು. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರೇ ಉಪಾಧ್ಯಕ್ಷರಾಗಿಯೂ ಶ್ರೀ ಸಿ. ಕೆ. ನಾಗರಾಜರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ ರೇವಣ್ಣನವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು.

ಈ ಪ್ರಮುಖ ಅಧಿಕಾರಿಗಳ ಬಗ್ಗೆ ಕೆಲ ಬದಲಾವಣೆಗಳನ್ನು ಮಾಡಬೇಕೆಂದು ಶ್ರೀ ಮಧುಗಿರಿ ವಾಸುದೇವ ಮೂರ್ತಿಗಳು ವಿಶೇಷಾಧಿವೇಶನದಲ್ಲಿ ಒಂದು ಸೂಚನೆ ತಂದರು. ಉಪಾಧ್ಯಕ್ಷ, ಕಾರ್ಯದರ್ಶಿ, ಕೋಶಾಧಿಕಾರಿಗಳಲ್ಲಿ ಕೊನೆಯ ಇಬ್ಬರು ಮಾತ್ರ ಬೆಂಗಳೂರಿನ ನಿವಾಸಿಗಳಾಗಲೇ ಬೇಕೆಂದು ಘಟನೆಯಲ್ಲಿ ಬದಲಾವಣೆ ಮಾಡಲು ಅವರ ಅಪೇಕ್ಷೆಯಾಗಿತ್ತು. ಅರ್ಥಾತ್ ಉಪಾಧ್ಯಕ್ಷಸ್ಥಾನಕ್ಕೆ ಬೆಂಗಳೂರಿನವರೇ ಆಗಬೇಕೆಂಬ ನಿಯಮವನ್ನು ತೆಗೆದು ಹಾಕಲು ಈ ಸೂಚನೆಬಂದಿತ್ತು. ಶ್ರೀ ವೆಂ. ಧೀ. ನಾಯಕ ಮೊದಲಾದವರು ಬೆಂಗಳೂರಿನ ಹೊರಗಿನವರಿಗೂ ಉಪಾಧ್ಯಕ್ಷತೆಯ ಯೋಗ್ಯತೆಯನ್ನೀಯಬೇಕೆಂಬ ತತ್ವ ಸಮ್ಮತಿಯೋಗ್ಯವಾದುದೆಂದು ವಾದಿಸಿದರು. ಆದರೆ ಶ್ರೀ ಕ. ವೆಂ. ರಾಘವಾಚಾರ್ಯ, ಪಿ. ಸೀತಾರಾಮಯ್ಯ ಮೊದಲಾದವರು ಅದನ್ನು ವಿರೋಧಿಸಿದರು. ಮತಕ್ಕೆ ಹಾಕಲಾಗಿ ಸೂಚನೆ ತಿರಸ್ಕರಿಸಲ್ಪಟ್ಟಿತು.

ಬಿರುದುಗಳ ಪ್ರಶ್ನೆ

ಮೈಸೂರು ಮಹಾರಾಜರು ಮತ್ತು ಬೇರೆ ಕೆಲವರಿಗೆ ದೊರೆತ ಬಿರುದು ಪ್ರಶಸ್ತಿಗಳ ಬಗ್ಗೆ ಅಭಿನಂದನೆ ಸಲ್ಲಿಸುವ ಅಂಶ ವರದಿಯಲ್ಲಿದ್ದುದರ ವಿಷಯದಲ್ಲಿಯೂ ಬಿಸಿ ಬಿಸಿ ಚರ್ಚೆಯಾಯಿತು. ಕಾಲಗತಿ ಬದಲಿಸುತ್ತಿರುವಾಗ ಇಂಥ ಬಿರುದುಗಳ ಬಗ್ಗೆ ಅಭಿನಂದನೆ ನೀಡುವದು ಉಚಿತವಲ್ಲೆಂದೂ ಆದರಿಂದ ಆ ಅಂಶವನ್ನು ವರದಿಯಿಂದ ತೆಗೆದುಹಾಕಬೇಕೆಂದೂ ಶ್ರೀ ಕುಳಕುಂದ ಶಿವರಾಯರು ತಿದ್ದುಪಡಿ ತಂದರು. ಇದು ತಮ್ಮಲ್ಲಿ ಅವಿಶ್ವಾಸ ಸೂಚಿಸಿದಂತೆ ಎಂದು ಮಾಸ್ತಿಯವರು ವಾದಿಸಿದರು. ಅವಿಶ್ವಾಸ ವ್ಯಕ್ತಗೊಳಿಸುವ ದುರುದ್ದೇಶವಲ್ಲ ಬದಲಿಸುತ್ತಿರುವ ಕಾಲದೊಡನೆ ಪರಿಷತ್ತೂ ಬದಲಾಗಬೇಕೆಂದಿಷ್ಟೇ ತಮ್ಮ ಅಭಿಪ್ರಾಯವೆಂದು ತಿದ್ದುಪಡಿಯ ಬೆಂಬಲಿಗರಾದ ಶ್ರೀ ವೆಂ. ಧೀ. ನಾಯಕರು ಮೊದಲಾದವರು ತಿಳಿಸಿದರೂ ಮೈಸೂರಿನ ಹಿರಿಯರು ಒಪ್ಪಲಿಲ್ಲ. ಒಂದು ತಾಸಿನ ವರೆಗೆ ಚರ್ಚೆ ನಡೆದು ತಿದ್ದುಪಡಿ ಮತಕ್ಕೆ ಬಿದ್ದು ತಿರಸ್ಕರಿಸಲ್ಪಟ್ಟಿತು.

ಸಾಹಿತ್ಯಗೋಷ್ಠಿ

ಸಮ್ಮೇಲನದ ಮೊದಲ ದಿವಸದ ಕಾರ್ಯಕಲಾಪಗಳನ್ನು ಕಳೆದವಾರ ಹಾಗು ಅಧ್ಯಕ್ಷ ಭಾಷಣದ ಸಾರವನ್ನು ಈ ಬಾರಿ ಬೇರೆಡೆ ಕೊಡಲಾಗಿದೆ. ತಾ. ೭ (ಮೊದಲದಿನ) ಸಂಜೆ ೮-೩೦ ಕ್ಕೆ ಸಾಹಿತ್ಯಗೋಷ್ಠಿ ಕಲಬುರ್ಗಿಯ ತಾಲೂಕದಾರ ಶ್ರೀ ಸಿದ್ದಯ್ಯ ಪುರಾಣಿಕರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಮುನಸೂಫರಾದ ಶ್ರೀ ಟಿ. ಎಂ. ಸದಾಶಿವಯ್ಯನವರು ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಹರಪನಹಳ್ಳಿಯ ವಿದ್ವಾನ್ ನೀಲಕಂಠಶಾಸ್ತ್ರಿಗಳು ಸ್ವಾಗತ ಕೋರಿದರು.

ಶ್ರೀ ಸಿದ್ಧಯ್ಯನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕಲೆಗಾಗಿ ಕಲೆ. ವಿಜ್ಞಾನಕ್ಕಾಗಿ ವಿಜ್ಞಾನ, ಸಾಹಿತ್ಯಕ್ಕಾಗಿ ಸಾಹಿತ್ಯ ಎಂಬೀ ವಾದವನ್ನು ಖಂಡಿಸಿ ಈ ನಿರುದ್ದೇಶ ನಿರ್ಮಾಣದ ಭ್ರಮೆಯೇ ಜಗತ್ತಿನ ಇಂದಿನ ಎಲ್ಲ ಅನಿಷ್ಟಗಳಿಗೆ ಕಾರಣವೆಂದರು. ಎಲ್ಲವೂ ಜೀವನಕ್ಕಾಗಿ ಎಂಬ ಧ್ಯೇಯ ಬೇಕೆಂದು ಅವರು ಸಾರಿದರು. "ಸಾಹಿತ್ಯವು ಆತ್ಮಕಥನವೂ ಅಲ್ಲ. ಜೀವನದ ನಿರ್ಜೀವ ಚಿತ್ರಣವೂ ಅಲ್ಲ, ಆತ್ಮಾಭಿವ್ಯಕ್ತಿಯಲ್ಲಿ ಆತ್ಮಸಮಾಜೀಕರಣ, ಆತ್ಮವ್ಯಕ್ತಿಯಲ್ಲಿ ವಿಶ್ವರಹಸ್ಯಾಭಿವ್ಯಕ್ತಿ, ಸಮಾಜದ ಆತ್ಮೀಕರಣ, ಇರುವದರ ಚಿತ್ರಣ ಬರಲಿರುವದರ ದರ್ಶನ. ಸಾಹಿತ್ಯವು ವ್ಯಕ್ತಿತ್ವದ ಲೀಲೆ," ಎಂದರು.

ವಿಜ್ಞಾನ ಗೋಷ್ಠಿ

ತಾ. ೮ಕ್ಕೆ ಸಾಹಿತ್ಯ ಸಮ್ಮೇಲನದ ಅಂಗವಾಗಿ ಮೊದಲನೆ ಬಾರಿ ವಿಜ್ಞಾನಗೋಷ್ಠಿ ನಡೆಯಿತು. ಅಧ್ಯಕ್ಷರಾದ ಡಾ. ಎಂ. ಸಿ. ತುಮ್ಮಿನಕಟ್ಟಿಯವರು ವಿಜ್ಞಾನದ ಘಾತಕರೂಪವನ್ನು ವರ್ಣಿಸಿ ಕಳೆದ ಶತಮಾನದಲ್ಲಿ ವಿಜ್ಞಾನದ ಶೋಧಗಳಿಂದ ಜನ ಜೀವನದ ಮಟ್ಟ ಏರುವದೆಂಬ ಭಾವನೆಯಿತ್ತು. ಆದರೆ ಎರಡು ಮಹಾಯುದ್ಧಗಳ ನಂತರ ಅದೂ ಅಣುಬಾಂಬನ್ನು ಜಪಾನದ ಮೇಲೊಗೆದನಂತರ ವಿಜ್ಞಾನದ ಭಯಾನಕ ರೂಪವನ್ನು ನಾವು ಮನಗಂಡಿದ್ದೇವೆ. ವಿಜ್ಞಾನವನ್ನು ನಾವು ಯೋಗ್ಯರೀತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ ಮಾನವ ಕುಲವನ್ನು ಪೂರ್ಣವಾಗಿ ಅದು ನಾಶಗೊಳಿಸಬಲ್ಲದು. ಆದರಿಂದ ವಿಜ್ಞಾನಿಗಳು ಹೊಣೆಯರಿತು ಅದನ್ನು ಸನ್ಮಾರ್ಗದಲ್ಲಿ ವಿನಿಯೋಗಿಸಬೇಕೆಂದರು. ಜನಸಾಮಾನ್ಯರಲ್ಲಿ ವಿಜ್ಞಾನದ ಪ್ರಚಾರ ಮಾಡಲು ಯಾವ ಯಾವ ಉಪಾಯಗಳನ್ನು ಕೈಕೊಳ್ಳಬಹುದೆಂದು ವಿವರಿಸಿ, ಕೊನೆಗೆ ವಿಜ್ಞಾನದ ಬೋಧಭಾಷೆ ಕನ್ನಡವೇ ಆಗಿರಬೇಕೆಂದೂ ಮಾತೃಭಾಷೆಯ ಮೂಲಕ ವಿಜ್ಞಾನವನ್ನು ಕಲಿಸುವ ಶಕ್ಯತೆಯನ್ನು ಚೀನ ಜಪಾನ ಮೊದಲಾದವುಗಳು ವ್ಯವಹಾರಿಕವಾಗಿ ತೋರಿಸಿಕೊಟ್ಟಿವೆಯೆಂದೂ ಉಸುರಿದರು.

ಅದೇ ದಿನ ಸಂಜೆ ಮಹಿಳಾ ಗೋಷ್ಠಿಯೂ ಶ್ರೀಮತಿ ಪಾರ್ವತಿಬಾಯಿ ಕೇಸರಿಯವರ ಅಧ್ಯಕ್ಷತೆಯಲ್ಲಿ ಜರಗಿತು. (ಅಧ್ಯಕ್ಷ ಭಾಷಣಸಾರ ಕಳೆದ ಸಂಚಿಕೆಯಲ್ಲಿ.)

ತಾ. ೮ ರಾತ್ರಿ ಮನೋರಂಜನ ಕಾರ್ಯಕ್ರಮಗಳಿದ್ದವು. ವಿಜಾಪುರದ ಕು. ಗೋದಾವರಿ ದಾತಾರ ಇವಳ ನರ್ತನ, ರಾಣೆಬೆನ್ನೂರ ಮಿತ್ರರಿಂದ ಶ್ರೀ ಕೃಷ್ಣಕುಮಾರ ಕಲ್ಲೂರರ "ರಾಯರ ಮದುವೆ" ನಾಟಕದ ಅಭಿನಯ (ಇದು ಅಶ್ಲೀಲವೆಂದು ಕೂಗೆದ್ದುದರಿಂದ ಅರ್ಧದಲ್ಲಿ ನಿಲ್ಲಿಸಲ್ಪಟ್ಟಿತು), ಶ್ರೀ ಶಮದ ಸಾಹೇಬರ ರಾಷ್ಟ್ರೀಯ ಲಾವಣಿ ಆದವು.

ಕೊನೆಯ ದಿನ

ಕೊನೆಯದಿನ (ತಾ ೯) ಸಾಹಿತ್ಯ ಗೋಷ್ಠಿಯ ಆಶ್ರಯದಲ್ಲಿ, ಪ್ರೊ ಬಸವನಾಳ. ಡಾ. ನಂದಿಮಠ, ಶ್ರೀ ಜಿನರಾಜ ಹೆಗಡೆ ಮೊದಲಾದವರ ಭಾಷಣಗಳಾದವು.

ಆ ಮೇಲೆ ಬಹಿರಂಗ ಅಧಿವೇಶನದಲ್ಲಿ ಗೊತ್ತುವಳಿಗಳ ಚರ್ಚೆಯಾಯಿತು. ಈ ಕೆಳಗಿನ ಗೊತ್ತುವಳಿಗಳಾದವು.

೧ ಮೈಸೂರು ಮತ್ತು ಸೊಂಡೂರ ಅಧಿಪತಿಗಳು ಪರಿಷತ್ತಿಗೆ ನೀಡಿದ ಸಹಾಯಕ್ಕೆ ಅಭಿನಂದನೆ.

೨ ಶ್ರೀ ಬಿ. ಎಂ. ಶ್ರೀಕಂಠಯ್ಯ, ಕೈಲಾಸಂ ಮೊದಲಾದ ಕನ್ನಡ ಕಂದರ ನಿಧನದ ಬಗ್ಗೆ ಅನುತಾಪ.

೩ ಕೊಡಗು, ನೀಲಗಿರಿ, ದಕ್ಷಿಣ ಕನ್ನಡ ಮೊದಲಾದ ಕನ್ನಡ ಪ್ರದೇಶಗಳನ್ನು ನುಂಗಲು ಹವಣಿಸುತ್ತಿರುವ ಮಲಯಾಳಿಗಳ ಖಂಡನೆ.

೪ ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ನೀರಾವರಿ ಯೋಜನೆಯಿಂದ ಕನ್ನಡಿಗರಿಗಾದ ಅನ್ಯಾಯವನ್ನು ಮದ್ರಾಸ ಸರಕಾರದ ಲಕ್ಷ್ಯಕ್ಕೆ ತರುವದು.

೫ ಮುಂಬಯಿ ಆಕಾಶವಾಣಿಯಲ್ಲಿ ಕನ್ನಡ ಹೆಣ್ಣುಮಕ್ಕಳಿಗಾಗಿ ಕಾರ್ಯಕ್ರಮ ಏರ್ಪಡಿಸಬೇಕೆಂಬ ಬೇಡಿಕೆ.

೬ ನಿಜಾಂ ಸಂಸ್ಥಾನದಲ್ಲಿ ಶಾಲೆಗಳಲ್ಲಿ ಕನ್ನಡಿಗರಿಗೆ ಸರಿಯಾದ ಸ್ಥಾನ ಸಿಗಬೇಕೆಂಬುದು.

೭ ಬಳ್ಳಾರಿ ಜಿಲ್ಲೆಯ ಶಾಲೆಗಳಲ್ಲಿ ಕನ್ನಡವೇ ಬೋಧಭಾಷೆಯಾಗಬೇಕೆಂಬದು.

೮ ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ ಮುಂಬಯಿ ಸರಕಾರದ ಉಪಕ್ರಮವನ್ನು ಅಭಿನಂದಿಸಿ, ವಿ. ವಿ. ಸಮಿತಿಗೆ ಮೈಸೂರು, ಹೈದರಾಬಾದ, ಮದ್ರಾಸ, ಕೊಡಗು ಕನ್ನಡಿಗರು ಅಂಕೆ ಸಂಖ್ಯೆಗಳನ್ನು ಪೂರೈಸಿ ವಿಶ್ವವಿದ್ಯಾಲಯ ಸ್ಥಾಪನೆಯಾದ ನಂತರ ಅದರಲ್ಲಿ ಸೇರುವ ಇಚ್ಛೆವ್ಯಕ್ತಗೊಳಿಸಬೇಕು.

೯ ಘಟನಾ ಸಮಿತಿಯಲ್ಲಿ ದಕ್ಷಿಣ ಸಂಸ್ಥಾನಗಳಿಗೆ ಯೋಗ್ಯ ಸ್ಥಾನ ದೊರೆಯಬೇಕು.

೧೦ ಗೋವೆಯು ಪೂರ್ಣ ಕನ್ನಡ ಪ್ರದೇಶವಾಗಿದ್ದು ಅದು ಭಾವೀ ಅಖಂಡ ಕರ್ನಾಟಕಕ್ಕೆ ಸೇರಬೇಕು.

ಸಮ್ಮೇಲನದಲ್ಲಿ ಆಗಾಗ್ಗೆ ನಡೆದ ಆಶು ಕವಿತೆ, ಕಾವ್ಯಗಾಯನ ಮೊದಲಾದ ಸ್ಪರ್ಧೆಗಳಲ್ಲಿ ಗೆದ್ದವರಿಗೂ ಪರಿಷತ್ತಿನಿಂದ ಬಹುಮಾನ ಪಡೆದ ಪುಸ್ತಕಗಳ ಲೇಖಕರಿಗೂ ಬಹುಮಾನ ಹಂಚಲಾಯಿತು.

"ಶ್ರೀ" ಸ್ಮಾರಕ

ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಸ್ಮಾರಕವೊಂದನ್ನು ರಚಿಸುವ ಬಗ್ಗೆ ಶ್ರೀ ಸಿ. ಕೆ. ಯವರ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಯಿತು. ಒಂದು ಲಕ್ಷದ ನಿಧಿ ಕೂಡಿಸಬೇಕು, ಹಣಸೇರಿದ ನಂತರ ಎಂಥ ಸ್ಮಾರಕ ರಚಿಸಬೇಕೆಂದು ನಿರ್ಣಯವಾಗಬೇಕೆಂದು ಸೂಚಿಸಲ್ಪಟ್ಟಿತು. ಇದಕ್ಕೆ ಎಲ್ಲರ ಅನುಮೋದನೆ ದೊರೆಯಿತು.

ಕೊನೆಯಲ್ಲಿ ಅಧ್ಯಕ್ಷ ವೆಂಕಟರಾಮಯ್ಯನವರು ಶ್ರೀ ಮಾಸ್ತಿಯವರೂ ಪರಿಷತ್ತಿನ ಆವಶ್ಯಕತೆಯನ್ನೂ ಮಹತ್ವವನ್ನೂ ಕುರಿತು ಮಾತಾಡಿದರು. ಶ್ರೀ ಎಸ್. ಬಿ. ಕೃಷ್ಣಮೂರ್ತಿಯವರು ಉಚಿತ ವ್ಯವಸ್ಥೆ ಮಾಡಿದ್ದಕ್ಕಾಗಿ ಸ್ವಾಗತಸಮಿತಿಯವರನ್ನು ಸಭಿಕರ ಪರವಾಗಿ ಅಭಿನಂದಿಸಿದರು.

ಹಾಸನ ಜಿಲ್ಲೆಯಲ್ಲಿ ಕಾಳುಎತ್ತುವದನ್ನು ಒತ್ತಾಯದಿಂದ ಸಾಗಿಸಹತ್ತಿದ್ದಾರೆ. ರೈತರಿಗೆ ಬೇಕಾಗುವಷ್ಟು ಕಾಳನ್ನು ಇಡದೆ ಆಹಾರ ಪದಾರ್ಥಗಳನ್ನು ವಸೂಲಮಾಡಹತ್ತಿರುವರು.

ಕರ್ಮವೀರ ಹರಿಜನ ಪುರವಣಿ

ಈಗಿಂದೀಗ ಹೋಗಿರಿ

[ಬೇರೆ ಬೇರೆ ದಿವಸಗಳಲ್ಲಿ ರಾಯಟರ ವಿಶೇಷ ಸುದ್ದಿಗಾರನಾದ [illegible] ಹಾಕಿದ ಅನೇಕ ಪ್ರಶ್ನೆಗಳಿಗೆ ಗಾಂಧೀಜಿ ಉತ್ತರ ಕೊಟ್ಟರು. ಈ ಉತ್ತರಗಳು ಹಿಂದುಸ್ತಾನದ ಮತ್ತು ಜಗತ್ತಿನ ಪ್ರಸ್ತುತ ಸ್ಥಿತಿಗತಿಗಳ ವಿಶಾಲ ಕ್ಷೇತ್ರವನ್ನು ವ್ಯಾಪಿಸಿದ್ದು ಅವುಗಳನ್ನು ಕೆಳಗೆ ಕೊಡಲಾಗಿದೆ.]

ಹಿಂದುಸ್ತಾನವನ್ನು ಜಾತೀಯ ತಳಹದಿಯಲ್ಲಿ ವಿಭಜಿಸುವದು ಅನಿವಾರ್ಯವೆ? ಅಂಥ ವಿಭಜನೆಯಿಂದ ಜಾತೀಯ ಸಮಸ್ಯೆ ಬಗೆಹರಿದೀತೆ?

ನನ್ನ ಮಟ್ಟಿಗೆ ನಾನು ಯಾವಾಗಲೂ "ಇಲ್ಲ" ಎಂದೇ ಇದಕ್ಕೆ ಉತ್ತರ ಕೊಡುತ್ತ ಬಂದಿದ್ದೇನೆ. ಇಂದಾದರೂ ಈ ಎರಡೂ ಪ್ರಶ್ನೆಗಳಿಗೆ "ಇಲ್ಲ" ವೆಂದೆ ಉತ್ತರ ಕೊಡುತ್ತೇನೆ.

ಜೂನ ೧೯೪೮ ರೊಳಗೆ ಹಿಂದೂ ಮುಸ್ಲಿಮ ವಿವಾದಗಳು ಬಗೆಹರಿಯದೆ ಹೋದರೆ ಇಲ್ಲಿ ಮತ್ತೂ ಉಳಿಯುವದು ಬ್ರಿಟನ್ನಿನ ನೈತಿಕ ಕರ್ತವ್ಯವಾಗುವದೆಂಬ ಅಭಿಪ್ರಾಯಕ್ಕೆ ನಿಮ್ಮ ಬೆಂಬಲವುಂಟೆ?

ಇದೀಗ ನನಗೆ ಈ ವರೆಗೆ ಯಾರೂ ಕೇಳದ ಪ್ರಶ್ನೆ. ಬ್ರಿಟಿಶರು ಇಂದೇ ಹೊರಟು ಹೋದರೆ ಬಹಳ ಸುಖ—೧೪ ತಿಂಗಳು ತಡೆಯುವದೆಂದರೆ ಹಿಂದುಸ್ತಾನಕ್ಕೆ ಅಪಾರ ಕೇಡು ಮಾಡಿದಂತೆ. ಬ್ರಿಟಿಶ ಘೋಷಣೆಯ ಉದಾತ್ತತೆಯನ್ನು ನಾನು ಅಲ್ಲಗಳೆಯುವದಿಲ್ಲ, ವಾಯಿಸರಾಯರ ಪ್ರಾಮಾಣಿಕತೆಯನ್ನೂ ಶಂಕಿಸುವದಿಲ್ಲ; ಆದರೂ ವಸ್ತುಸ್ಥಿತಿ ಹೀಗಿದೆ.

ಬ್ರಿಟಿಶ ಮಂತ್ರಿಮಂಡಳವಾಗಲಿ, ಎಂಥ ಸಮರ್ಥನಾದ ವಾಯಿಸರಾಯನೇ ಆಗಲಿ ವಸ್ತುಸ್ಥಿತಿಯನ್ನು ಬದಲಿಸಲಾರರು. ಆ ವಸ್ತುಸ್ಥಿತಿಯೆಂದರೆ, ಪ್ರತಿಯೊಂದಕ್ಕೂ ಬ್ರಿಟಿಶರ ಮೋರೆ ನೋಡದು ಹಿಂದುಸ್ತಾನಕ್ಕೆ ಪರಿಪಾಠ ಬಿದ್ದು ಹೋಗಿದೆ. ಈಗ ಒಮ್ಮಿಂದೊಮ್ಮೆ ಆ ಅವಸ್ಥೆಯಿಂದ ತನ್ನ ಮನಸನ್ನು ಮುಕ್ತಗೊಳಿಸಲು ಹಿಂದುಸ್ತಾನಕ್ಕೆ ಸಾಧ್ಯವಾಗದು. ಬ್ರಿಟಿಶರಿಗೆ ಇಲ್ಲಿಂದ ಹೊರಟು ಹೋಗುವ ಸನ್ನಾಹ ಮಾಡಲು ಇಷ್ಟೆಲ್ಲ ಸಮಯಬೇಕೆಂಬ ವಾದ ನನಗಿನ್ನೂ ಅರ್ಥವಾಗಲೊಲ್ಲದು. ಆ ಅವಧಿಯಲ್ಲಿ ಎಲ್ಲ ಪಕ್ಷಗಳೂ ಬ್ರಿಟಿಶ ಮಂತ್ರಿಮಂಡಲದ ಹಾಗು ವಾಯಿಸರಾಯರ ಮೋರೆ ನೋಡುತ್ತ ಕೂಡುವವು. ನಾವು ಬ್ರಿಟಿಶರನ್ನು ಆಯುಧಬಲದಿಂದ ಸೋಲಿಸಿಲ್ಲ. ಹಿಂದುಸ್ತಾನದ್ದು ಸಾತ್ವಿಕ ಶಕ್ತಿಯ ವಿಜಯ. ಇದ್ದದ ಮಾತೂ ಆಚರಣೆಗೆ ಬರಬೇಕೆಂಬುದು ಬ್ರಿಟಿಶರ ನಿಜವಾದ ಅಂತರ್ಯವಾಗಿದ್ದರೆ, ಅವರ ನಿರ್ಣಯ ಬ್ರಿಟಿಶ ಜನಾಂಗದ ಅತ್ಯುದಾತ್ತ ಕರ್ಮವೆಂದು ಇತಿಹಾಸಪ್ರಸಿದ್ಧವಾಗುವದು.

ಹೀಗಿರುವಾಗ, ಬ್ರಿಟಿಶ ಅಧಿಕಾರವೂ ಬ್ರಿಟಿಶ ಆಯುಧ ಬಲವೂ ಹದಿಮೂರು ತಿಂಗಳ ಕಾಲ ಇಲ್ಲಿ ಉಳಿಯುವದರಿಂದ ಉಪಕಾರಕ್ಕಿಂತ ಉಪದ್ರವವೇ ಹೆಚ್ಚಾಗುವದು. ಏಕೆಂದರೆ ಎಲ್ಲರೂ ಬ್ರಿಟಿಶರು ಉಂಟುಮಾಡಿರುವ ಪ್ರಚಂಡ ಸೈನ್ಯಯಂತ್ರದ ಸಹಾಯಕ್ಕೆ ಕೈಯೊಡ್ಡುವರು. ಬಂಗಾಲ, ಬಿಹಾರ, ಪಂಜಾಬಗಳಲ್ಲಿ ಆದುದು ಹೀಗೆಯೇ; ಗಡಿನಾಡಿನಲ್ಲಾದರೂ ಇದೇ ನಡೆಯುತ್ತಿದೆ. ಹಿಂದುಗಳೂ ಮುಸ್ಲಿಮರೂ ಒಬ್ಬರ ಹಿಂದೊಬ್ಬರು ಬ್ರಿಟಿಶಸೈನ್ಯದ ಸಹಾಯ ಬರಲಿ ಎಂದು ಹೇಳುತ್ತಿದ್ದಾರೆ; ಇದು ಮನನಗೇಡಿ ದೃಶ್ಯವೇ ಸರಿ, ಈ ಮಾತನ್ನು ನಾನು ಈ ಮೊದಲೆಷ್ಟೋ ಸಾರಿ ಹೇಳಿದ್ದೇನೆ. ಆದರೆ ಪುನರುಚ್ಚರಣೆಯಿಂದ ಅದರ ಬೆಲೆ ಕಡಿಮೆಯಾಗುವದಿಲ್ಲ. ಬದಲಿಗೆ ಅದನ್ನು ಉಚ್ಚರಿಸುತ್ತ ಹೋದಂತೆ ಅದರ ಬಲ ಹೆಚ್ಚುವದು. ಹಿಂದುಸ್ತಾನ ಅನಾಯಕತೆ ಅವ್ಯವಸ್ಥೆಗಳ ಪಾಲಾಗುವ ಭಯವಿದ್ದರೂ ಬ್ರಿಟಿಶರು ಇಲ್ಲಿಂದ ಹೊರಟು ಹೋಗಲೇ ಬೇಕು.

ಇದು ಹೀಗೇಕೆಂದರೆ, ಹಿಂದುಸ್ತಾನದಲ್ಲಿ "ಸ್ವರಾಜ್ಯ" ಇದ್ದಿಲ್ಲ. ಇಲ್ಲಿದ್ದ ರಾಜ್ಯ ಹೊರಗಿನವರು ಹೇರಿಸಿದ್ದು. ಅದು ತಾನಾಗಿಯೇ ಹಿಂದೆಗೆಯುವಾಗ ಮೊದಲು ಸ್ವಲ್ಪ ಕಾಲ "ರಾಜ್ಯ"ವೇ ಇಲ್ಲದಾಗುವ ಸಂಭವವುಂಟು. ನಾವು ಅಯುಧಬಲದಿಂದ ವಿಜಯವನ್ನು ಸಂಪಾದಿಸಿದ್ದರೆ ಒಂದು ಬಗೆಯ "ರಾಜ್ಯ" ಉದಯಿಸಬಹುದಾಗಿತ್ತು. ಇಲ್ಲಿರುವ ಜಾತೀಯ ಕಲಹಗಳಿಗೆ ಸ್ವಲ್ಪ ಮಟ್ಟಿಗೆ ಬ್ರಿಟಿಶರ ಇರವೇ ಕಾರಣವೆಂದು ನನ್ನ ಅಭಿಪ್ರಾಯ. ಬ್ರಿಟಿಶರು ಇಲ್ಲದೆ ಹೋದರೂ ಈ ಅಗ್ನಿಯಲ್ಲಿ ನಾವು ಹೊಕ್ಕು ಹೊರಡಲೇ ಬೇಕಾದೀತೆಂಬುದು ನಿಜವಾದರೂ ಅಂಥ ಅಗ್ನಿ ಪ್ರವೇಶದಿಂದ ನಾವು ಪರಿಶುದ್ಧರಾದೇವು.

ಜೂನ ೧೯೪೮ ರ ನಂತರ ಹಿಂದುಸ್ತಾನಕ್ಕೂ ಬ್ರಿಟನ್ನಿಗೂ ಯಾವ ಬಗೆಯ ಸಂಬಂಧವಿರಬೇಕೆನ್ನುವಿರಿ?

ಹಿಂದುಸ್ತಾನಕ್ಕೂ ಬ್ರಿಟನ್ನಿಗೂ ಅತ್ಯಂತ ಸ್ನೇಹಪೂರ್ಣವಾದ ಸಂಬಂಧವಿರಬೇಕೆಂದು ನಾನೆನ್ನುವೆ ಆದರೆ ಅತ್ಯಂತ ಪ್ರಾಮಾಣಿಕತೆಯಿಂದ, ಯಾವುದೇ ಬಗೆಯ ಮಾನಸಿಕ ಕುಯುಕ್ತಿಯಿಲ್ಲದೆ ಬ್ರಿಟಿಶರು ಸಂಪೂರ್ಣವಾಗಿ ಇಲ್ಲಿಂದ ಹೊರಟುಹೋಗಬೇಕು.

ರಾಜ್ಯಘಟನೆಯ ಕರಡಿನಲ್ಲಿ ಅಸ್ಪೃಶ್ಯತೆಯನ್ನು ಕಿತ್ತುಹಾಕುವ ಕಲಮನ್ನು ಸೇರಿಸಿದ್ದು ದೊಡ್ಡ ಸುಧಾರಣೆಯೆನ್ನಬಹುದೆ?

ಇಲ್ಲ. ಆ ಕಲಮು ದೊಡ್ಡ ಸುಧಾರಣೆಯೆನಿಸಲಾರದು. ಹಿಂದೂ ಸಮಾಜದಲ್ಲಿ ಮಹತ್ತರವಾದ ಕ್ರಾಂತಿಕಾರಿ ಸುಧಾರಣೆಯಾಗಿದೆಯೆಂಬುದನ್ನಷ್ಟೇ ಅದು ಸೂಚಿಸುತ್ತದೆ. ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತುಹಾಕುವದಿನ್ನೂ ಸಾಧ್ಯವಾಗಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಬ್ರಿಟಿಶ ಸಂಬಂಧದಿಂದೊದಗಿದ ದುಷ್ಪರಿಣಾಮಗಳು ಹೇಗೋ ಹಾಗೆಯೆ ಅದಕ್ಕಿಂತಲೂ ಹಳೆಯದಾದ ಅಸ್ಪೃಶ್ಯತೆಯ ಸಂಸ್ಥೆಯೂ ಕ್ಷಣಮಾತ್ರದಲ್ಲಿ ಕಣ್ಮರೆಯಾಗಲಾರದು. ಹಿಂದುಸ್ತಾನಕ್ಕೆ ಬಂದ ಹೊಸಬರು ಇಲ್ಲಿ ಯಾವುದೇ ರೂಪದಲ್ಲಿ ಅಸ್ಪೃಶ್ಯತೆಯಿಲ್ಲವೆಂದು ಹೇಳಬೇಕಾದರೆ ಇನ್ನೂ ಕೆಲವರ್ಷ ಹಿಡಿದೀತೇನೊ.

ಯುಕ್ತರಾಷ್ಟ್ರ ಸಂಸ್ಥೆ, ಈಗಿರುವ ರೂಪದಲ್ಲಿ ಚಿರಸ್ಥಾಯಿಯಾದ ಶಾಂತಿಯನ್ನು ಕಾಪಾಡೀತೆಂದು ನಂಬುವಿರಾ?

ಇಲ್ಲ. ಜಗತ್ತು ಇನ್ನೊಂದು ಶಕ್ತಿಪರೀಕ್ಷೆಯ ಕಡೆಗೆ ಧಾವಿಸುತ್ತಿದೆಯೆಂದು ನನಗೆ ಭಯವಾಗುತ್ತಿದೆ. ಈ ಭಯ ಅನೇಕರ ಹೃದಯಗಳನ್ನು ವಿಹ್ವಲಗೊಳಿಸಿದೆ. ಆದರೆ ಹಿಂದುಸ್ತಾನದಲ್ಲಿ ಎಲ್ಲವೂ ಒಳಿತಾದರೆ ಜಗತ್ತಿಗೆ ಚಿರಶಾಂತಿ ದೊರೆಯಬಹುದು. ಇದು, ಹಿಂದುಸ್ತಾನ ಯಾವ ಬಗೆಯಲ್ಲಿ ಪರಿಸ್ಥಿತಿಯನ್ನು ಅವಲೋಕಿಸುವದೋ ಅದನ್ನು ಹೊಂದಿಕೊಂಡಿದೆ. ಅದಾದರೂ ಬ್ರಿಟಿಶ ಮುತ್ಸದ್ದಿತನವನ್ನು ಬಹಳ ಮಟ್ಟಿಗೆ ಅವಲಂಬಿಸಿದೆ.

ಪಾಲಿಸ್ತಾನ ಸಮಸ್ಯೆಗೆ ಪರಿಹಾರವೇನು?

ಅದೊಂದು ಅಪರಿಹಾರ್ಯಪ್ರಾಯ ಸಮಸ್ಯೆಯೇ ಆಗಿಬಿಟ್ಟಿದೆ. ನಾನು ಯಹೂದ್ಯನಾಗಿದ್ದರೆ, ಹಿಂಸಾಚಾರಕ್ಕೆ ಕೈಹಾಕುವಷ್ಟು ಮೂರ್ಖರಾಗಬೇಡಿರಿ ಎಂದು ಅವರಿಗೆ ಹೇಳುತ್ತಿದ್ದೆ. ಏಕೆಂದರೆ ಅನ್ಯಥಾ ಸುಯೋಗ್ಯವಾದ ನಿಮ್ಮ ವಾದವನ್ನು ಈ ಹಿಂಸೆಯಿಂದ ಹಾಳುಮಾಡಿಕೊಳ್ಳುತ್ತಿದ್ದೀರಿ. ಯಹೂದ್ಯರದು ಬರಿ ರಾಜಕೀಯ ಮಹತ್ವಾಕಾಂಕ್ಷೆಯಾಗಿದ್ದರೆ ಅದಕ್ಕೆ ಬೆಲೆಯೇ ಇಲ್ಲ. ಅವರು ಪಾಲಿಸ್ತಾನಕ್ಕಾಗಿಯೇ ಏಕೆ ಬಾಯ್ಬಿಡಬೇಕು? ಅವರು ಮಹಿಮಾವಂತ, ಯೋಗ್ಯತಾಸಂಪನ್ನ ಜನಾಂಗ. ನಾನು ದಕ್ಷಿಣ ಆಫ್ರಿಕೆಯಲ್ಲಿ ಎಷ್ಟೋ ವರ್ಷ ಯಹೂದ್ಯರೊಡನೆ ವಾಸಿಸಿದವನು. ಇನ್ನು ಅವರದು ಧಾರ್ಮಿಕ ಆಕಾಂಕ್ಷೆಯಾಗಿದ್ದರೆ, ಅದರಲ್ಲಿ ಹಿಂಸಾಚಾರಕ್ಕೆ ಎಡೆಯೇ ಇಲ್ಲ. ಅವರು ಅರಬರನ್ನು ಕಂಡು, ಗೆಳೆತನ ಬೆಳೆಸಬೇಕಲ್ಲದೆ ಬ್ರಿಟಿಶ ಸಹಾಯ ಅಮೇರಿಕನ ಸಹಾಯ, ಅಥವಾ ಯೆಹೋವನು ದಯಪಾಲಿಸಿದೊಂದನ್ನು ಬಿಟ್ಟು ಬೇರಾವ ಸಹಾಯವನ್ನೂ ಅವಲಂಬಿಸತಕ್ಕದ್ದಲ್ಲ.

ಹಿಂದೀ ರಾಷ್ಟ್ರೀಯ ಮಜದೂರ ಸಂಘ

(ಹೊಸದಿಲ್ಲಿಯಲ್ಲಿ ಮೇ ೩ ನೇ ತಾರೀಕು ಆಚಾರ್ಯ ಕೃಪಲಾನಿಯವರಿಂದ ಪ್ರಾರಂಭಿಸಲ್ಪಟ್ಟ ಸರದಾರ ವಲ್ಲಭಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ನಡೆದ ಹಿಂದುಸ್ತಾನದಲ್ಲಿಯ ಎಲ್ಲ ಭಾಗಗಳ ಕೂಲಿಕಾರ ವರ್ಗದ ಪರಿಷತ್ತಿನಲ್ಲಿ ದಿ ಇಂಡಿಯನ್ ನ್ಯಾಶನಲ್ ಟ್ರೇಡ ಯೂನಿಯನ್ ಕಾಂಗ್ರೆಸ್ ಅಥವಾ ರಾಷ್ಟ್ರೀಯ ಮಜದೂರ ಪರಿಷತ್ತನ್ನು ಸ್ಥಾಪಿಸಬೇಕೆಂಬ ಗೊತ್ತುವಳಿ ಸ್ವೀಕೃತವಾಯಿತು.

ರಾಷ್ಟ್ರಪತಿಗಳ ಪ್ರಾರಂಭ ಭಾಷಣ ಸರದಾರ ಪಟೇಲರ ಅಧ್ಯಕ್ಷೀಯ ಭಾಷಣ ಮತ್ತು ಗೊತ್ತುವಳಿಯನ್ನು ಇಲ್ಲಿ ಕೊಟ್ಟಿದೆ.

ಮತ್ತೊಂದು ಗೊತ್ತುವಳಿಯಿಂದ ಪರಿಷತ್ತು ಕಾಂಗ್ರೆಸ್ಸಿನ ತಾತ್ಪೂರ್ತಿಕ ಕಾರ್ಯಕಾರೀ ಮಂಡಳವನ್ನು ಆರಿಸಿತು. ಡಾ. ಸುರೇಶಚಂದ್ರ ಬ್ಯಾನರ್ಜಿಯವರು ಚೇರಮನ್‌ರು ಮತ್ತು ಖಂಡೂಭಾಯಿ ದೇಸಾಯರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.— ಸಂಪಾದಕ)

ಕಾಂಗ್ರೆಸ್ಸಿನ ಅಧ್ಯಕ್ಷರಾದ ಆಚಾರ್ಯ ಕೃಪಲಾನಿಯವರು ಪರಿಷತ್ತಿನ ಪ್ರಾರಂಭೋತ್ಸವವನ್ನು ಜರುಗಿಸುತ್ತ ಪರಿಷತ್ತನ್ನು ಕರೆದುದರ ಉದ್ದೇಶವನ್ನು ವಿವರಿಸಿದರು. ಬಹಳ ದಿವಸಗಳ ಹಿಂದೆಯೆ ಅಂದರೆ ೧೯೩೭ ರಲ್ಲಿ ಬಿ. ಬಿ. ಆ್ಯಂಡ ಸಿ. ಆಯ. ರೇಲ್ವೆ ಕೆಲಸಗಾರರ ಸಂಘವನ್ನು ಮತ್ತು ಗುಜರಾತ ಅಂಚೆ ಕೆಲಸಗಾರರನ್ನು ಸಂಘಟಿಸಿ ಟ್ರೇಡಯೂನಿಯನ್ ಚಳವಳಿಯ ಪ್ರಾರಂಭಕಾಲದಿಂದಲೂ ಸ್ವತಃ ಟ್ರೇಡ ಯೂನಿಯನಿಸ್ಟರಾಗಿರುವ ಸರದಾರ ಪಟೇಲರ ಅಧ್ಯಕ್ಷತೆಯಲ್ಲಿ ಈ ಪರಿಷತ್ತು ನೆರೆದುದು ಒಳ್ಳೆ ಸಂತೋಷದ ಸಂಗತಿಯೆಂದು ಆಚಾರ್ಯರು ಹೋಗಹೋಗುತ್ತ ತಮ್ಮ ಭಾಷಣದಲ್ಲಿ ನಿವೇದಿಸಿದರು. ಇಂದು ಟ್ರೇಡಯೂನಿಯನ್ ಕಾಂಗ್ರೆಸ್ಸಿನಲ್ಲಿ ಪ್ರಭುತ್ವ ನಡೆಸುವ ಧ್ಯೇಯ ಸಾಧನೆಗಾಗಿ ಯಾವದೇ ಮಾರ್ಗ ಉಚಿತವೆಂದು ಭಾವಿಸುವ ಜನರೊಡನೆ, ಶಾಂತ ಮತ್ತು ಪ್ರಜಾಪ್ರಭುತ್ವ ಮಾರ್ಗಗಳಿಂದ ಕಾರ್ಯಮಾಡುವದರಲ್ಲಿ ವಿಶ್ವಾಸವಿದ್ದವರು ಸಹಕರಿಸುವದು ಕಠಿನವಾದ ಮಾತಾಗಿದೆಂದು ಅವರು ತೋರಿಸಿಕೊಟ್ಟರು. ಸದ್ಯದ ಪ್ರಸಂಗದಲ್ಲಿ ಅತ್ಯವಶ್ಯವೆಂದು ಶ್ರೀ ನಂದಾ, ಶ್ರೀ ಸುರೇಶ ಬ್ಯಾನರ್ಜಿ, ಶ್ರೀ ಖಂಡೂಭಾಯಿ ದೇಸಾಯಿ ಮತ್ತು ಉಳಿದ ಪ್ರಮುಖ ಕೂಲಿಕಾರ ಧುರೀಣರಿಂದ ಸ್ಥಾಪಿತವಾದ ಈ ಹೊಸ ಸಂಸ್ಥೆ ಅತ್ಯಂತ ಯಶಸ್ವಿಯಾಗುವದೆಂದು ಆಶಿಸುತ್ತೇನೆಂದು ಮುಂತಾಗಿ ಆಚಾರ್ಯರು ಹೇಳಿದರು.

ಕೂಲಿಕಾರರ ಕಷ್ಟನಷ್ಟಗಳ ನಿವಾರಣೆಗಾಗಿ ನ್ಯಾಯ್ಯವಾದ ಮಟ್ಟವನ್ನು ಸ್ಥಾಪಿಸಿ ಪಂಚಾಯತಿ ಮತ್ತು ನ್ಯಾಯಮಂಡಳ ಮುಖಾಂತರ ವ್ಯಾಜ್ಯಗಳನ್ನು ಬಗೆಹರಿಸಿಕೊಳ್ಳುವ ದೃಷ್ಟಿಯಿಂದ ಶಾಂತತೆಯ ಮತ್ತು ರಾಜಕಾರಣಾತೀತ ಮಾರ್ಗದಿಂದ ಕಾರ್ಯಮಾಡುವ ಹೊಸ ಕೇಂದ್ರ ಸಂಘವೊಂದನ್ನು ಸಂಸ್ಥಾಪಿಸುವದವಶ್ಯವಾಗಿದೆಂದು ಕೂಲಿಕಾರ ಧುರೀಣರಿಗೆ ಸಲಹೆ ಕೊಡುವ ಕಾಲ ಈಗಾಗಲೆ ಸಂದಿ ಹೋಗಹತ್ತಿದೆಂಬ ನಿರ್ಣಯಕ್ಕೆ ಸಂಘವೇಕೆ ಬರಬೇಕಾಯಿತೆಂಬುದನ್ನು ಹಿಂದುಸ್ತಾನದ ರಾಷ್ಟ್ರೀಯ ಮಜದೂರ ಸೇವಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಗುಲಜಾರಿಲಾಲ ನಂದಾ ಇವರು ಒಂದು ಹೇಳಿಕೆಯಲ್ಲಿ ವಿವರಿಸಿದರು.

ಸರದಾರ ಪಟೇಲರು ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಟ್ರೇಡಯುನಿಯನ್ ಕಾಂಗ್ರೆಸ್ಸಿನ ಇತಿಹಾಸವನ್ನು ತಿಳಿಸಿ ಸದ್ಯದ ಅದರ ಪರಿಸ್ಥಿತಿಯನ್ನು ಸುದೀರ್ಘವಾಗಿ ವಿವೇಚಿಸಿದರು. ಕಾಂಗ್ರೆಸ್ಸಿಗರಿಂದ ಪರ್ತೀಸು ಪಡೆದ ಮತ್ತು ಪಂಡಿತ ಜವಾಹರಲಾಲ ನೆಹರು ಸಿ. ಆರ್ ದಾಸ ಮತ್ತು ಲಾಲಾ ಲಜಪತರಾಯರಂಥ ಪ್ರಮುಖ ಕಾಂಗ್ರೆಸ್ಸಿಗರು ಅಧ್ಯಕ್ಷತೆ ವಹಿಸಿದ್ದ ಟ್ರೇಡ ಯುನಿಯನ್ ಕಾಂಗ್ರೆಸ್ಸು ಇಂದು ಕಾಂಗ್ರೆಸ್ ಧೋರಣವನ್ನು ವಿರೋಧಿಸುತ್ತಿರುವದು. ಇಂದು ಕಮ್ಯುನಿಸ್ಟರು ಅದರಲ್ಲಿ ಪ್ರಭುತ್ವ ನಡೆಸುತ್ತಿರುವರು. ಅವರು ಕೆಲಸಗಾರರ ಕಲ್ಯಾಣಕ್ಕಾಗಿ ಸಂಘವನ್ನು ಹೂಡದೆ ತಮ್ಮ ಪಕ್ಷದ ಧ್ಯೇಯ ಸಾಧನೆಗಾಗಿ ಇಲ್ಲವೆ ಸರಕಾರವನ್ನು ಕೆಳಕ್ಕೆ [illegible]ಕ್ಕಾಗಿ ಸಂಘ ಹೂಡಿರುತ್ತಿರುವರು. ಕಮ್ಯುನಿಸ್ಟ ಸಂಘಗಳು ಸದಸ್ಯರ ಸಂಖ್ಯೆಯನ್ನು ಸುಳ್ಳು ಸುಳ್ಳೆ ಬೆಳೆಯಿಸಿ ಅನ್ಯಾಯದ ಮಾರ್ಗವನ್ನು ಅನುಸರಿಸಿ ಹೇಳುವದರಿಂದ ಟ್ರೇಡ ಯೂನಿಯನ್ ಕಾಂಗ್ರೆಸ್ಸನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುವದರಲ್ಲಿ ಅರ್ಥವಿಲ್ಲ. ತದ್ವಿರುದ್ಧವಾಗಿ ಮಹಾತ್ಮಾ ಗಾಂಧಿಯವರಿಂದ ಪ್ರಾರಂಭಿಸಲ್ಪಟ್ಟ ಕೂಲಿಕಾರ ಚಳವಳಿಯನ್ನು ಶ್ರೀಮತಿ ಅನುಸೂಯಾಬಾಯಿ ಸಾರಾಭಾಯಿ ಶ್ರೀ ಶಂಕರಲಾಲ ಬ್ಯಾಂಕರ, ಶ್ರೀ ಗುಲಜಾರಿಲಾಲ ನಂದಾ, ಖಂಡೂಭಾಯಿ ದೇಸಾಯಿ, ಮೊದಲಾದವರು ನಿಸ್ವಾರ್ಥ ಸೇವೆಯಿಂದ ದೇಶದಲ್ಲಿ ಅತ್ಯುತ್ತಮ ಕೂಲಿಕಾರ ಸಂಸ್ಥೆಯನ್ನಾಗಿ ಪರಿವರ್ತಿಸಿದರೆಂಬುದನ್ನು ನೋಡಬಹುದಾಗಿದೆ. ಅಹಮದಾಬಾದದಲ್ಲಿಯ ಜವಳಿ ಕೂಲಿಕಾರ ಸಂಘ ಇಂದು ದೇಶದಲ್ಲಿ ಹತ್ತಿಗಿರಣಿ ಕೂಲಿಕಾರ ಸಂಘಗಳಲ್ಲಿ ಅತ್ಯಂತ ಬಲಿಷ್ಠವಾಗಿದ್ದು ಪರದೇಶಿ ಸಂದರ್ಶಕರು ಕೂಡ ಅದನ್ನು ಪ್ರಶಂಸಿಸುತ್ತಿರುವರು. ಯೂನಿಯನ್ನಿನ ೨೫ ವರ್ಷಗಳ ಕಾರ್ಯದಿಂದ ಅಹಮದಾಬಾದ ಸಂಪತ್ಸಮೃದ್ಧ ನಗರವಾಗಿದೆ ಮತ್ತು ಕೂಲಿಕಾರರು ಬಹಳ ಹೆಚ್ಚು ಕೂಲಿಯನ್ನು ಪಡೆಯುತ್ತಿರುವರು. ೧೯೨೦ ನೇ ಇಸ್ವಿಯಷ್ಟು ಕಾಲ ಹಿಂದೆಯೆ ಮಹಾತ್ಮಾ ಗಾಂಧಿಯವರು ತಮ್ಮ ಪ್ರಾಣವನ್ನು ಪಣಕ್ಕೆ ಒಡ್ಡಿ ಪಂಚಾಯತಿ ಮಂಡಳವನ್ನು ಸ್ಥಾಪಿಸಿದ್ದು ಅದರ ಮುಖಾಂತರ ಪಕ್ಷಗಳು ತಮ್ಮ ತಮ್ಮ ಮತಭೇದವನ್ನು ಪರಿಹರಿಸಿಕೊಳ್ಳುತ್ತಿರುವವಾದ್ದರಿಂದ ಬಹಳ ಸ್ವಲ್ಪ ಸಂಪುಗಳು ಹೂಡಲ್ಪಟ್ಟದ್ದುಂಟು. ಅಹಮದಾಬಾದ ಮಾದರಿಯ ಉತ್ತಮ ಸಂಘಗಳು ದೇಶದಲ್ಲೆಲ್ಲ ಸಂಸ್ಥಾಪಿತವಾಗುವಂತೆ ನೋಡಿಕೊಳ್ಳಲು ನಾವು ಆತುರರಾಗಿದ್ದೇವೆ. ಆದುದರಿಂದ ೧೯೩೭ ರಲ್ಲಿ ಕಾಂಗ್ರೆಸ್ಸು ಮಂತ್ರಿತ್ವವನ್ನು ವಹಿಸುವಾಗ ಈ ಬಗ್ಗೆ ಕಾರ್ಯ ಪ್ರಾರಂಭ ಮಾಡಿ ಕೂಲಿಕಾರ ಕೆಲಸಗಾರರಿಗೆ ಶಿಕ್ಷಣ ಕೊಟ್ಟು ದೇಶದಲ್ಲೆಲ್ಲ ಅವರನ್ನು ಕಳಿಸಬೇಕೆಂದು ಗೊತ್ತು ಮಾಡಿತು. ರಾಜಕೀಯ ಹೋರಾಟದ ಮೂಲಕ ಕಾರ್ಯಕ್ಕೆ ತಡೆಯುಂಟಾದರೂ ಈ ಕಾರ್ಯ ಪ್ರಾರಂಭ ಮಾಡಿದವರು ಯಶಸ್ಸು ಪಡೆದರು. ಇಂದು ಟ್ರೇಡ ಯೂನಿಯನ್ ಕಾಂಗ್ರೆಸ್ಸಿನಲ್ಲಿ ಪ್ರಭುತ್ವ ನಡೆಸುತ್ತಿರುವ ಕಮ್ಯುನಿಸ್ಟರು ಸಂಪುಗಳನ್ನು ಹೂಡಿಸುತ್ತಿರುವರು. ಪಂಚಾಯತಿಗಳಿಗೆ ಒಪ್ಪುವದಿಲ್ಲ. 'ಮಂದ ಧೋರಣವನ್ನು' ಪ್ರತಿಪಾದಿಸುತ್ತಿರುವರು ಉತ್ಪಾದನೆ ಹೆಚ್ಚಾಗ [illegible] ಜೋಡಿಸಿಟ್ಟ ಬೇಡಿಕೆಗಳನ್ನು ಮುಂದೆ ಮಾಡಿ ಕೆಲಸವನ್ನು ನಿಲ್ಲಿಸಿಬಿಡುವರು.

ಸದ್ಯಕ್ಕೆ ಕೈಕೊಂಡ ಕಾರ್ಯವನ್ನು ನಿಜವಾಗಿ ಈ ಮೊದಲೇ ಕೈಕೊಳ್ಳಬೇಕಿತ್ತು. ಸ್ವಾತಂತ್ರ್ಯ ಸಮೀಪಿಸಿದ ಈ ಕಾಲದಲ್ಲಿ ಗೊಂದಲವನ್ನು ಎಬ್ಬಿಸುತ್ತಿರುವ ಮತ್ತು ಯಾವದೇ ಮಾರ್ಗದಿಂದ ಅಧಿಕಾರವನ್ನಾಕ್ರಮಿಸಬೇಕೆಂದು ಹಂಬಲಿಸುತ್ತಿರುವ ಕಾಂಗ್ರೆಸ್ಸಿನೊಳಗಿನ ಜನರೊಡನೆಯೆ ನಾವೀಗ ಹೋರಾಡಬೇಕಾಗಿದೆ. ಈ ರೀತಿ ಸರದಾರರು ಭಾಷಣ ಮಾಡಿ ಮುಖ್ಯ ಗೊತ್ತುವಳಿಯನ್ನು ಮಂಡಿಸಲು ಸುರೇಶ ಬ್ಯಾನರ್ಜಿಯವರನ್ನು ಕೇಳಿಕೊಂಡರು. ಆ ಗೊತ್ತುವಳಿಯಂತಿದೆ.—

ಶಾಂತ ಮತ್ತು ಪ್ರಜಾಪ್ರಭುತ್ವ ಮಾರ್ಗದಿಂದ ಬದಲಾವಣೆಗೆ ವಿರೋಧ ಮಾಡುತ್ತಿರುವ ಜನರ ಕೈಯಲ್ಲಿ ದೇಶದ ಕೂಲಿಕಾರ ಚಳವಳಿ ಹೋದದ್ದರಿಂದ ಬಲಿಷ್ಠ ಮತ್ತು ಆರೋಗ್ಯಕರ ಟ್ರೇಡ ಯೂನಿಯನ್ ಚಳವಳಿಗೆ ಅತ್ಯಂತ ವಿಘಾತಕವಾಗಿ ಪರಿಣಮಿಸಿದೆಯಾದ್ದರಿಂದ ಮತ್ತು ದೇಶದಲ್ಲಿಯ ಜನತಾ[illegible]ರ ನಿಜವಾದ ಹಿತಸಂಬಂಧಗಳಿಗೆ ಎಡೆಗೊಡಲು ಕಾರಣವಾಗುತ್ತಿದೆಯಾದ್ದರಿಂದ ಕೂಲಿಕಾರರ ಹಿತಸಂಬಂಧಗಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಸಂಘಟಿತ ಕಾರ್ಯಮಾಡುವದು ಕೂಲಿಕಾರರ ಕಲ್ಯಾಣಾಪೇಕ್ಷಿಗಳ ಪವಿತ್ರ ಮತ್ತು ಅವಶ್ಯ ಕರ್ತವ್ಯವಾದ್ದರಿಂದ ಈ ಉದ್ದೇಶ ಸಾಧನೆಗಾಗಿ ದಿ ಇಂಡಿಯನ್ ನ್ಯಾಶನಲ್ ಟ್ರೇಡ ಯೂನಿಯನ್ ಕಾಂಗ್ರೆಸ್ ಎಂಬ ಸಂಸ್ಥೆಯನ್ನು ಸಂಸ್ಥಾಪಿಸಬೇಕೆಂದು ನಿರ್ಣಯಿಸಲಾಗುತ್ತದೆ.

'ನಕಲೀ' ತುಪ್ಪ

ವನಸ್ಪತಿ 'ತುಪ್ಪ'ದ ಸಂಬಂಧದಲ್ಲಿ ನಾವು ಬರೆದ ಬರೆಹಗಳಿಗಾಗಿ ಸಾರ್ವಜನಿಕರಿಂದ ಪ್ರಶಂಸಾಪರ ಪತ್ರಗಳ ಕಾರಖಾನೆದಾರರಿಂದ ಸ್ವಾಭಾವಿಕವಾಗಿ ತೆಗಳುವ ಪತ್ರಗಳ ಸುರಿಮಳೆಯಾಗಿದೆ ನಮ್ಮ ಕಚೇರಿಗೆ. ಗೌರವಾರ್ಹ ಗೆಳೆಯರೊಬ್ಬರು ಈ ಪದಾರ್ಥಕ್ಕೆ "ನಕಲಿ" (ಇಮಿಟೇಶನ್) ತುಪ್ಪ ಎಂದು ಕರೆದಿದ್ದಾರೆ. ಯುರೋಪಿನಲ್ಲಿ ಬೆಣ್ಣೆ ಇವಿ ಟೀಕನದಿಂದ ಮಾಡಿದ ಪದಾರ್ಥಗಳಿಗೆಲ್ಲ 'ಮಾರ್ಗರಾಯಿನ್' ಎಂದು ಕಾಯುದೆಬದ್ಧ ಹೆಸರು ಕೊಟ್ಟಿರುವಂತೆ, ಈ ಹೇಂಗೂ ಕಾಯದೆಯಿಂದ ವನಸ್ಪತಿ ತುಪ್ಪವೆಂದು ಅನಿಸಿಕೊಳ್ಳುವ 'ನಿರ್ಗಂಧೀಕೃತ ವನಸ್ಪತಿ ಎಣ್ಣೆ' ಎಂದು ಮಾತ್ರವೇ ಹೆಸರನ್ನು ಇಡಬಹುದಾಗಿದೆ.

ಕಾರಖಾನೆದಾರರು ಎಬ್ಬಿಸಿದ ಕೂಗು ಮತ್ತು ಅದಕ್ಕೆ ನಮ್ಮ ಪ್ರತಿಕ್ರಿಯೆಯನ್ನು ಕೆಳಗೆ ಕೊಟ್ಟಿದ್ದೇವೆ.

ಕಾರಖಾನೇದಾರರ 'ಕಾಳಜಿ' ಸೇವಕನೊಬ್ಬನು ಹೀಗೆ ಬರೆಯುತ್ತಾನೆ

"ಅಸಲ ತುಪ್ಪದ ಕೂಡ ವನಸ್ಪತಿಯನ್ನು ತುಲನೆ ಮಾಡಿದ್ದಾದರೆ ನಿಶ್ಚಯವಾಗಿ ಅದು ಪೋಷಕ ದ್ರವ್ಯಗಳಲ್ಲಿ ಕಡಿಮೆ ತರಗತಿಯದಾಗಿದೆ. ಆದರೆ ಅದನ್ನು ಯಾವ ಎಣ್ಣೆಯಿಂದ ಮಾಡಲಾಗಿದೆಯೋ ಆ ಎಣ್ಣೆಯ ಕೂಡ ತುಲನೆ ಮಾಡಿ ನೋಡಿದ್ದಾದರೆ ನಿಶ್ಚಿತವಾಗಿ ಅದು ಹೆಚ್ಚು ಪೌಷ್ಟಿಕ ಪದಾರ್ಥವಾಗಿದೆದೆಂಗೊತ್ತಾಗುವದು. ಏಕೆಂದರೆ ಅದಕ್ಕೆ ಹೆಚ್ಚು ರುಚಿಯಿದೆ ಮತ್ತು ಅದನ್ನು ಹೆಚ್ಚು ದಿನ ಇಡಲಿಕ್ಕೆ ಬರುವದು."

ಈ ಹೇಳಿಕೆ ಅರ್ಧ ಸತ್ಯ ಮತ್ತು ವಸ್ತುಸ್ಥಿತಿಯನ್ನು ಹತ್ತಿಕ್ಕುವ ಸಂಗತಿಗಳಿಂದ ಕೂಡಿದ್ದಾಗಿದೆ. ಇವುಗಳ ಆಧಾರದ ಮೇಲೆಯೇ ಕಾರಖಾನೆದಾರರು ತಮ್ಮ ಪಕ್ಷವನ್ನು ಸಮರ್ಥಿಸುತ್ತಿರುವರು. ತುಪ್ಪದಗೂಡ ತುಲನೆ ಮಾಡುವಾಗ ವನಸ್ಪತಿ 'ಆಹಾರ ಸತ್ವ'ದಲ್ಲಿ ಕಡಿಮೆ ತರಗತಿಯದಾಗಿದೆಂದು ಒಪ್ಪುತ್ತಾರೆ. ಅರ್ಥಾತ್ ಪೌಷ್ಟಿಕತೆಯಲ್ಲಿ ಅದು ಕಡಿಮೆ ದರ್ಜೆಯದೆಂದು ಒಪ್ಪುತ್ತಾರೆ.

ಆದರೆ ಎಣ್ಣೆಯ ಕೂಡ ತುಲನೆ ಮಾಡುವಾಗ ಪೌಷ್ಟಿಕತೆಯ ಕಡೆಗೆ ಗಮನಿಸುವದಿಲ್ಲ. ಆದರೆ ಅದು ಬಹಳ ದಿನ ಬಾಳುವದು ಮತ್ತು ಹೆಚ್ಚು ರುಚಿಕರವಾಗಿದೆಂದು ಹೇಳುವರು. ವಾಚಕರಿಗೆ 'ಶ್ರೇಷ್ಠ ಆಹಾರ ಪದಾರ್ಥ' ಎಂದರೆ ಪೌಷ್ಟಿಕತೆಯುಳ್ಳದೇ ಅರ್ಥವಾಗುವದು.

ತುಲನೆ ಮಾಡುವದಾದರೂ ಹತ್ತಿಕಾಳಿನ ಎಣ್ಣೆ ಇಲ್ಲವೆ ಶೇಂಗಾ ಎಣ್ಣೆ ಕೂಡ ಮಾಡುವದಲ್ಲದೆ ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ ಅಥವಾ ಸಾಸವಿ ಎಣ್ಣೆಯ ಕೂಡ ಮಾಡುವದಿಲ್ಲ. ಈ ಎಣ್ಣೆಗಳನ್ನೇ ಸಾಮಾನ್ಯವಾಗಿ ಆಹಾರವೆಂದು ಸೇವಿಸಲಾಗುತ್ತದೆ.

ಇದಲ್ಲದೆ ಗಿರಣಿಗಳಲ್ಲಿ ತಯಾರಾದ ಎಣ್ಣೆಯೊಡನೆ ತುಲನೆ ಮಾಡುವದಲ್ಲದೆ ಗಾಣಗಳಲ್ಲಿ ತಯಾರಾದ ಎಣ್ಣೆಯ ಕೂಡ ಮಾಡುವದಿಲ್ಲ. ವಾಚಕರಲ್ಲಿ ತಪ್ಪು ತಿಳುವಳಿಕೆಯನ್ನುಂಟು ಮಾಡುವದಕ್ಕಾಗಿಯೆ ಹೀಗೆ ಮಾಡಲಾಗುತಿದೆಂಬುದು ಸುಸ್ಪಷ್ಟವಾಗಿದೆ.

ಕಾರಖಾನೆದಾರರು ದೊಡ್ಡ ಪ್ರಮಾಣದಲ್ಲಿ ಜಾಹೀರಾತಿನ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇದರಿಂದ ಸಾರ್ವಜನಿಕರು ಗೊಂದಲದಲ್ಲಿ ಬೀಳುವದು ಸ್ವಾಭಾವಿಕ. ಅವರು ವನಸ್ಪತಿಯನ್ನು ಮಾರ್ಗರಾಯಿನಕ್ಕೆ ಹೋಲಿಸುತ್ತಾರೆ. ಈ ತುಲನೆ ಸಬಲವಾಗಿರುವದಿಲ್ಲ. ವನಸ್ಪತಿಯನ್ನು ಗಿರಣಿಯಲ್ಲಿ ತಯಾರಾದ ಹತ್ತಿಕಾಳಿನ ಎಣ್ಣೆ ಇಲ್ಲವೆ ಶೇಂಗಾದೆಣ್ಣೆಯಿಂದ ಸಿದ್ಧಮಾಡುತ್ತಿದ್ದರೆ ಮಾರ್ಗರಾಯಿನ್‌ವನ್ನು ಇಂಥ ಕಡಿಮೆ ತರಗತಿಯ ನಿರ್ಗಂಧೀಕೃತ ವನಸ್ಪತಿ ಎಣ್ಣೆಗಳಿಂದ ತಯಾರಮಾಡುವರೆಂದು ತಿಳಿಯುವದಿಲ್ಲ. ನಿರ್ಗಂಧೀಕೃತ ಎಣ್ಣೆಗಳು ಅಸ್ತಿತ್ವದಲ್ಲಿ ಬರುವ ಮೊದಲೆ ಈ ಮಾರ್ಗರಾಯಿನ್‌ವನ್ನು ಮಾಡುತ್ತಿದ್ದರೆಂಬುದು ಗೊತ್ತಾಗುತ್ತದೆ. ಸಾಮಾನ್ಯವಾಗಿ ಅದನ್ನು ಮೃದುಪ್ರಾಣಿಕೊಬ್ಬಿನಿಂದ ಅಥವಾ ಪ್ರಾಣಿಕೊಬ್ಬು ಮತ್ತು ವನಸ್ಪತಿ ಎಣ್ಣೆಗಳ ಮಿಶ್ರಣದಿಂದ ಮಾಡಲಾಗುತ್ತಿದೆ. ಹಾಲಿನಲ್ಲಿ ಅದನ್ನು ಕಡೆದು ಮತ್ತು ಬರ್ಫನಲ್ಲಿ ಕೂಡಿಸಿ ಹಾಲಿನ ಪದಾರ್ಥವೆಂದು ಅದು ತೋರುವಂತೆ ಯೋಜಿಸಲಾಗುತ್ತದೆ. ವನಸ್ಪತಿ ಕೊಬ್ಬಿನಿಂದ ತಯಾರಾದ ಈ ಮಾರ್ಗರಾಯಿನ್ ಯುರೋಪ ಮತ್ತು ಅಮೇರಿಕೆಯಲ್ಲಿ ಹೆಚ್ಚಾಗಿ ಉಪಯೋಗಿಸಲಾಗುತಿದೆ ಮತ್ತು ಪ್ರಮುಖ ಸಂಶೋಧಕರು ಇದು ಆರೋಗ್ಯಕರ ಮತ್ತು ಪೌಷ್ಟಿಕವಾಗಿದೆಂದು ಒಮ್ಮತದಿಂದ ಒಪ್ಪುವರಾದ್ದರಿಂದ ಗಿರಣಿಗಳಲ್ಲಿ ತಯಾರಾದ ಕಡಿಮೆ ತರಗತಿಯ ಈ ವನಸ್ಪತಿ ಎಣ್ಣೆಯೇ ಅಷ್ಟೇ ಪೌಷ್ಟಿಕವಾಗಿದೆಂದು ಯಾವ ತರ್ಕಸರಣಿಯಿಂದಲೂ ಹೇಳಲಿಕ್ಕೆ ಬರಲಾರದು. ಈ ತರ್ಕಸರಣಿಯನ್ನು ಇನ್ನಷ್ಟು ಮುಂದೆ ಜಗ್ಗಿ ತುಪ್ಪ ಪೌಷ್ಟಿಕ ಪದಾರ್ಥವಾದ್ದರಿಂದ ವನಸ್ಪತಿ ತುಪ್ಪವೂ ಪೌಷ್ಟಿಕವಾಗಿದೆಂದು ಏಕೆ ಹೇಳಬಾರದು?

ಅವರು ವನಸ್ಪತಿಯ ಬೆಲೆಯನ್ನು ದೇಶೀ ತುಪ್ಪದಗೂಡ ಹೋಲಿಸಿ ಅದು ಒಂದು ಮೂರಾಂಶವಿದೆಂದು ಹೇಳಿಕೊಳ್ಳುತ್ತಿರುವರು. ನಿಜವಾಗಿ ತುಲನೆ ಮಾಡಬೇಕಾದರೆ ಗಿರಣಿಗಳಲ್ಲಿ ತಯಾರಾದ ಶೇಂಗಾದ ಎಣ್ಣೆಯ ಬೆಲೆಗೆ ಈ ವನಸ್ಪತಿಯ ಬೆಲೆಯನ್ನು ಹೋಲಿಸಿ ನೋಡಬೇಕು. ಆಗ ವನಸ್ಪತಿ ಬೆಲೆ ೧೦೦ ಕ್ಕೆ ೫೦ ರಷ್ಟು ಹೆಚ್ಚು ಇಟ್ಟಿ ಎನಿಸದಿರಲಾರದು. ಸಂತಯುಗಸ್ತರಾಗದ ಸಾರ್ವಜನಿಕರ ಮೇಲೆ ಈ ಭಾರವಾದ ಕರವನ್ನು ಕಾರಖಾನೆದಾರರು ಹೇರಿ ಜನರಿಗೆ ಚಿತ್ತಿಗೆ ಇಲ್ಲವೆ ಆ ಪ್ರಮಾಣದಲ್ಲಿ ಯಾವ ಹಿತವನ್ನು ಸಾಧಿಸಿರುವರೆಂದು ಕೇಳುವ ಅಧಿಕಾರ ನಮಗಿಲ್ಲವೆ?

ತಪ್ಪು ತಿಳುವಳಿಕೆಯನ್ನುಂಟುಮಾಡುವಂಥ ಇಂಥ ಜಾಹೀರಾತುಗಳನ್ನು ಪ್ರಕಟಿಸದ್ದಕ್ಕಾಗಿ ಕಾರಖಾನೇದಾರರು ಸಂರಕ್ಷಣ [ಪದಾರ್ಥಗಳ ಮಾರಾಟ] ನಿಯಮಗಳನ್ನು ಒಟ್ಟಿಗೆ ಗುರಿಯಾಗಲರ್ಹರಾಗಿರುವರೆಂದೂ ಬಳಕೆಗಾರರ ನಷ್ಟ ಪರಿಹಾರಕ್ಕೂ ಅವರು ಹೊಣೆಗಾರರಾಗಿರುವರೆಂದೂ ಯಾರಾದರೂ ಅಭಿಪ್ರಾಯ ಪಡಬಹುದಾಗಿದೆ.

ಗ್ರೇಟ ಬ್ರಿಟನ್‌ದಲ್ಲಿ ಗಾಣದಲ್ಲಿ ತಯಾರಾದ ಅಲಿವ್ ಎಣ್ಣೆಯನ್ನು ಬಹಳವಾಗಿ ಪ್ರಶಂಸಿಸಲಾಗುತ್ತದೆ. ನನ್ನ ಮಟ್ಟಿಗೆ ಹೇಳಬೇಕಾದರೆ ಗಿರಣಿ ಎಣ್ಣೆಗಳಿಗಿಂತ ಗಾಣಗಳಲ್ಲಿ ತಯಾರಾದ ಎಣ್ಣೆಗಳು ಹೆಚ್ಚು ಶ್ರೇಷ್ಠವೆಂದು ನನ್ನ ಅಭಿಪ್ರಾಯ. ಗಾಣಗಳಲ್ಲಿ ತಯಾರಾದ ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ ಇಲ್ಲವೆ ಸಾಸವಿ ಎಣ್ಣೆಗಿಂತ ವನಸ್ಪತಿ ಎಣ್ಣೆ ಶ್ರೇಷ್ಠವಾಗಿದೆಂದು ಕಾರಖಾನೆದಾರರು ಸಿದ್ಧಮಾಡಬಲ್ಲರೆಂದು ನಾವು ಅಪೇಕ್ಷಿಸಿದ್ದೆವು. ಅಂದರೇನೆ ಅವರಿಗೆ ವಾದಿಸಲು ಒಂದು ಬಗೆಯ ಸ್ಥೈರ್ಯ ಬರುವದು. ಗಾಣದ ಎಣ್ಣೆ ಖಮಟಾದರೆ ಆ ಪದ್ಧತಿಯ ದೋಷವಲ್ಲ ಆದರೆ ಗಾಣಿಗನ ಅಜಾಗರೂಕತೆಯೆ ಕಾರಣ.

'ದೇಶದಲ್ಲಿ ಕೊಬ್ಬಿನ ಪ್ರಚಂಡ ಕೊರತೆ'ಯಿದೆಂದು ಕಾರಖಾನೆದಾರರು ಕೊಚ್ಚಿಕೊಳ್ಳುತ್ತಿರುವರು. ಯಾವದೇ ರೀತಿಯಲ್ಲಿ ಅವರು ಕೊಬ್ಬಿನ ಪ್ರಮಾಣವನ್ನು ಹೆಚ್ಚಿಸಿರುವರೇ? ಅವರು ಸಾಧಿಸಿದ್ದೆಂದರೆ ಒಳ್ಳೆ ಆಹಾರಸತ್ವವನ್ನು ಕೆಟ್ಟ ಮತ್ತು ವೆಚ್ಚದ ಪದಾರ್ಥವನ್ನಾಗಿ ಮಾರ್ಪಡಿಸಿದ್ದು. ಅದು "ಹೆಚ್ಚು ರುಚಿಕರ ಮತ್ತು ಬಹಳ ದಿನ ತಾಳುವಂತೆ" ಮಾತ್ರ ಮಾಡಲಾಗಿದೆ.

ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಎರಡು ಮಾರ್ಗಗಳಿವೆ. ಮೊದಲನೆಯದಾಗಿ ಹಾಲಿನ ಉತ್ಪಾದನೆಯನ್ನು ಹೆಚ್ಚಿಸುವದು; ಎರಡನೆಯದಾಗಿ ತಿನ್ನುವ ಎಣ್ಣೆ ಕಾಳುಗಳು ಹೊರಗೆ ಹೋಗದಂತೆ ವಿಧಿಸಿ ಮತ್ತು ಎಣ್ಣೆಕಾಳುಗಳ ಉತ್ಪಾದನೆಯನ್ನು ಹೆಚ್ಚಿಸಿ ಗಾಣದಲ್ಲಿ ತಯಾರಾಗುವ ಎಣ್ಣೆಯ ಉತ್ಪಾದನೆಯನ್ನು ಹೆಚ್ಚಿಸುವದು.

ವನಸ್ಪತಿಯಲ್ಲಿರುವ ನಿಕೆಲ್‌ದ ಪರಿಣಾಮಗಳು 'ಬಹಳ ದಿನಗಳ ನಂತರ ವಿಷಕಾರಿಯೆಂದು ಸಿದ್ಧವಾಗಬಹುದು' ಎಂದು ಹಿಂದುಸ್ತಾನ ವನಸ್ಪತಿ ಕಾರಖಾನೇದಾರ ಸಂಘದ ಚೆಅರಮನ್‌ರು ತಮ್ಮ ಪತ್ರದಲ್ಲಿ ಉಲ್ಲೇಖಿಸಿ ಯಾವದೇ ಬಗೆಯ ದುಷ್ಪರಿಣಾಮಗಳಿಗಾಹುತಿಯಾಗದೆ ಮಾನವರು ದೊಡ್ಡ ಪ್ರಮಾಣದಲ್ಲಿ ನಿಕೆಲ್‌ನ್ನು ಸೇವಿಸಿ ಹೊರಗೆ ಬಿಡಬಲ್ಲರೆಂದು ಕಂಡು ಬಂದದ್ದರಿಂದ ನಿಕೆಲ್ಲಿನಿಂದ ಯಾವದೇ ಬಗೆಯ ಹಾನಿಯಿಲ್ಲೆಂದೂ ಆಶ್ವಾಸಿಸಿದ್ದಾರೆ. ಜನರು ಉಪಯೋಗಿಸುತ್ತಿರುವ ಕ್ಯಾರೆಟ, ಉಳ್ಳಿಗಡ್ಡಿ, ಟೊಮೆಟೊ ಲೆಟ್ಯುಸ್ ಮೊದಲಾದವುಗಳಲ್ಲಿ ವನಸ್ಪತಿಯಲ್ಲಿರುವದಕ್ಕಿಂತ ಹೆಚ್ಚು ಪ್ರಮಾಣದಲ್ಲಿ ನಿಕೆಲ್ ಇರುವದೆಂದೂ ಅಭಿಪ್ರಾಯಪಡುತ್ತಾರೆ. ಪಲ್ಲೆ ಕಾಯಿಗಳಲ್ಲಿರುವ ನಿಕೆಲ್ ಮಿಶ್ರಣರೂಪವಾಗಿದ್ದು ವನಸ್ಪತಿಯಲ್ಲಿಯ ನಿಕೆಲ್ ನಿಶ್ಚಿತವಾಗಿ ಒಗ್ಗಲಾರದ ಪದಾರ್ಥವೆಂಬ ಸಂಗತಿ ಅವರಿಗೆ ತಿಳಿದಿಲ್ಲೆಂದು ತೋರುತ್ತದೆ. ಇಂಥ ಪದಾರ್ಥಗಳ ಸೇವನೆಯ ಸಂಬಂಧದಲ್ಲಿ ಮಾನವ ಶರೀರದ ಯೋಗ್ಯತೆಯಲ್ಲಿ ಮಹತ್ವದ ಭೇದವುಂಟಾಗುವದೆಂಬುದು ಇದರಿಂದ ಗೊತ್ತಾಗುವದು. ಒಂದನ್ನು ಹೊರಗೆ ಹಾಕಬಹುದು ಆದರೆ ಮತ್ತೊಂದು ಒಳಗೆ ವಿಷಕಾರಿ ಪದಾರ್ಥವಾಗಿ ಪರಿಣಮಿಸಬಹುದು.

ಕರ್ನಲ್ ಸೋಖೆಯವರು ಇಲಿಗಳ ಮೇಲೆ ಮಾಡಿದ ಪ್ರಯೋಗಗಳು ಎರಡು ತಿಂಗಳ ಮಾತ್ರ ಹಳೆಯವೆಂದು ಹೇಳಿ ಚೆಅರಮನ್‌ರು ಅವನ್ನು ಕೀಳ್ಗಳೆಯುತ್ತಾರೆ. ಸರ್ ಎಸ್ ಎಸ್ ಸೋಖೆಯವರನ್ನು ಎತ್ತಿ ಹಿಡಿಯಲು ನಾವೇನೂ ಹೊರಟಿಲ್ಲ. ತಮ್ಮ ರಕ್ಷಣೆ ಮಾಡಿಕೊಳ್ಳಲು ಅವರು ಸಾಕಷ್ಟು ಸಮರ್ಥರಿರುವರು. ಪ್ರಶ್ನೆ ಇನ್ನೂ ಅಧಿಕಾರಿಗಳ ವಿಚಾರಣೆಯಲ್ಲಿರುವಾಗ ಇನ್ನೂ ನಿರ್ಣಯಿಸಲ್ಪಡದಿದ್ದ ಸಾಕ್ಷಿ ಪುರಾವೆಗಳ ಮೇಲೆಯೆ ವನಸ್ಪತಿಯನ್ನು ನಿಷೇಧಿಸುವದೆಂದರೆ ಸಾಮಾನ್ಯವಾಗಿ ಇಡೀ ದೇಶದ ವಿಶೇಷತಃ ಆಹಾರ ಪದಾರ್ಥೋದ್ಯಮಕ್ಕೆ ಅನಿಕಾರವೂಡಿದಂತಾಗುತ್ತದೆಂದು ಮುಂತಾಗಿ ಚೆಅರಮನ್‌ರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿ ತಜ್ಞ ಸಮಿತಿಯವರು ತಮ್ಮ ನಿರ್ಣಯಗಳನ್ನು ಹೊರಗೆಡುವವರೆಗೆ ಟೀಕೆಯನ್ನು ನಿಲ್ಲಿಸಿರೆಂದು ಉಪದೇಶಿಸುತ್ತಿರುವದರಿಂದ ಅವರು ತಪ್ಪು ಸ್ಥಳದಲ್ಲಿ 'ಸೇಫ್ಟೀ ವಾಲ್ವ' ಇಡುತ್ತಿರುವರೆಂದು ನಮಗೆನಿಸುತ್ತದೆ. ಮಗುವೊಂದನ್ನು ಕರೆದುಕೊಂಡು ನಾನು ಅರಣ್ಯದೊಳಗಿಂದ ಅಡ್ಡಾಡಿವೆನೆನ್ನಿ. ತಿಳಿಯದೆ ಆಗ ಆ ಮಗುವು ಅರಣ್ಯದಲ್ಲಿಯ ಹಣ್ಣುಗಳನ್ನು ಹರಿಯಹತ್ತಿದರೆ ಮತ್ತು ಅದೇ ಹಾದಿಯಿಂದ ಹೋಗುವ ಹಳ್ಳಿಗರಿಬ್ಬರು ಆ ಹಣ್ಣುಗಳ ವಿಷಕಾರಿ ಗುಣದ ಬಗ್ಗೆ ಪರಸ್ಪರ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದರೆ ಅದರ ವಿಷಕಾರಿ ಸ್ವಭಾವದ ಈ ಪ್ರಶ್ನೆ "ಸಬ್ ಜ್ಯುಡಿಸ್" ಆಗಿರುವ ವರೆಗೆ ಆ ಮಗು ಹಣ್ಣನ್ನು ತಿನ್ನುತ್ತಾ ಹೋಗಲಿ ಎಂದು ನಾನು ಹೇಳಬೇಕೆ? ತದ್ವಿರುದ್ಧವಾಗಿ ಆ ಹಣ್ಣುಗಳು ಆರೋಗ್ಯಕರವಾಗಿವೆಂದು ಸಿದ್ಧವಾಗುವ ವರೆಗೆ ಅವನ್ನು ತಿನ ಕೂಡದೆಂದು ಮಗುವಿಗೆ ನಿಷೇಧಿಸುವದೆ ಜಾಣತನದ ಮಾರ್ಗವಾಗಿರುವದು. ಅದೇ ರೀತಿಯಾಗಿ ಈ ಪ್ರಶ್ನೆ 'ಸಬ್ ಜ್ಯುಡಿಸ್' ಆಗಿದೆಂದು ಚೆಅರಮನರಿಗೆನಿಸಿದರೆ ವನಸ್ಪತಿಯು ಅಪಾಯಕರವಾಗಿಲ್ಲ ಎಂದು ಸ್ಪಷ್ಟ ರೀತಿಯಿಂದ ಸಿದ್ಧವಾಗುವ ವರೆಗೆ ಅದರ ಉತ್ಪಾದನೆಯನ್ನೆ ನಿಲ್ಲಿಸಿಡುವದು ಉಚಿತವೆಂದು ನಮ್ಮ ಅಭಿಪ್ರಾಯ. ವನಸ್ಪತಿ ಅನಾರೋಗ್ಯಕರವಾಗಿಲ್ಲೆಂದು ಸಿದ್ಧಪಡಿಸುವ ಹೊಣೆಯಂತೂ ಕಾರಖಾನೆದಾರರ ಮೇಲೆಯೆ ಇದೆಂಬುದು ನಿರ್ವಿವಾದ. ವನಸ್ಪತಿ ಕಾರಖಾನೆದಾರರು ಕಾಯದೆಬದ್ಧ ತಡೆಯಿಲ್ಲದೆ ತಾವೆ ಈ ಸಮಂಜಸ ಮಾರ್ಗವನ್ನು ಅನುಸರಿಸುವರೆಂದು ನಂಬುತ್ತೇವೆ.

—ಜೆ. ಸಿ. ಕುಮಾರಪ್ಪ

ಗಾಂಧೀಜಿಯ ಆಚಾರ ವಿಚಾರ

ಅಲ್ಪಾವಧಿಯಲ್ಲಿಯೇ ಗಾಂಧೀಜಿ ಎರಡನೆ ಬಾರಿ ದಿಲ್ಲಿಗೆ ಭೆಟ್ಟಿಕೊಟ್ಟದ್ದರಿಂದ ದಿನವೂ ಸಂಜೆ ಅವರ ವಾಣಿಯನ್ನು ಆಲಿಸುವ ಇನ್ನೊಂದು ಸುಯೋಗ ದಿಲ್ಲೀನಿವಾಸಿಗಳಿಗೆ ದೊರಕಿತು. ಸಭೆಗೆ ಸೇರಿದ ಸಂದಣಿ ಮುಂಚಿಗಿಂತಲೂ ದಟ್ಟವಾಗಿಯೇ ಇರುತ್ತಿತ್ತು. ಅಸುರಕ್ಷಿತತೆ ಎಲ್ಲೆಲ್ಲಿಯೂ ವಿಶ್ವಾಸದ ಅಭಾವ, ದ್ವೇಷ, ಅಪನಂಬಿಕೆ, ಆಶಾಭಂಗಗಳಿಂದ ವಾತಾವರಣ ಕಲಕಿ ಹೋಗಿದೆ. ಆದುದರಿಂದ ಹೃದಯದಲ್ಲಿ ದ್ವೇಷಲೇಶವೂ ಇಲ್ಲದ, ನಿರಾಶೆಯೆಂಬ ಶಬ್ದವನ್ನೇ ಅರಿಯದ ಸಮಾಧಾನದ ನುಡಿ ಒಬ್ಬನೇ ಒಬ್ಬನಗಳನ್ನು ಕೇಳಲು ಜನರು ಸಾವಿರಗಟ್ಟಲೆ ಬಂದು ನೆರೆದರೆ ಕೌತುಕವೇನು?

ಈ ಬಾರಿಯೂ ಪ್ರಾರ್ಥನೆಗಳು ನಡೆಯದಂತಾದುದು ನಿಜವಾಗಿ ದೊಡ್ಡ ಅನ್ಯಾಯ. ಕುರಾಣ ಶರೀಫದ ವಚನವನ್ನು ಪಠಿಸಲು ದನಿಯೆತ್ತಿದ ಕೂಡಲೆ ಅದಕ್ಕೆ ಆಕ್ಷೇಪವೆತ್ತುವ ಕೂಗೊಂದು ಏಳುತ್ತಿತ್ತು. ತಕ್ಷಣ ಗಾಂಧೀಜಿಯವರು, ತಮ್ಮ ಅಹಿಂಸಾ ತಂತ್ರಕ್ಕನುಸಾರವಾಗಿ, ಯಾರೊಬ್ಬನ ಮನನೋಯಿಸುವದೂ ಸರಿಯಲ್ಲವಾಗಿ ಒಬ್ಬನ ಇಚ್ಛೆಗೆ ಸಾವಿರಾರು ಜನರು ತಲೆವಾಗಬೇಕೆಂದು ಕೇಳಿಕೊಳ್ಳುತ್ತಿದ್ದರು. ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸಬಂದಿದ್ದವರಿಗೆ, ಒಬ್ಬಾತನ ಮೂರ್ಖತನದಿಂದ ತಾವೆಲ್ಲರೂ ಸುಯೋಗಕ್ಕೆರವಾಗಬೇಕಾದುದನ್ನು ಸಹಿಸುವದು ನಿಷ್ಠುರ ಪಾಠವೇ ಆಯಿತು

ಮುಖ್ಯವಾಗಿ, ಗಾಂಧೀಜಿಯ ಪ್ರಾರ್ಥನೋತ್ತರ ಉಪದೇಶವನ್ನು ಕೇಳುವದಕ್ಕಿಂತಲೂ ತಾವು ಧುನಿಯಲ್ಲಿ ಸೇರುವ ಆತುರದಿಂದ ಬರುತ್ತಿದ್ದ ಅಸಂಖ್ಯ ಹೆಣ್ಣುಮಕ್ಕಳಿಗಾಗಿ ನನಗೆ ಬಹಳ ಕೆಡುಕೆನಿಸುತ್ತಿತ್ತು. ಆದರೂ ಜನಸಂದಣಿ ಅಪೂರ್ವಶಾಂತತೆಯನ್ನು ಸ್ಥೈರ್ಯವನ್ನೂ ತೋರಿಸಿತು. ಅವರು ಕಲಿಯಬೇಕೆಂದು ಗಾಂಧೀಜಿ ಬಯಸಿದ ಪಾಠ ಈ ಪ್ರಾಯೋಗಿಕ ಪ್ರದರ್ಶನದಿಂದ ಚನ್ನಾಗಿ ಮುಂದಟ್ಟಾಯಿತೆಂದು ಆಶಿಸಬಹುದಾಗಿದೆ.

ಜಾತೀಯ ಕಲಹ ಹೆಚ್ಚುತ್ತಿದ್ದರೂ ಗಾಂಧಿಜಿ ಇನ್ನೂ ಆಶಾವಾದಿಗಳಾಗಿಯೇ ಇದ್ದಾರೆ. ಹಿಂದೂ ಮುಸ್ಲಿಮರಲ್ಲಿನ ಸದ್ಯದ ಅಂತರಾಳ ಶಾಶ್ವತವೇ ಎಂದು ಯಾರೋ ಒಬ್ಬರು ಕೇಳಿದ್ದಕ್ಕೆ ಗಾಂಧೀಜಿ ಅಂದದ್ದು: "ಇಂಥದಾವದೂ ಎಂದೂ ಶಾಶ್ವತವಾಗಿರಲಾರದು. ಹಾಗೇನಾದರೂ ಆದರೆ ಎರಡೂ ಧರ್ಮಗಳಲ್ಲಿ ಎಳ್ಳಷ್ಟು ಸತ್ಯವಿಲ್ಲೆಂದು ಅರ್ಥವಾದೀತು." ಸ್ವಧರ್ಮವನ್ನು ಸರಿಯಾಗಿ ಪಾಲಿಸಬೇಕೆಂಬ ಈ ಉಪದೇಶವೇ ಅವರ ಎಲ್ಲ ಭಾಷಣಗಳ ಪಲ್ಲವಿಯಾಗಿರುತ್ತಿತ್ತು. ಅಸಹಿಷ್ಣುತೆಯೂ ದ್ವೇಷವೂ ಧರ್ಮವನ್ನು ಕೊಲ್ಲುವ ಸುಲಭತಮ ಸಾಧನಗಳೆಂದು ಅವರು ಹೇಳಿದರು. ಕೊನೆಯ ದಿನ ಸಂಜೆ ಕುರಾಣವಾಕ್ಯದ ಪಠನಕ್ಕೆ ಒಬ್ಬ ಹೆಣ್ಣುಮಗಳಿಂದ ಆಕ್ಷೇಪ ಬಂದುದರಿಂದ ಗಾಂಧೀಜಿಗಾದ ನೋವು ಅಷ್ಟಿಷ್ಟಲ್ಲ. ಏಕೆಂದರೆ ನೈತಿಕ ಕ್ಷೇತ್ರದಲ್ಲಿ ಪುರುಷರಿಗಿಂತಲೂ ಸ್ತ್ರೀಯರಿಂದ ಗಾಂಧೀಜಿ ಹೆಚ್ಚಳವನ್ನು ನಿರೀಕ್ಷಿಸುತ್ತಾರೆ. ಪಾಕಿಸ್ತಾನಕ್ಕೆ ಒಪ್ಪಿಗೆಕೊಟ್ಟರೆ ಅದು ತಂತಾನೆ ಸಾಯಬಹುದೆ? ಎಂದೊಬ್ಬ ಗೆಳೆಯ ಕೇಳಿದಾಗ ಅವರು ಕೊಟ್ಟ ಉತ್ತರ: "ಪಾಕಿಸ್ತಾನದ ವರ್ಣನೆ ಮಾಡಬಲ್ಲಿರಾ? ಅಜ್ಞಾತ ಪೂರ್ವಪಕ್ಷಕ್ಕೆ ಏನೆಂದು ಉತ್ತರ ಕೊಡಲಿ? ಪಾಕಿಸ್ತಾನವೆಂದರೇನೆಂದು ತಿಳಿದುಕೊಳ್ಳಲು ಪ್ರಯತ್ನಿಸಿದೆ. ಅದು ನನ್ನಿಂದಾಗಲಿಲ್ಲ. ಆದರೂ ಇಂದಿನ ಪಂಜಾಬ ಬಂಗಾಲಗಳೇ ಅದರ ಲಕ್ಷಣವಾಗಿದ್ದರೆ ಅದು ಸರ್ವಥಾ ಬಾಳಲಾರದು." ಹಿಂದುಸ್ತಾನದ ವಿಭಜನೆಯನ್ನು ಕುರಿತು ಅವರ ಸ್ವಂತ ಅಭಿಪ್ರಾಯದಲ್ಲಿ ಏನೇನೂ ಬದಲಾಗಿಲ್ಲ. ಎಂದಿನಂತೆ ಇಂದೂ ಅವರು ಅಖಂಡ ಭಾರತವನ್ನೆ ಗಟ್ಟಿಯಾಗಿ ಪ್ರತಿಪಾದಿಸುತ್ತಾರೆ. ಒಮ್ಮೆ ಅವರು ಒಬ್ಬ ಗೆಳೆಯನಿಗೆ ಹೇಳಿದ್ದರು. "ಪ್ರಾಂತಗಳ ವಿಭಜನೆಯೇ ಮೊದಲಾದ ವಿಷಯಗಳನ್ನು ಕೊನೆಯದಾಗಿ ತೀರ್ಮಾನಿಸುವದು, ಬ್ರಿಟಿಶರು ತಮ್ಮ ಅಧಿಕಾರವನ್ನು ಹಿಂತೆಗೆದುಕೊಂಡ ನತರ, ಜನರೇ ತಂತಮ್ಮೊಳಗೆ ತೀರಿಸಿಕೊಳ್ಳಬೇಕಾದ ಕೆಲಸ. ಎಲ್ಲಕ್ಕೂ ಬ್ರಿಟಿಶ ಸರಕಾರದ ಮುಖನೋಡುವದು ನಮ್ಮ ಜೀವನದಲ್ಲಿ ಅತಿ ಕೆಟ್ಟಚಾಳಿ. ಅದು ಕಸಿದು ಬೀಳುತ್ತಿವೆ. ಸಂಸ್ಥಾನಗಳಿಗೂ ಇದೇ ಮಾತು ಅನ್ವಯಿಸುತ್ತದೆ. ಅವು ಬ್ರಿಟಿಶರ ಕೈಕೆಳಗೆ ನಿರಂತರವಾದ ಆಶ್ರಿತಾವಸ್ಥೆಯಲ್ಲಿದ್ದವು. ಇಂದು ಆ ಆಶ್ರಯ ಹೊರಟು ಹೋಗುತ್ತಿದೆ. ನರೇಂದ್ರರಿಗಿನ್ನು ಗದ್ದುಗೆಯ ಮೇಲೆ ಉಳಿಯುವ ಅಪೇಕ್ಷೆಯಿದ್ದರೆ ಅವರು ಸ್ವತಂತ್ರ ಹಿಂದುಸ್ತಾನದ ಅಭಿನ್ನ ಅಂಗಗಳಾಗಬೇಕು. ಪ್ರಜೆಗಳ ಕೈಯಲ್ಲಿ ಅಧಿಕಾರವಿತ್ತು ತಾವು ಅವರ ಸೇವಕಾಗ್ರಣಿಗಳಾಗುವದರಲ್ಲೆ ನರೇಂದ್ರರ ಸ್ವಾತಂತ್ರ್ಯ ಅಡಕವಾಗಿದೆ."

ಫ್ರೆಂಚ ಗೆಳೆಯನೊಬ್ಬನಿಗೆ ಉತ್ತರಕೊಡುತ್ತ ಗಾಂಧೀಜಿ ಹಿಂದುಸ್ತಾನದಲ್ಲಿ ಸಾಮ್ಯವಾದಿ ರಾಜ್ಯವೊಂದು ಸ್ಥಾಪಿಸಲ್ಪಟ್ಟೀತೀರುವದೆಂದರು. ಹಿಂದೀಸಾಮ್ಯವಾದ ಆರಾಮಖುರ್ಚಿಯ ಸಾಮ್ಯವಾದವಾಗದೆ ವ್ಯವಹಾರಿಕ ಸಾಮ್ಯವಾದವಾಗಬೇಕೆಂದು ಅವರು ಹಾರೈಸಿದರು ಗುರಿ ಸ್ಪಷ್ಟವೂ ನಿರ್ದುಷ್ಟವೂ ಆಗಿರಬೇಕು. ಇಲ್ಲದಿದ್ದರೆ ಅರಿಯದ ಸಮುದ್ರ ಪಥದಲ್ಲಿ ದಾರಿತಪ್ಪಿ ಮುಳುಗಿ ಹೋಗುವ ಸಂಭವವುಂಟು. ಹಿಂದುಸ್ತಾನದ ಭಾವೀ ಸಮಾಜ ಅಹಿಂಸೆಯ ತಳಹದಿಯಲ್ಲಿ ಕಟ್ಟಲ್ಪಟ್ಟೀತೆಂಬ ಆಶೆಗೆ ತಾವು ಅಂಟಿಕೊಂಡಿದ್ದೇವೆಂದು ಅವರು ಹೇಳಿದರು.

"ಧರ್ಮ ಅವಸಾನಹೊಂದಬಹುದೆ?" ಎಂದು ಅದೇ ಗೆಳೆಯ ಕೇಳಿದನು. ಗಾಂಧೀಜಿಯ ಉತ್ತರ ಮಿಂಚಿನಂತೆ ಕ್ಷಣಾರ್ಧದಲ್ಲಿ ಹೊಂಚಿತು: "ಧರ್ಮಕ್ಕೆ ಅವಸಾನಬಂದರೆ ಹಿಂದುಸ್ತಾನಕ್ಕೂ ಅವಸಾನ ಬಂತು. ಇಂದು ಹಿಂದುಗಳೂ ಮುಸ್ಲಿಮರೂ ಧರ್ಮದ ಚಿಪ್ಪನ್ನು ಅವಚಿಕೊಂಡಿದ್ದಾರೆ. ಅವರು ಉನ್ಮತ್ತರಾಗಿದ್ದಾರೆ. ಆದರೆ ಇದೆಲ್ಲ ಬರಿ ಬುರುಗೆಂದೂ ಎರಡು ಹೊಳೆಗಳು ಸಂಗಮಿಸಿದಾಗಿನಂತೆ ಹೊಲಸೆಲ್ಲ ಈಗ ಮೇಲೆ ಬಂದಿದೆಯೆಂದೂ ನನ್ನ ನಂಬಿಕೆ. ಮೇಲ್ಮೇಲೆ ಎಲ್ಲವೂ ಕಲಂಕಿತವಾಗಿ ತೋರುತ್ತದೆ. ಆದರೆ ತಳದಲ್ಲಿ ಎಲ್ಲವೂ ಸ್ಫಟಿಕಶುದ್ಧವಾಗಿಯೂ ನಿರ್ದುಷ್ಟವಾಗಿಯೂ ಇದೆ."

ಅದೇ ಗೆಳೆಯನಿಗೆ ಅವರು ಹೇಳಿದ್ದು: "ಬ್ರಿಟನ್ನು ಒಂದು ಕಾಲದಲ್ಲಿ ಸಮುದ್ರಕ್ಕೆ ಎದುರಿಲ್ಲದ ಒಡತಿಯಾಗಿತ್ತು. ಅದು ಹಿಂದುಸ್ತಾನದಲ್ಲಿ ತನ್ನ ಕರ್ತವ್ಯವನ್ನು ಸತ್ಯಸಂಧತೆಯಿಂದ ಪೂರೈಸಿದರೆ ಆಗ ಅದಕ್ಕಿಂತಲೂ ಘನವಾದ ಜಗತ್ತಿನ ನೈತಿಕ ಸಾಮ್ರಾಜ್ಯದೊಡೆತನದ ಗೌರವವನ್ನು ಪಡೆಯಬಹುದು. ಆಗ ಅದು ಜಗತ್ತಿನ

—೧೦ನೇ ಪುಟಕ್ಕೆ

ಮತ್ತೊಂದು ದಿಲ್ಲಿ ವಿಷ್ಕಂಭಕ

೪.೫.೧೯೪೭

ಮೊದಲೇ ನಿರ್ಧರಿಸಿಕೊಂಡಂತೆ ಗಾಂಧೀಜಿ ಇಂದೂ ಪ್ರಾರ್ಥನೆಗೆ ಮೊದಲು, ಪ್ರಾರ್ಥನಾ ಭೂಮಿಯಲ್ಲಿ ಯಾರಾದರೂ ಆಕ್ಷೇಪಕರಿರುವರೋ ಎಂದು ಕೇಳಿದರು. ಒಂಟಿಧ್ವನಿಯೊಂದು "ಹೌದು" ಎಂದಿತು. ಒಬ್ಬನ ಮೂರ್ಖತನದ ಫಲವಾಗಿ ಸಾವಿರಾರು ಜನರು ಸಾಮೂಹಿಕ ಪ್ರಾರ್ಥನೆಯ ಪೀಯೂಷವನ್ನು ಸವಿಯದಂತಾಯಿತಲ್ಲಾ ಎಂದು ಗಾಂಧೀಜಿ ಬಹಳ ನೊಂದುಕೊಂಡರು. ಆದರೂ ಯಾರೊಬ್ಬನಿಗೂ ಬೆದರಿಸಿ ವಿಧೇಯನನ್ನಾಗಿ ಮಾಡುವದು ಅಹಿಂಸೆಯ ತತ್ವಕ್ಕೆ ಸರಿಹೋಗದ ಮಾತೆಂದು ಗಾಂಧೀಜಿ ಮತ್ತೆ ಹೇಳಿದರು. ಆದುದರಿಂದ, ನೆರೆದವರೆಲ್ಲರೂ ಕಣ್ಣುಮುಚ್ಚಿಕೊಂಡು, ಎರಡು ನಿಮಿಷಗಳವರೆಗೆ ಮನಃಪ್ರಾರ್ಥನೆಯಲ್ಲಿ ತನ್ಮಯತೆ ಕೂಡಿಕೊಳ್ಳಬೇಕೆಂದು ಅವರು ಬಿನ್ನವಿಸಿದರು. ಈ ಮೌನ ಕಾಲದಲ್ಲಿ ದೇವರ - ಅನಂತ, ಅಮೇಯ, ಅಜ್ಞೇಯ, ಅಸಂಖ್ಯ ನಾಮಕನಾದ ದೇವರ — ಹೆಸರನ್ನು ಹೃದಯದಲ್ಲಿ ಪ್ರತಿಷ್ಠಿಸಿಕೊಳ್ಳಬೇಕೆಂದೂ ಇಂದು ಕೂಡ ಪ್ರಾರ್ಥನೆಯನ್ನು ತಡೆದ ದಾರಿತಪ್ಪಿದ ಯುವಕನ ಬಗ್ಗೆ ಮನಸಿನಲ್ಲಿ ಯಾರೂ ದ್ವೇಷ ತಳೆಯಬಾರದೆಂದೂ ಗಾಂಧೀಜಿ ಕೇಳಿಕೊಂಡರು.

ಇಂದು ವಾಯಿಸರಾಯರೊಡನೆ ಒಂದೂವರೆ ತಾಸು ಕಾಲ ತಾವು ಮಾತಾಡಿದೆವೆಂದು ಗಾಂಧೀಜಿ ಹೇಳಿದರು. ಆಗ ಪತ್ರಿಕೆಗಳಲ್ಲಿ ಬರುತ್ತಿರುವ ತಪ್ಪು ತಿಳಿವಳಿಕೆಯನ್ನುಂಟುಮಾಡುವಂಥ ವರದಿಗಳ ಮತ್ತು ತಲೆಬರಹಗಳ ಬಗ್ಗೆ ವಾಯಿಸರಾಯರು ದೂರಿಕೊಂಡರು. ಹಿಂದೀಯರ ಕೈಗೆ ಶಾಂತಿಯಿಂದ ಅಧಿಕಾರವನ್ನು ವರ್ಗಾಯಿಸುವದಕ್ಕೋಸುಗವೇ ತಾವು ಹಿಂದುಸ್ಥಾನಕ್ಕೆ ಬಂದಿರುವದಾಗಿ ಅವರು ಹೇಳಿದರು. ಜೂನ ೩೦, ೧೯೪೮ರೊಳಗೆ ಬ್ರಿಟಿಶ ಆಳಿಕೆಯ ಕುರುಹುಗಳೆಲ್ಲವೂ ಇಲ್ಲಿಂದ ಮಾಯವಾಗಲಿವೆ. ಹಿಂದುಸ್ಥಾನ ಅಖಂಡವಾಗಿರಬೇಕೆಂದೂ ಜಾತಿಮತಭೇದವಿಲ್ಲದೆ ಎಲ್ಲರೂ ಇಲ್ಲಿ ಸಾಮರಸ್ಯದಿಂದ ಬಾಳಬೇಕೆಂದೂ ತಾವು ಮನಸಾ ಬಯಸುವೆವೆಂದು ಅವರು ಹೇಳಿದರು. ಹಿಂದೀಯರು ಹಳಿಯುದನ್ನೆಲ್ಲ ಮರೆತು, ಬ್ರಿಟಿಶರು ತಾವು ಹೊರಟುಹೋಗುವ ಮೊದಲು ಸಾಧ್ಯವಿದ್ದರೆ ಹಿಂದೂ ಮುಸ್ಲಿಮರಲ್ಲಿ ಒಪ್ಪಂದ ಮಾಡಿಸಿ ಹೋಗಬಯಸುತ್ತಾರೆಂದು ನಂಬಬೇಕೆಂದು ಅವರು ಅಪೇಕ್ಷಿಸುತ್ತಾರೆ. ಜಾತೀಯ ಕಲಹ ನಡೆಯುತ್ತಲೇ ಹೋದರೆ ಅದು ಬ್ರಿಟನ್ನಿಗಾಗಲಿ ಹಿಂದುಸ್ಥಾನಕ್ಕಾಗಲಿ ಭೂಷಣವಲ್ಲೆಂದು ವಾಯಿಸರಾಯರು ಹೇಳಿದರು. ತಾವು ಪ್ರಸಿದ್ಧ ನೌಕಾಧಿಕಾರಿಗಳು; ಆದುದರಿಂದ ತಮಗೆ ಅಹಿಂಸೆಯಲ್ಲಿ ವಿಶ್ವಾಸವಿಲ್ಲದಿದ್ದರೂ ದೇವರಲ್ಲಿ ನಂಬಿಕೆಯುಂಟೆಂದೂ ಯಾವಾಗಲೂ ಆತ್ಮಸಾಕ್ಷಿಗನುಸಾರವಾಗಿ ತಾವು ನಡೆಯುತ್ತಿರುವದಾಗಿಯೂ ಅವರು ಭರವಸೆ ಕೊಟ್ಟಿದ್ದಾರೆ. ಆದುದರಿಂದ ಜನರು ತಮ್ಮ ದಾರಿಯಲ್ಲಿ ಅಡತಡೆಗಳನ್ನೊಡ್ಡಬಾರದೆಂದು ಅವರು ಪ್ರಾರ್ಥಿಸಿದ್ದಾರೆ. ಇಷ್ಟೆಲ್ಲಾ ಪ್ರಯತ್ನ ಪಟ್ಟೂ ಅಧಿಕಾರತ್ಯಾಗಾವಧಿಯಲ್ಲಿ ಗಲಭೆಗಳು ನಿಲ್ಲದಿದ್ದರೆ ಮನಸ್ಸಿಲ್ಲದಿದ್ದರೂ ಸೈನ್ಯಬಲವನ್ನುಪಯೋಗಿಸಲು ತಾವು ಹಿಂದೆಮುಂದೆ ನೋಡಲಿಕ್ಕಿಲ್ಲ ಎಂಬದಾಗಿಯೂ ಅವರು ಹೇಳಿದರು. ಶಾಂತಿ ಸುವ್ಯವಸ್ಥೆಗಳನ್ನು ಕಾಯ್ದುಕೊಳ್ಳುವದು ಹಿಂದುಸ್ಥಾನದ ನಡುಗಾಲ ಸರಕಾರದ ಹೊಣೆಯಾಗಿದ್ದರೂ ಹಿಂದೀ ಭೂಮಿಯಲ್ಲಿ ಬ್ರಿಟಿಶ ಸೈನಿಕರಿರುವಷ್ಟು ಕಾಲ ಶಾಂತಿರಕ್ಷಣೆಯ ತಮ್ಮ ಹೊಣೆ ಕಡಿಮೆಯಾಗುವದಿಲ್ಲವೆಂದು ವಾಯಿಸರಾಯರು ಭಾವಿಸುತ್ತಾರೆ. ವಾಯಿಸರಾಯರು ಬಹಳ ಸೌಜನ್ಯದಿಂದಲೂ ಮನಃಪೂರ್ವಕವಾಗಿಯೂ ಮಾತಾಡಿದರು. ಎಲ್ಲ ಜಾತಿಗಳೂ ಪಕ್ಷಗಳೂ ಅವರ ಪ್ರಾಮಾಣಿಕತೆಯಲ್ಲಿ ನಂಬಿಕೆಯಿಟ್ಟು ಸಾಮಾನ್ಯ ಧ್ಯೇಯದ ಸಾಧನೆಯಲ್ಲಿ ಸಹಕರಿಸಿದರೆ ಅವರ ಕಠಿಣ ಕಾರ್ಯ ಸುಗಮವಾದೀತೆಂದು ಗಾಂಧೀಜಿ ಹೇಳಿದರು.

ನಿನ್ನೆ ಹೇಳಿದ ಮಾತನ್ನೇ ತಿರುಗಿ ಹೇಳುತ್ತ ಗಾಂಧೀಜಿ, ವಾಯಿಸರಾಯರು ವಿಶ್ವಾಸಘಾತ ಮಾಡಿದ್ದು ಸಿದ್ಧವಾದ ಹೊರತು ನಾವೆಲ್ಲರೂ ಅವರ ಸದುದ್ದೇಶದಲ್ಲಿ ನಂಬಿಕೆಯಿಡಬೇಕೆಂದು ಬಿನ್ನೈಸಿದರು. ಹಿಂದೂ ಮುಸ್ಲಿಮರು ತಮ್ಮೊಳಗೆ ಹೋರಾಡಿದರೆ ಬ್ರಿಟಿಶರು ಹೊರಟುಹೋಗಬೇಕೆಂಬ ಅಪೇಕ್ಷೆ ಅವರಿಗಿಲ್ಲವೆಂದೇ ಅದರ ಅರ್ಥವಾಗುವದು. ಆದರೂ ಜನರು ಮೃಗಗಳಂತೆ ವರ್ತಿಸುತ್ತಲೇ ಹೋದರೂ ಬ್ರಿಟಿಶರು ೩೦-೬-೪೮ಕ್ಕೆ ಇಲ್ಲಿಂದ ಹೊರಟು ಹೋಗಲೇಬೇಕೆಂದು ತಾವು ಶಂಕೆಯಿಲ್ಲದೆ ನಂಬಿರುವದಾಗಿ ಗಾಂಧೀಜಿ ಸಾರಿದರು. ಒಬ್ಬರನ್ನೊಬ್ಬರು ದೂರುವದನ್ನು ನಿಲ್ಲಿಸುವ' ಕಾಲಗತಿ ಬಂದಿದೆ. ಆದರಿಂದ ಎಂದೆಂದೂ ಶಾಂತಿಯುಂಟಾಗಲಾರದು.

ಅಮೇಲೆ, ಗಾಂಧೀಜಿ ಆಹಾರ ವಸ್ತ್ರಗಳ ಕೊರತೆಯ ಗಂಭೀರ ಸಮಸ್ಯೆಗಳನ್ನು ಕುರಿತು ಮಾತಾಡಿದರು. ಇವು ಹಿಂದು ಮುಸ್ಲಿಂ ಜನತೆಗಳೆರಡಕ್ಕೂ ಸಾಮಾನ್ಯವಾದವುಗಳು. ಅವರು ಬುದ್ಧಿವಂತರಾಗಿ ಪರಸ್ಪರ ಸ್ನೇಹದಿಂದಿದ್ದರೆ, ಈ ಹಸಿದ ಹೊಟ್ಟೆಗಳನ್ನು ತುಂಬಬಲ್ಲರು; ಬತ್ತಲೆ ಮೈಗಳನ್ನು ಮುಚ್ಚಬಲ್ಲರು. ಹಾಗೆ ಮಾಡುವದು ಅವರ ಕರ್ತವ್ಯ.

ಇಂದು, ಸ್ವಲ್ಪ ಮುಂಚೆ, ಮೋ. ಶಹನವಾಜರು ತಮಗೆ ಭೆಟ್ಟಿಯಾದದನ್ನು ಗಾಂಧೀಜಿ ಪ್ರಸ್ತಾವಿಸಿದರು. ಮುಸ್ಲಿಂ ನಿರಾಶ್ರಿತರನ್ನು ತಿರುಗಿ ಬರಗೊಡಿಸಲು ಮನಸಿಲ್ಲದಿದ್ದ ಬಿಹಾರದ ಹಳ್ಳಿಯೊಂದರ ಹಿಂದುಗಳು ಈಗ ಎಲ್ಲ ನಿರಾಶ್ರಿತರನ್ನೂ ತಿರುಗಿ ಸ್ವಾಗತಿಸುವದಾಗಿ ಮಾತುಕೊಟ್ಟಿದ್ದಾರೆಂದು ಶಹನವಾಜರು ತಮಗೆ ಹೇಳಿದರು. ಹಳ್ಳಿಗರು ತಾವೇ ವಸ್ತ್ರಗಳನ್ನು ಉಡುಗಿದ್ದಲ್ಲದೆ ಮುರಿದ ಮನೆಗಳನ್ನು ಸರಿಪಡಿಸಿಕೊಡುವ ಭರವಸೆಕೊಟ್ಟಿದ್ದಾರೆ. ಹಾಗೆ ಕೇಳಿದರೆ ಎಲ್ಲೆಡೆಗಳಲ್ಲಿಯೂ ಉನ್ಮಾದ ಹಬ್ಬಿತ್ತು. ಹಿಂದೆ ತಮ್ಮನ್ನು ಕಾಡಿದವರೂ ಪ್ರೀತಿಯಿಂದಲೂ ತಿಳುವಳಿಕೆಯಿಂದಲೂ ನಡೆದುಕೊಂಡರೆ ಸಂಕಷ್ಟಕ್ಕೆ ಗುರಿಯಾದವರು ಅಷ್ಟರಿಂದಲೇ ಸಂತುಷ್ಟರಾಗುವರು. ಬಿಹಾರದ ಈ ಹಿಂದುಗಳ ವರ್ತನೆಯೂ ಅಂಥ ಬೇರೆಲ್ಲ ಕೃತಿಗಳೂ ಇಂದಿನ ಸರ್ವವ್ಯಾಪಿ ಕಗ್ಗತ್ತಲಲ್ಲಿ ಚಿಕ್ಕೆಗಳಂತೆ ಹೊಳೆಯುತ್ತವೆ.

ಶಾಂತಿ ಬಿನ್ನಹಕ್ಕೆ ಕಾಯದೆ ಅಝಾದರು ಇಕ್ಕಿದ ಅಂಕಿತ ಹೃತ್ಪೂರ್ವಕವಾಗಿದ್ದರೆ ಗಡಿನಾಡಿನಲ್ಲಿಯೂ ಪಂಜಾಬದಲ್ಲಿಯೂ ನಡೆಯುತ್ತಿರುವ ಗಲಭೆಗಳೂ ಕ್ರೌರ್ಯಗಳೂ ನಿಲ್ಲದಿರವು, ಎಂದು ಗಾಂಧೀಜಿ ಹೇಳಿದರು.

೬—೫—೧೯೪೭

ಕಾಯಿದೆ ಅಝಾದರೊಡನೆ ಮಾತಾಡಲು ಹೋಗಿದ್ದ ಗಾಂಧೀಜಿ ಇನ್ನೂ ಮರಳಿರದ್ದರಿಂದ ೬-೩೦ ಗಂಟೆಗೆ ಅವರಿಲ್ಲದೇನೇ ಪ್ರಾರ್ಥನೆ ಪ್ರಾರಂಭವಾಯಿತು. ಈ ಬಾರಿಯೂ ಒಬ್ಬ ಆಕ್ಷೇಪಕನಿದ್ದುದರಿಂದ ನೆರೆದವರಿಗೆ ಎರಡು ನಿಮಿಷಗಳ ಮೌನ ಹೊರತು ಮತ್ತಾವುದರಲ್ಲಿಯೂ ಭಾಗವಹಿಸುವ ಅವಕಾಶ ದೊರೆಯಲಿಲ್ಲ.

ಕೆಟ್ಟ ಹವೆಯ ಕಾರಣದಿಂದ ನಿನ್ನಿನ ದಿನ ಗಾಂಧೀಜಿಯ ಲಿಖಿತ ವಚನವನ್ನೋದುವದಾಗಿದ್ದಿಲ್ಲ. ಇಂದು ಅವರಿಲ್ಲದಾಗ ಅದನ್ನು ಓದಲಾಯಿತು.

"ಪಾಪಪುರುಷನಿಂದ ಪಾರಾಗಲು ನಾನು ದೇವರನ್ನು ಆಶ್ರಯಿಸುತ್ತೇನೆ. ಓ ಪರಮಾತ್ಮನೆ! ನಿನ್ನ ನಾಮದಿಂದ ನಾನು ಎಲ್ಲ ಕೆಲಸಗಳನ್ನು ಪ್ರಾರಂಭಿಸುವೆ. ನೀನು ದಯಾಳು ಅನುಕಂಪಾಶೀಲನು. ನೀನು ಜಗತ್ತಿನ ಸೃಷ್ಟಿಕರ್ತನು. ನೀನೇ ಸ್ವಾಮಿ, ನಿಯಾಮಕ ನಿನ್ನೊಬ್ಬನನ್ನೇ ಸ್ತುತಿಸುವೆ. ನಿನ್ನೊಬ್ಬನಿಂದಲೇ ಸಹಾಯವನ್ನು ಬೇಡುವೆ. ವಿಚಾರಣೆಯ ದಿನದಲ್ಲಿ ನನಗೆ ನೀನು ನ್ಯಾಯವನ್ನು ಕೊಡುವವನಾಗು.

"ನನಗೆ ಸರಿಯಾದ ದಾರಿಯನ್ನು ತೋರಿಸು— ಋಷಿಗಳು ನಡೆದ ಸತ್ಪಥವನ್ನು, ನಿನ್ನನ್ನು ಕ್ರುದ್ಧನನ್ನಾಗಿ ಮಾಡಿದವರ ತಪ್ಪುದಾರಿಯನ್ನಲ್ಲ.

ದೇವರು ಒಬ್ಬನೇ. ಅವನು ಶಾಶ್ವತನು, ಸರ್ವಶಕ್ತನು, ಅಭವನು. ಅವನಂತಿರುವವರು ಬೇರಾರೂ ಇಲ್ಲ. ಅವನೇ ಸರ್ವನಿರ್ಮಾಪಕನು. ಅವನನ್ನು ಸೃಜಿಸಿದವರಿಲ್ಲ."

ದಿನವೂ ಕುರಾಣ ಶರೀಫದಿಂದ ಪಠಿಸಲ್ಪಡುವ ವಾಕ್ಯದ ಅರ್ಥವಿದು, ಎಂದು ಗಾಂಧೀಜಿ ಬರೆದಿದ್ದರು. ಅದನ್ನು ಪಠಿಸಲು ಯಾರಾದರೂ ಏಕೆ ಅಡ್ಡಿ ಎತ್ತಬೇಕೋ ತಮಗೆ ಗೋಚರವಿಲ್ಲ. ಈ ಪ್ರಾರ್ಥನೆಯನ್ನು ಹೃದಯದಲ್ಲಿ ಸ್ಥಾಪಿಸಿಕೊಂಡ ಸ್ತ್ರೀ ಪುರುಷರು ಉದ್ಧಾರ ಹೊಂದುವರೆಂಬಲ್ಲಿ ಸಂದೇಹವೇನೂ ಇಲ್ಲ, ಎಂದಿದ್ದರವರು.

೭—೫—೪೭

ಮಂಗಳವಾರ ದಿನ ಕಾಯದೆ—ಅಝಮ ಜಿನ್ನಾರಿಗೆ ಭೆಟ್ಟಿಯಾದುದನ್ನು ಪ್ರಸ್ತಾಪಿಸುತ್ತ ಗಾಂಧೀಜಿ ಇಂದು ಪ್ರಾರ್ಥನೋತ್ತರ ಭಾಷಣದಲ್ಲಿ, ಹಿಂದುಸ್ಥಾನದ ವಿಭಜನೆಯ ವಿಷಯದಲ್ಲಿ ತಮ್ಮಿಬ್ಬರೊಳಗೆ ಐಕಮತ್ಯವಾಗುವ ಸಂಭವ ಇದ್ದಿಲ್ಲವಾದರೂ ಸಂಭಾಷಣೆ ಸೌಹಾರ್ದಪೂರ್ವಕವಾಗಿಯೆ ನಡೆಯಿತೆಂದರು. ವಿಭಜನೆಯ ಕಲ್ಪನೆಯೇ ತಮಗೆ ಅಸಹ್ಯವಾಗಿದೆ. ಎಷ್ಟರವರೆಗೆ ಅದು ತಪ್ಪೆಂದು ಖಂಡಿತವಾಗಿ ಸುವದೋ ಅವರಿಗೆ ಆ ಯೋಜನೆಗೆ ಸ್ವಾಗತವಿತ್ತುವದು ತಪ್ಪಿಂದಾಗದ ಕೆಲಸ. ಅದು ಹಿಂದುಗಳಿಗೆ ಹಾನಿಕರವಾಗಿದೆ ಮಾತ್ರವಲ್ಲ. ಮುಸ್ಲಿಮರಿಗೂ ಅಷ್ಟೇ ಅಹಿತಕಾರಿಯಾಗಿದೆ.

ಹಿಂದುಸ್ಥಾನದ ವಿಚಾರ ಚಿಂತಿಸುವಾಗ ಯಾವದೊಂದು ವಿಶಿಷ್ಟ ಜಾತಿಯ ಹಿತದ ಭಾವನೆಯೆ ತಮ್ಮ ಮನಸಿನಲ್ಲಿ ಮೂಡುವದಿಲ್ಲೆಂದು ಗಾಂಧೀಜಿ ಹೇಳಿದರು. ತಾವು ಎಲ್ಲರ ಪ್ರತಿನಿಧಿಯಾಗಿ ಎಲ್ಲರಿಗೂ ಸಮಾನವಾಗಿ ಸೇವೆ ಮಾಡಲು ಪ್ರಯತ್ನಿಸುವವರು. ಆದರೆ ರಾಜಕೀಯ ಗುರಿಗಳನ್ನು ಸಾಧಿಸಲು ಹಿಂಸೆಯನ್ನುಪಯೋಗಿಸುವದು ತ್ರಿಕಾಲದಲ್ಲಿಯೂ ಅಯೋಗ್ಯವೆಂಬದನ್ನು ತಾವೂ ಕಾಯದೆ ಅಝಮರೂ ಮತ್ತೊಮ್ಮೆ ನಿಸ್ಸಂದಿಗ್ಧವಾಗಿ ಸಾರಿದ್ದಾಗಿದೆ. ಆ ಮಾತಿಗೆ ತಾವಿಬ್ಬರೂ ಬದ್ಧರೆಂದು ಅವರು ನುಡಿದರು.

"ಜಿನ್ನಾ ಸಾಹೇಬರ ಬಳಿಗೆ ನಾನು ಹೋಗುವದಕ್ಕೆ ಹಲವರು ಆಕ್ಷೇಪಿಸಿದರು. ಆದರೆ ಅದರಿಂದ ಯಾವದೇ ಹಾನಿಯಾಗಿಲ್ಲವೆಂದು ನನಗೆ ಮನವರಿಕೆಯುಂಟು. ಹೇಳಿಕೇಳಿ ನಾವಿಬ್ಬರೂ ಹಿಂದೀ ಬಂಧುಗಳು, ಒಂದೇ ದೇಶದಲ್ಲಿ ಬಾಳಬೇಕಾದವರು," ಎಂದರು ಗಾಂಧೀಜಿ.

ಪ್ರಸಿದ್ಧ ಹಿಂದೂ ಮಹಾಸಭಾವಾದಿಯೊಬ್ಬರ ಹೆಂಡತಿಯಿಂದ, ಸರ್ವತ್ರ ಸಭೆಗಳಿಗಾಗಿ ಕುರಾಣ ಪಠನಕ್ಕೆ ಆಕ್ಷೇಪವೆತ್ತುವ ಪತ್ರ ಬಂದುದನ್ನು ಉಲ್ಲೇಖಿಸಿ ಮಹಿಳೆಯೊಬ್ಬಳಿಂದ ಇಂಥ ಆಕ್ಷೇಪ ಬಂದದಕ್ಕೆ ತಮಗೆ ದುಃಖವಾಗಿದೆಯೆಂದು ಗಾಂಧೀಜಿ ಹೇಳಿದರು. ಪುರುಷರಿಗಿಂತಲೂ ಸ್ತ್ರೀಯರಿಂದ ಸಹಿಷ್ಣುತೆಯನ್ನೂ ಪ್ರೇಮವನ್ನೂ ತಾವು ಹೆಚ್ಚು ಪ್ರಮಾಣದಲ್ಲಿ ಅಪೇಕ್ಷಿಸುತ್ತೇವೆಂದರವರು. ನಾವೆತ್ತ ಸಾಗುತ್ತಿದ್ದೇವೋ ತಿಳಿಯದಾಗಿದೆ. ಸ್ತ್ರೀಯ ಹೃದಯದಲ್ಲಿ ದ್ವೇಷ ಮನೆಮಾಡಿದರೆ ಅವಳು ಮಕ್ಕಳಿಗೆ ಏನು ಕಲಿಸಿಯಾಳು, ಕಲಿಸಬಲ್ಲಳು? ಎಂದು ಗಾಂಧೀಜಿ ಕೇಳಿದರು.

ಕೆಲ ಮುಸ್ಲಿಮ ಧರ್ಮಾಂಧರು ಬಂಗಾಲದಲ್ಲಿಯೂ ಪಂಜಾಬದಲ್ಲಿಯೂ ದುಷ್ಕರ್ಮ ಮಾಡಿದ್ದಕ್ಕಾಗಿ ಕುರಾಣ ಶರೀಫವೇ ಕೆಟ್ಟದ್ದೆಂಬವರ ವಾದವನ್ನು ಗಾಂಧೀಜಿ ಖಂಡಿಸಿದರು. ಬಿಹಾರದಲ್ಲಿ ಹಿಂದುಗಳೂ ಉನ್ಮತ್ತರಾಗಿದ್ದರು. ಅಂದಮಾತ್ರಕ್ಕೆ ಗೀತೆಯ ಮಹತಿ ಕಡಿಮೆಯಾದೀತೆ? ಮುಸ್ಲಿಮ ಅನ್ಯಾಯಗಾರರನ್ನು ತಮ್ಮ ಮನೆಯೊಳಗೆ ಬರಗೊಡಿಸಲೊಲ್ಲದವರ ಕೃತಿಯನ್ನಾದರೂ ಅರ್ಥ ಮಾಡಿಕೊಳ್ಳಬಹುದು—ಅದು ಕೂಡ ಶತ್ರುಗಳನ್ನೂ ಪ್ರೀತಿಸಿರೆಂದು ಹೇಳುವ ಧರ್ಮದ ತತ್ವಕ್ಕೆ ವಿರುದ್ಧವಾಗಿದೆ— ಆದರೆ ಯಾವುದೊಂದು ಧರ್ಮದ ಅನುಯಾಯಿಗಳ ಮೇಲಿರುವ ದ್ವೇಷದಿಂದ ಆ ಧರ್ಮಗ್ರಂಥಗಳನ್ನೆ ಓದಬಾರದೆಂಬ ಛಲ ನಿಜವಾದ ಧರ್ಮಕ್ಕೆ ವಿಪರೀತವಾದ ಸಂಗತಿ. ಅದು ಹಿಂದೂಧರ್ಮವನ್ನು ಕಾಪಾಡುವ ಬದಲು ಖಂಡಿತವಾಗಿ ನಾಶಮಾಡುವ ಹಾದಿ.

ಮುಂದುವರಿಯುತ್ತ ಗಾಂಧೀಜಿ ಹೇಳಿದ್ದು: "ಮಸೀದೆಯಲ್ಲಿ ಗೀತೆಯ ಶ್ಲೋಕಗಳನ್ನೋದಲು ನನಗೆಂದಿಗೂ ಅನುಮತಿ ದೊರೆಯದು ಮತ್ತು ಮುಸ್ಲಿಮರು ತಮ್ಮ ಸ್ವಂತ ಧರ್ಮಗ್ರಂಥಗಳ ಹೊರಗೆಬಂದೇ ಒಂದು ಶ್ಲೋಕವನ್ನು ಕೂಡ ಓದಲಿಕ್ಕಿಲ್ಲ ಎಂಬವಾದ ಹುರುಳಿಲ್ಲದ್ದು. ನಾನು ಮುಸ್ಲಿಮರ ಮನೆಗಳಲ್ಲಿ ಪ್ರಾರ್ಥನೆಗಳನ್ನು ಜರಗಿಸಿದ್ದುಂಟು. ನೌಖಾಲಿಯಲ್ಲಿ ಒಂದು ಮಸೀದೆಯ ಆವಾರದಲ್ಲಿಯೆ ಪ್ರಾರ್ಥನೆ ನಡೆಸಿದ್ದೆ. ಮಸೀದೆಯ ಅಧಿಕಾರಿ ಇದಕ್ಕೆ ಆಕ್ಷೇಪವೆತ್ತಿದ್ದಿಲ್ಲ. ಪರಮಾತ್ಮನನ್ನು ರಾಮನೆಂದಾಗಲಿ ರಹೀಮನೆಂದಾಗಲಿ ಕರೆಯುವದು ಸಮುಚಿತವೆಂದು ಅವನು ಒಪ್ಪಿಕೊಂಡಿದ್ದನು."

ಅಮೇಲೆ ಗಾಂಧೀಜಿ ಕುರಾಣ ವಾಕ್ಯವೊಂದರ ಹಿಂದೀ ಅನುವಾದವನ್ನೋದಿ ತೋರಿಸಿದರು. ಅದರ ಅರ್ಥ ಹೀಗಿದೆ:

"ಪಾಪಪುರುಷನಿಂದ ಪಾರಾಗಲು ನಾನು ದೇವರನ್ನು ಆಶ್ರಯಿಸುತ್ತೇನೆ. ಓ ಪರಮಾತ್ಮನೇ ನಿನ್ನ ನಾಮದಿಂದ ನಾನು ಎಲ್ಲ ಕೆಲಸಗಳನ್ನು ಪ್ರಾರಂಭಿಸುವೆ. ನೀನು ದಯಾಳು ಅನುಕಂಪಾಶೀಲನು. ನೀನು ಜಗತ್ತಿನ ಸೃಷ್ಟಿಕರ್ತನು ನೀನೇ ಸ್ವಾಮಿ, ನೀನೇ ನಿಯಾಮಕ ನಿನ್ನೊಬ್ಬನನ್ನೇ ಸ್ತುತಿಸುವೆ, ನಿನ್ನೊಬ್ಬನಿಂದಲೇ ಸಹಾಯವನ್ನು ಬೇಡುವೆ. ವಿಚಾರಣೆಯ ದಿನ ನನಗೆ ನೀನು ನ್ಯಾಯವನ್ನು ಕೊಡುವವನಾಗು.

"ನನಗೆ ಸರಿಯಾದದಾರಿಯನ್ನು ತೋರಿಸು– ಋಷಿಗಳು ನಡೆದ ಸನ್ಮಾರ್ಗವನ್ನು, ನಿನ್ನನ್ನು ಕ್ರುದ್ಧನನ್ನಾಗಿಮಾಡಿದವರ ತಪ್ಪುದಾರಿಯನ್ನಲ್ಲ.

"ದೇವರು ಒಬ್ಬನೇ. ಅವನು ಶಾಶ್ವತನು. ಸರ್ವಶಕ್ತನು, ಭವನು. ಅವನಂತಿರುವವರು ಬೇರಾರೂ ಇಲ್ಲ. ಅವನೇ ಸರ್ವನಿರ್ಮಾಪಕನು. ಅವನನ್ನು ಸೃಜಿಸಿದವರಿಲ್ಲ."

ಭೀಮಶಕ್ತಿಯನ್ನು ಭೀಮನಾಗಿ ಉಪಯೋಗಿಸುವುದು

" ಈ ಒಟ್ಟುಗೂಡಿದ ಸಾಲವು ಅಶಕ್ಯವಾದ ಅನ್ಯಾಯವಾದ ಮುಕ್ತ ಹೊರಲಾರದ ಹೊರೆಯಾಗಿದೆ. ಸಂಯುಕ್ತ ಸಂಸ್ಥಾನಕ್ಕೂ ಬ್ರಿಟಿಷ್ ಕಾಮನ್‌ವೆಲ್ಥಕ್ಕೂ ಅನ್ವಯಿಸಿದಂತೆ ಕಡಬಿಕ್ಕೆ ಮತ್ತು ಪರಸ್ಪರ ಸಹಾಯ ತತ್ವದಲ್ಲಿ ವಿಶ್ವಪಕ್ಷದ ಎಲ್ಲ ರಾಷ್ಟ್ರಗಳಿಗೂ ಅನ್ವಯಿಸಿದರೆ ನಮ್ಮ ಮೇಲೆ ಸಾಲದ ಹೆಚ್ಚಿನ ಭಾಗವು ಹೇರಲ್ಪಡುತ್ತಿದ್ದಿಲ್ಲ" ಎಂದು ಬ್ರಿಟಿಷ್ ಅರ್ಥಮಂತ್ರಿ ಡಾ. ಹ್ಯೂಗ್ ಡಾಲ್ಟನ್‌ರವರು ಅಭಿಪ್ರಾಯಪಡುವರೆಂದು ರಾಯ್ಟರ್ ಸುದ್ದಿಸಂಸ್ಥೆಯಿಂದ ತಿಳಿದು ಬಂದಿದೆ.

ಅವರು ಮುಕ್ತ ಹೇಳುವುದೇನೆಂದರೆ: ಕಡವಾಗಿ ಮಾಡುವುದಕ್ಕಿಂತ ಈಗಲೇ ಈ ದೊಡ್ಡ ರಾಶಿಯನ್ನು ಕರಗಿಸುವುದು ಉತ್ತಮ:

" ಬ್ರಿಟನ್ನು ಸಶಕ್ತವಾಗಿದೆ. ಆದರೆ ನ್ಯಾಯನೀತಿಗೆ ಹೊಂದದ ಮತ್ತು ತನ್ನ ಶಕ್ತಿಗೆ ಮೀರಿದ ವಿಪರೀತವಾದ ಕರಾರುಗಳನ್ನು ಒಪ್ಪಿಕೊಳ್ಳುವುದನ್ನು ತ್ಯಜಿಸುವುದು ಅವರ ಶಕ್ತಿಯ ಒಂದು ಗುರುತಾಗಿರಬೇಕು. ಅಲ್ಲದೆ ಬ್ರಿಟಿಷ್ ಅರ್ಥಮಂತ್ರಿಯಾಗಿ ನಾನು ಈ ವಿಲಕ್ಷಣವಾದ ಯುದ್ಧಕಾಲೀನ ಲೆಕ್ಕಾಚಾರದ ಮೂಲಕ ಸೋತುಹೋದ ಜಪಾನು, ಜರ್ಮನಿ ಮತ್ತು ಇನ್ನಿತರ ಸ್ವಾತಂತ್ರ್ಯಶತ್ರುಗಳು ಕೂಡ ಹೊರದೆ ತಪ್ಪಿಸಿಕೊಂಡಿರುವ ಗುರುತರವಾದ ನಷ್ಟಕ್ಕೆ ಸ್ವಾತಂತ್ರ್ಯಸಮರದ ಮುಂದಾಳಾಗಿ ನಿಂತ ಈ ಚಿಕ್ಕ ನಡುಗಡ್ಡೆ ಮುಮ್ಮತಲೆತಲಾಂತರದ ವರೆಗೆ ಗುರಿಯಾಗುವ ಮಾತಹ ಯಾವ ಆರ್ಥಿಕ ವ್ಯವಸ್ಥೆಗೂ ಬೆಂಬಲ ಕೊಡಲಾರೆ."

ಈಗಲು ಕೂಡ ತಾವು ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡಿದೆವೆಂದು ಬ್ರಿಟಿಷ್ ರಾಜಕಾರಣಿಗಳು ಜಗತ್ತಿನ ಕಣ್ಣಿಗೆ ಧೂಳೆರಚಲು ಪ್ರಯತ್ನಿಸುತ್ತಿರುವುದನ್ನು ಕೇಳಿದರೆ ನಗೆ ಬರುತ್ತದೆ. ತಮ್ಮ ಯುದ್ಧವು ತಮ್ಮ ಆರ್ಥಿಕ ಸ್ಪರ್ಧಾಳುಗಳನ್ನು ಹತ್ತಿಕ್ಕಲು ಹೂಡಿದ್ದಾಗಿತ್ತೆಂದು ಸಾಮಾನ್ಯನಿಗೆ ಕೂಡ ಗೊತ್ತಿದೆಯೆಂಬುದನ್ನು ಅವರು ಯಾವಾಗ ತಿಳಿದುಕೊಳ್ಳುವರೊ? ಈಗ ಅದರ ಖರ್ಚಿನ ಬಗ್ಗೆ ಗೊಣಗುಟ್ಟಿದರೆ ಪ್ರಯೋಜನವಿಲ್ಲ. ಮಿತ್ರಪಕ್ಷದ "ಮಹಾಸಂಘ" ದಲ್ಲಿ ಯಾರಾರಿದ್ದರು? ಹಿಂದುಸ್ಥಾನವಂತೂ ಖಂಡಿತವಾಗಿ ಇದ್ದಿಲ್ಲ. ತಾನುಕೊಡಬೇಕಾಗಿದ್ದನ್ನು ಕೊಡಲೊಪ್ಪದಿರುವುದು ನ್ಯಾಯವಾದ ಧೀರೋದಾರವಾದ ರೀತಿಯಲ್ಲ ತನ್ನ ಬಲವನ್ನು ಉಪಯೋಗಿಸಿದಂತಾಗುವದೇ? ಬ್ರಿಟನ್ನಿನ ಜನಜನಿತವಾದ ನೈತಿಕ ನಂದಾದೀಪವು ಎಂತಹ ಸುಂಟರ ಗಾಳಿಯಲ್ಲಿ ಸಿಕ್ಕಿಬಿಟ್ಟಿದೆ! "

ಜೆ. ಸಿ. ಕೆ.

ಹಿಂದು ಮುಂದು

ವೈಜ್ಞಾನಿಕ ವ್ಯವಸಾಯ ಶಿಕ್ಷಣ ಕೊಡಲೆಂದು ಹೊಸದೊಂದು ವ್ಯವಸಾಯದ ಕಾಲೇಜು ಸ್ಥಾಪಿಸಬೇಕೆಂದು ಒಂದು ಸುದ್ದಿ ಬಂದಿದೆ. ಅದಕ್ಕಾಗಿ ಕೇಂದ್ರ ಸರಕಾರವು ಆನಂದ ಪ್ರಭಾತಕ್ಷೇತ್ರವನ್ನು ಕೊಟ್ಟಿದೆ. ಪಾಠಶೇಳಲು, ಪ್ರಯೋಗಶಾಲೆಗಳಿಗಾಗಿ, ವಿದ್ಯಾರ್ಥಿ ವಸತಿಗೃಹಗಳಿಗೆಂದು ಮತ್ತು ಶಿಕ್ಷಕರ ವಾಸಕ್ಕಾಗಿ ದೊಡ್ಡ ದೊಡ್ಡ ಕಟ್ಟಡಗಳನ್ನು ಒದಗಿಸಿಕೊಡಲಾಗಿದೆ. ಮುಖ್ಯವಾಗಿ ಈಗ ಬೇಕಾದದ್ದು ಒಂದು ಗದ್ದೆ ಇಷ್ಟರೊಳಗೆ ಒಂದನ್ನು ಕೊಂಡು ಕಾಲೇಜಿನ ಆವರಣದಲ್ಲಿ ಸೇರಿಸಿಬಿಡುವರಂತೆ ಆಯ್ತು ವಿವಿಧ ಮಾದರಿಯ ಹಳ್ಳಿಗಳ ಗದ್ದೆಗಳಲ್ಲಿ ವ್ಯವಸಾಯದ ಕಾಲೇಜುಗಳಿರಬೇಕಲ್ಲದೆ ಕಾಲೇಜುಗಳಿಗೆ ವ್ಯವಸಾಯದ ಗದ್ದೆಗಳನ್ನು ಹೊಂದಿಸುವುದರಲ್ಲಿಯಾವ ಸಾಮಂಜಸ್ಯವಿದೆ? ಎರಡನೆಯದೇ ನಮ್ಮ ಹಿಂದುಸ್ಥಾನ ಸರಕಾರ ಕೆಲಸಮಾಡುವ ರೀತಿ. ಅದು ಯಾವಾಗ ಬದಲಾದೀತು?

ಜೆ. ಸಿ. ಕೆ.

ಇದರ ಪ್ರತಿಯೊಂದು ಶಬ್ದವನ್ನೂ ಹೃದಯದಲ್ಲಿ ಕೆತ್ತಿಕೊಂಡರೆ ಅವರಿಂದ ನಮ್ಮ ಉದ್ಧಾರವಾಗದಿರದೆಂದು ಗಾಂಧೀಜಿ ನುಡಿದರು ಹಿಂದಿಯಲ್ಲಿ ಅನುವಾದವಿರುವದರಿಂದ ಯಾರೂ ಅದಕ್ಕೆ ಆಕ್ಷೇಪವೆತ್ತುವದಿಲ್ಲ. ಆದರೆ ಅರಬ್ಬಿಯಲ್ಲಿ ಅದನ್ನೋದಿದಾಕ್ಷಣ ಆಕ್ಷೇಪಗಳು ಏಳುತ್ತವೆ. ಈ ವರ್ತನೆಯ ಮೂರ್ಖತನವನ್ನು ಮನಗಾಣಬೇಕೆಂದು ಗಾಂಧೀಜಿ ಅವರಿಗೆ ಬಿನ್ನವಿಸಿದರು. ಅಂಧಕಾರವನ್ನು ತೊಲಗಿಸೆಂದು ಎಲ್ಲರೂ ದೇವರನ್ನು ಪ್ರಾರ್ಥಿಸಲಿ ಎಂದು ಅವರು ಹಾರೈಸಿದರು.

ಗಾಂಧೀಜಿಯ ಪತ್ರಿಕಾ ಪ್ರಕಟನೆ

ಟ್ರಾನ್ಸವಾಲ ಹಿಂದೀ ಕಾಂಗ್ರೆಸ್ಸಿನ ಕಾರ್ಯಕರ್ತರಾದ ಸೇಠ ಕಚಾಲಿಯಾ ಅವರು, ದಕ್ಷಿಣ ಆಫ್ರಿಕಾ ಯೂನಿಯನ್ನಿನಲ್ಲಿರುವ ವರ್ಣದ್ವೇಷಾತ್ಮಕ ಪ್ರಶ್ನೆಯ ಬಗ್ಗೆ ಜೋಹಾನ್ಸಬರ್ಗದಲ್ಲಿ ನಡೆಯಲಿರುವ ದಕ್ಷಿಣ ಆಫ್ರಿಕೆಯ ಸಮಸ್ತ ಯುರೋಪಿಯನೇತರ ಜನಾಂಗಗಳ ಪ್ರದರ್ಶನಕ್ಕೆ ಸಂದೇಶವನ್ನು ಕಳುಹಿಸಿ ಅಂತ ಕೇಳಿದ್ದಾರೆ. ಈ ಪ್ರಶ್ನೆ ಅತ್ಯಂತ ಗಹನವೂ ನಿರುಪಾಯವೂ ಆಗಿದೆ. ಅಲ್ಲಿ ಹಿಂದೀಯರಿಗಿರುವ ಅಪಾತ್ರತೆಗಳನ್ನಷ್ಟೇ ಲೆಕ್ಕಿಸಿದರೂ ಅದು ಸಾಕಷ್ಟು ಸೂಕ್ಷ್ಮವೇ ಇದೆ. ಎಲ್ಲ ಜನಾಂಗಗಳನ್ನು ಅದರಲ್ಲಿ ಸೇರಿಸಿಕೊಳ್ಳುವುದು ತರ್ಕಕ್ಕೆ ನಿಲುಕುವ ವಿಚಾರದಲ್ಲಿ ಅತ್ಯಂತ ಉಚ್ಚ ಹುಟ್ಟಿದಲ್ಲಿ, ಸತ್ಯ—ಅಹಿಂಸೆಗಳನ್ನೇ ಗಟ್ಟಿಯಾಗಿ ಹಿಡಿದುಕೊಂಡು ಸಾಗಿದ್ದರೆ ಇದು ಗಂಭೀರ ಗಂಡಾಂತರದಲ್ಲಿ ಪರಿಣಮಿಸಬಹುದು. ವಾಗ್ಧೋರಣೆಯ ಪ್ರದರ್ಶನವಾಗಲಿ ನಿರರ್ಥಕ ಆಶೆಗಳನ್ನು ಹುಟ್ಟಿಸುವದಾಗಲಿ ಸಲ್ಲದೆಂದು ಪ್ರದರ್ಶನದ ಸಂಘಟಕರನ್ನು ನಾನು ಎಚ್ಚರಿಸುವೆ. ಅವರು ತಮ್ಮ ಪ್ರದರ್ಶನವನ್ನು ಘನತೆಯಿಂದಲೂ ಸಂಯಮದಿಂದಲೂ ನಿರ್ವಹಿಸಬೇಕೆಂದೂ ಸೂಚಿಸುವೆ. ಜಗತ್ತಿನ ಎಲ್ಲ ಶೋಷಿತ ಜನರ, ಮತ್ತು ಅದೇ ಕಾರಣದಿಂದ ಇಡಿ ಜಗತ್ತಿನ ವಿಮೋಚನೆಯಾಗಬೇಕಾದರೆ ಒಂದು ಬದಿಯಲ್ಲಿ ಸತ್ಯ ಮತ್ತಿನ್ನೊಂದರಲ್ಲಿ ಅಹಿಂಸೆ ಇವು ಹಿರಿ ಅಕ್ಷರಗಳಲ್ಲಿ ಕೆತ್ತಿದ ನಾಣ್ಯವೊಂದೇ ಉಪಯುಕ್ತವಾದೀತೆಂಬ ಮಾತನ್ನು ಯಾರೂ ಶಂಕಿಸದಿರಲಿ. ಅರುವತ್ತು ವರ್ಷಗಳ ಅನುಭವ ನನಗೆ ಬೇರಾವ ಉಪಾಯವನ್ನೂ ತೋರಿಸಿ ಕೊಡಲಾರದೆ ಹೋಗಿದೆ.

ಹೊಸದಿಲ್ಲಿ
೮—೫—೧೯೪೭

ಗ್ರಾಮ-ಸೇವಕ ವಿದ್ಯಾಲಯ

(ಅಖಿಲಭಾರತ ಗ್ರಾಮೋದ್ಯೋಗಸಂಘ)

೧೯೪೨ರ ನಂತರ ಇದೇ ಮೊದಲನೆಯದಾಗಿ ಗ್ರಾಮ-ಸೇವಕ ವಿದ್ಯಾಲಯದ ವಾರ್ಷಿಕೋತ್ಸವವು ಏಪ್ರಿಲ ೩೦ರಲ್ಲಿ ಜರುಗಿತು. ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಮಧ್ಯಪ್ರಾಂತ ಮತ್ತು ವರಾಡದ ಆಹಾರಮಂತ್ರಿಗಳಾದ ಶ್ರೀ ಆರ್. ಕೆ. ಪಾಟೀಲರು ವಹಿಸಿದರು.

ವಿದ್ಯಾಲಯದ ವಿದ್ಯಾರ್ಥಿಗಳ ಸಂಖ್ಯೆ ೬೨. ಅದರಲ್ಲಿ ೨೧ ವಿದ್ಯಾರ್ಥಿಗಳು ಯೋಗ್ಯತಾಪತ್ರಗಳನ್ನೂ ೨೬ ವಿದ್ಯಾರ್ಥಿಗಳು ಉತ್ತರಣಪತ್ರಗಳನ್ನೂ ೧೫ ವಿದ್ಯಾರ್ಥಿಗಳು ಕೇವಲ ಔದ್ಯೋಗಿಕ ಯೋಗ್ಯತಾಪತ್ರಗಳನ್ನೂ ಪಡೆದರು. ೧೦ ವಿದ್ಯಾರ್ಥಿಗಳು ಉತ್ತೀರ್ಣರಾಗಲಿಲ್ಲ.

ವಿದ್ಯಾಲಯದ ಹೊಸ ಪ್ರವಚನಕಾಲವು [illegible] ಜುಲೈ ೧ಕ್ಕೆ ಪ್ರಾರಂಭವಾಗುತ್ತದೆ. ಪ್ರವೇಶಕ್ಕಾಗಿ ಅಪೇಕ್ಷಾಪತ್ರಗಳನ್ನು ಜೂನ ೧೫ರೊಳಗಾಗಿ ಕಳುಹಿಸತಕ್ಕದ್ದು.

ಇದಲ್ಲದೆ ಗ್ರಾಮ ಸಂಘಟನ ತರಬೇತಿಯ ಪಠ್ಯಕ್ರಮವನ್ನು ಸಪ್ಟಂಬರ ೧೬ರಿಂದ ಏಪ್ರಿಲ ೧೫ರವರೆಗೆ ನಡೆಸಬೇಕೆಂಬ ಉದ್ದೇಶವಿದೆ. ಇದಕ್ಕೆ ವಿಶ್ವವಿದ್ಯಾಲಯದ ಪದವೀಧರರಷ್ಟು ಜ್ಞಾನ ಪಡೆದವರಿಗೆ ಮಾತ್ರ ಪ್ರವೇಶವಿದೆ.

ವಿಶೇಷ ಮಾಹಿತಿಗಾಗಿ ಮೇಲ್ವಿಚಾರಕ, ಮಗನವಾಡಿ, ವರ್ಧಾ, ಸಿ. ಪಿ. ಇವರಿಗೆ ಬರೆದುಕೊಳ್ಳತಕ್ಕದ್ದು.

ಗಾಂಧೀಜಿಯ ಆಚಾರ ವಿಚಾರ

(೮ ನೇ ಪುಟದಿಂದ)

ಭವಿತವ್ಯವನ್ನು ನಿರ್ಣಯಿಸಬಲ್ಲುದು. ಬ್ರಿಟಿಶರಿಗೆ ಈ ಯೋಗ್ಯತೆಯುಂಟೆಂದು ನನಗೆ ನಂಬಿಕೆಯುಂಟು. ನನಗೆ ಬ್ರಿಟಿಶರ ಪರಿಚಯ ಚನ್ನಾಗಿದೆ. ನಾನು ನನ್ನ ಜೀವನದ ಅತ್ಯುತ್ತಮ ವರ್ಷಗಳನ್ನು ಅವರೊಡನೆ ಕಳೆದಿದ್ದೇನೆ. ತೊಂದರೆಯಿಲ್ಲದೆಂದು ಅವರನ್ನು ಕರೆಯಲು ನನ್ನ ಸಮ್ಮತಿಯುಳ್ಳ. ಜಡರಿಗೆ ಕೌರವರನು ಹೇಳುವಂತೆ "ಅವಿವೇಕಿ ಸದ್ಗುಣಕ್ಕಿಟ್ಟ ಕಳಶ"ವೆಂದು ಅವರ ಬಗ್ಗೆ ಹೇಳಬಹುದೆಂದು ಎಣಿಸಿದ್ದೇನೆ. ಆದರೂ ಬ್ರಿಟನ್ನು ಆ ಉಚ್ಚಮಟ್ಟಕ್ಕೆ ಇನ್ನೂ ಏರಬೇಕಷ್ಟೆ."

ಹೀಗೆ ಗಾಂಧೀಜಿ ಪ್ರೇಮಮಾರ್ಗಕ್ಕೆ ಹೃದಯಗಳನ್ನು ಪರಿವರ್ತಿಸುವ ಯಾತ್ರೆಯನ್ನು [illegible]ನಾಗಿದ್ದಾರೆ. ಬ್ರಿಟಿಶರಿಗೆ, ಅರಸರಿಗೆ, ಹಿಂದುಗಳಿಗೆ, ಮುಸ್ಲಿಮರಿಗೆ, ವ್ಯಕ್ತಿಗೆ, ಸಮಾಜಕ್ಕೆ, ಅಲ್ಪಸಂಖ್ಯಾತರಿಗೆ, ಸ್ತ್ರೀಯರಿಗೆ, ಪತ್ರಿಕೋದ್ಯೋಗಿಗಳಿಗೆ, ಪಕೆ ಇಡಿ ಜಗತ್ತಿಗೇ ಅವರು ನೀಡುವ ಪ್ರತಿಯೊಂದು ಮಾತೂ ಆಹ್ವಾನರೂಪವಾಗಿದೆ. ಎಲ್ಲರ ಕಣ್ಣುಗಳೂ ಹಿಂದುಸ್ಥಾನದತ್ತ ಹೊರಳಿವೆ. ಅದು ತನ್ನ ನಾಯಕನಿಗೆ ಒಪ್ಪು[illegible]

ಭಾರತ ಕೇವಲ ತನ್ನನ್ನಷ್ಟೇ ಅಲ್ಲ, ಇಡಿ ಜಗತ್ತನ್ನು ಶಾಂತಿ ಪಥದಲ್ಲಿ ಮುನ್ನಡೆಸಬಲ್ಲದೆ? ಇದೊಂದು ಬಲು ದೊಡ್ಡ ಆಹ್ವಾನ, ಭಾರವಾದ ಹೊಣೆಗಾರಿಕೆ.

ಮ. ಶ್ರೀ.

ಹೊಸದಿಲ್ಲಿ
೧೦—೫—೧೯೪೭

ತೆರಿಗೆಯಲ್ಲಿ ನ್ಯಾಯದೃಷ್ಟಿ

ಜೆ. ಸಿ. ಕುಮಾರಪ್ಪನವರಿಂದ

ಗ್ರಾಮ ಕೈಗಾರಿಕೆಗಳು ಸುಧಾರಿತವಲ್ಲವಾದುದರಿಂದಲೂ ದೊಡ್ಡ ಕೈಗಾರಿಕೆಗಳು ವೈಜ್ಞಾನಿಕ ಮತ್ತು ಸುಧಾರಿತವಾದುದರಿಂದಲೂ ಮೊದಲನೆಯವು ಎರಡನೆಯವುಗಳೊಡನೆ ಸ್ಪರ್ಧಿಸಿ ಗೆಲ್ಲಲಾರವೆಂದು ಕಾರಖಾನೆಯ ಮಾಲಕರು ಜನರಲ್ಲಿ ನಂಬಿಗೆ ಹುಟ್ಟಿಸಿದ್ದಾರೆ. ಪದೇ ಪದೇ ಹೇಳುವದರಿಂದ ಜನಸಾಮಾನ್ಯರು ಇದನ್ನು ನಂಬುವಂತೆ ಮಾಡಬಹುದು. ಆದರೆ ಈ ತೆರದ ಪ್ರಚಾರವು ಅರ್ಥಶಾಸ್ತ್ರಜ್ಞರು ಕೂಡ ಇಂಥ ಬುದ್ಧಿಯಿಲ್ಲದ ಕಲ್ಪನೆಗಳಿಗೆ ಎಡೆಕೊಡುವಂತಾಗುವಷ್ಟರ ವರೆಗೆ ನಡೆದಿದೆ.

ಕಾರಖಾನೆಯ ಯಂತ್ರಗಳಿಗೆ ಬಹಳ ಸೌಲಭ್ಯಗಳಿವೆ; ಅದ್ದರಿಂದ ಸಾರ್ವಜನಿಕ ಖರ್ಚಿನಿಂದ ಅವು ನಡೆಯುತ್ತವೆಯೆಂದು ಸಹ ಯಾರಾದರೂ ವಾದಿಸಬಹುದು. ಸರಕಾರವು ತನ್ನಿಂದ [illegible] ಮಾಡಿದ ಕೋಟೆಗಟ್ಟಲೆ ಹಣದಿಂದ ಹಳ್ಳಿಯ ಕಸಬುದಾರನಿಗೆ ಯಾವ ಪ್ರಯೋಜನವೂ ಇಲ್ಲ. ಬಹಳ ಖರ್ಚಿನಿಂದ ನಡೆಯುತ್ತಿರುವ [illegible] ಸಂಸ್ಥೆಗಳು ಆತನಿಗಾಗಿ ಇಲ್ಲ. [illegible] ಒಪ್ಪು ಹಣವನ್ನು ನೀರುಪಾಲು ಮಾಡಿ ತಯಾರಿಸಿದ ಹೆದ್ದಾರಿಗಳು ಆತನಿಗೆ ನಿರುಪಯೋಗಿಗಳಷ್ಟೇ ಅಲ್ಲ; ಅಭ್ಯಾಸವಿಲ್ಲದ ಆತನ ಎತ್ತುಗಳಿಗೆ ಅಪಾಯಕರಗಳೂ ಆಗಿವೆ. ಅಸ್ಫಾಲ್ಟ ಹಾಕಿದ ಹೆದ್ದಾರಿಗಳನ್ನು ಕಾರು ಹತ್ತಿದ ಪಟ್ಟಣದಾರಿಗರನ್ನೇ ಆತನ ಎತ್ತಿನಗಾಡಿಗಳು ಉಪಯೋಗಿಸುವದೇ ಇದಕ್ಕೆ ಸಾಕ್ಷಿ. ಸರಸ ಸೈನಿಕರು ಹಳ್ಳಿಗಳಲ್ಲಿ ಪ್ರವೇಶಿಸುವದೊಂದೇ ಸಂತೋಷದ ಸಂಗತಿ. ಅವರು ನಗರಗಳಲ್ಲೇ ಹೆಚ್ಚಾಗಿ ಇದ್ದರೂ ಅದರ ಸಲುವಾಗಿ ಆಗುವ ಖರ್ಚನ್ನು ಹಳ್ಳಿಗನ ಉತ್ಪಾದನೆಯಿಂದಲೇ ನಿರ್ವಹಿಸಬೇಕಾಗಿದೆ. ಸುಗಿಯಲ್ಲಿ ಹಳ್ಳಿಗನ ಕಚ್ಚಾ ಮಾಲುಗಳನ್ನು ಕಾಳಸಂತೆಯಾಡಿಕೊಂಡು ಆತನಿಗೇ ಹೆಚ್ಚಿನ ಧಾರಣೆಗೆ ತಂದು ಮಾರುವುದಕ್ಕಿಲ್ಲದೆ ಮಂತ್ರಾವಾದಕ್ಕೂ ರೈಲ್ವೆ ಇಲಾಖೆಯು ಗಮನ ಕೊಡುವುದಿಲ್ಲ. ಗ್ರಾಮಕೈಗಾರಿಕೆಗಳಿಗಿರುವ ಈ ಎಲ್ಲ ಪ್ರತಿಕೂಲಗಳನ್ನು ನೋಡಿದ ಪರಿಪುಷ್ಟವಾದ ಕಾರಖಾನೆಯ ಯಂತ್ರಗಳೊಡನೆ ಸ್ಪರ್ಧಿಸಲಾರದ ದೌರ್ಬಲ್ಯವೆಂದು ಎಣಿಸಲಾಗುತ್ತಿದೆ.

ಈ ಹಳೆಯ ಅನಾನುಕೂಲಗಳ ಜೊತೆಗೆ ಹೊಸದಾಗಿ ಗಂಟುಬಿದ್ದ ನಿಯಂತ್ರಣಗಳು ಸ್ವಲ್ಪವಲ್ಲ. ಬಿಹಾರದಲ್ಲಿರುವ ಅಖಿಲ ಭಾರತ ಗ್ರಾಮಕೈಗಾರಿಕೆಯ ಸಂಘದ ಪ್ರತಿನಿಧಿಯು ಎಣ್ಣೆಯ ಮತ್ತು ಎಣ್ಣೆಯ ಬೀಜಗಳ ಅಂತರ್ಪ್ರಾಂತೀಯ ಆಮದಿನ ಮೇಲಿದ್ದ ನಿಯಂತ್ರಣವನ್ನು ತೆಗೆದುಹಾಕಿದ್ದು ಮತ್ತು ರೈಲ್ವೆ ಇಲಾಖೆಯವರ ಅಸಂಬದ್ಧ ವ್ಯವಹಾರ ಇವುಗಳಿಂದ ಗಾಣಿಗರಿಗೆ ಬಹಳ ಹಾನಿಯುಂಟಾಗಿದೆಯೆಂದು ಬರೆಯುತ್ತಾನೆ. ಸಂಯುಕ್ತಪ್ರಾಂತ ಮತ್ತು ಪಂಜಾಬಿನಿಂದ ರೈಲುಗಾಡಿಗಳು ಮಿಲ್ಲಿನ ಎಣ್ಣೆಗಳನ್ನು ತರುತ್ತವೆ. ಇದು ಎಣ್ಣೆಗಳ ಬೆಲೆಯನ್ನು ಇಳಿಸಿಬಿಟ್ಟಿದೆ. ಎಣ್ಣೆಯ ಬೀಜಗಳಿಗಾಗಿ ಹೆಚ್ಚಿಗೆ ಗಾಡಿಗಳನ್ನು ಕೊಡಲು ರೇಲ್ವೆಯವರು ಒಪ್ಪದುದರಿಂದ ಎಣ್ಣೆಯ ಬೀಜಗಳ ಅಭಾವ ಹಾಗೇ ಇದೆ, ಆದರೆ ಮಿಲ್ಲಿನೆಣ್ಣೆಗಳ ಬೆಲೆ ಎಷ್ಟೋ ಪಟ್ಟು ಇಳಿದು ಹೋಗಿದೆ. ರೇಲ್ವೆಯವರ ಇಂತಹ ಭೇದನೀತಿಯಿಂದ ಪ್ರಾಂತದ ಹೊರಗೆ ಸಾಗಿಸಿದ ಮಣಕ್ಕೆ ೨.೧ ರೂಪಾಯಿಗಳಿದ್ದರೆ ಅದೇ ತರದ ಸಾಗಿಸಿದ ಪ್ರಾಂತದೊಳಗೆ ಸಾಗಿಸಬೇಕಾದರೆ ಮಣಕ್ಕೆ ೩೦ ರೂ.ಗಳನ್ನು ತರಬೇಕು. ಇದು ಸಾರಿಗೆಯಿಂದಾದ ದೌರ್ಬಲ್ಯ; ಇದನ್ನು ನಿವಾರಿಸಲು ಬಿಹಾರವು ತನಗೆ ಸಾಧ್ಯವಿಲ್ಲವೆಂದು ಹೇಳುತ್ತದೆ.

ಇಂತಹ ಸಾಧನಗಳಿಂದಲೇ ಗ್ರಾಮಕೈಗಾರಿಕೆಗಳ ಸ್ವಾಭಾವಿಕವಾದ ಬಲವು ಕುಗ್ಗುವಂತೆ ಮಾಡಲಾಗುತ್ತಿದೆ; ಮತ್ತು ಅವು ಈ ಸಾಧನಗಳಿಗೆ ಸೋತು ನಾಶವಾಗಿ ಹೋಗುವುದು ಗ್ರಾಮಕೈಗಾರಿಕೆಗಳ ದೌರ್ಬಲ್ಯದಿಂದ ಎಂದು ಎಣಿಸಲಾಗುತ್ತಿದೆ.

ಇಂತಹ ಪಕ್ಷಪಾತಗಳನ್ನು ಹೋಗಲಾಡಿಸಲು ಸರಿಯಾದ ಲಕ್ಷ್ಯಕೊಡುವುದು ಅಗತ್ಯ. ಮತ್ತು ಮಿಲ್ಲುಗಳಿಗೆ ಉಪಕಾರವಾಗುವಂತಹ ಎಲ್ಲ ಖರ್ಚುಗಳನ್ನೂ ಮಿಲ್ಲಿನ ಮಾಲಕದಾರರ ಮೇಲೆ ಹಾಕಿದ ತೆರಿಗೆಯಿಂದ ನಡೆಸಬೇಕಲ್ಲದೆ ಸಾಮಾನ್ಯ ತೆರಿಗೆಯಿಂದಲ್ಲ. ಹಾಗೆ ಮಾಡುವುದರಿಂದ ಮಾತ್ರ ಬೇರೆ ಬೇರೆ ತೆರದ ಉತ್ಪಾದನೆಗಳಲ್ಲಿ ನ್ಯಾಯಬದ್ಧ ಪ್ರಮಾಣವಿರುವಂತೆ ಮಾಡಲಾದೀತು.

ಜೈನ ವ್ಯಾಪಾರಿಯೊಬ್ಬನ ಸಾಮಾಜಿಕ ಹೊಣೆಯ ರೀತಿ

ಕಚ್ಛ ದೇಶದಲ್ಲಿ ಭದ್ರೇಶ್ವರವೆಂಬ ಒಂದು ಸುಂದರವಾದ ನಗರವಿತ್ತು.

ಅಸ್ತಿ ಭದ್ರೇಶ್ವರ ನಾಮಧೇಯಂ
ಪುರಂ ವರಂ ಕಚ್ಛಕೃತೈಕ ಶೋಭನಂ ॥
ಸರ್ವಾರ್ಥಸಂದರ್ಶನ-ಜಾತಶೋಭಂ ॥೨-೧॥

ಹಗಲೂ ರಾತ್ರಿಯೂ ಹೊಡೆಯುವ ಆ ನಗರದ ದೇವಾಲಯಗಳ ಗಂಟೆಗಳು ಕಲಿಯ ಮೈಯಲ್ಲಿ ನಡುವ ಮುಳ್ಳುಗಳಾಗಿದ್ದವು.

ಸಕ್ತಂದಿವಂ ದೈವತಮಂದಿರೇಷು
ಘಂಟಾರವಾದರ್ಶರಮಃಷ್ಯ ಚಾಸೀತ್ ॥೨-೩॥

ಆ ನಗರದ ತರುಣರು ದೃಢಕಾಯರೂ ಸುಂದರರೂ ಆಗಿದ್ದರು. ಅವರನ್ನು ಕಂಡರೆ ಶಿವನ ಮೇಲೆ ಕೋಪಿಸಿ ಜಯವನ್ನು ಸಂಪಾದಿಸಬೇಕೆಂದು ಮನ್ಮಥನು ಸಾವಿರಾರು ರೂಪಗಳಿಂದ ಪ್ರಕಟವಾದಂತೆ ತೋರುತ್ತಿತ್ತು.

ಮಹೇಶ್ವರಸ್ಯೈಕ ಜಯಾಯ ಕಾಮಃ
ಚಕಾರ ರೂಪಾಣಿ ಸಹಸ್ರಶೋಽಪಿ ।
ಯತ್ರಾಪ್ಯತಾಕಾರ ವಿಶೇಷ ಭಾಜಾಂ
ದಂಭೇನ ರಂಗತ್ತರುಣವ್ರಜಾನಾಂ ॥೨-೬॥

ಬೆಳದಿಂಗಳ ರಾತ್ರಿಗಳಲ್ಲಿ ನಾಗರಿಕ ತರುಣಿಯರು ಮಧುರತಮವಾದ ಹಾಡುಗಳನ್ನು ಹಾಡುತ್ತಿದ್ದರು. ಆ ನಗರದ ಗಗನಚುಂಬಿಯಾದ ಸೌಧಗಳ ಮೇಲೆ ತನ್ನ ಸಂಗೀತ ಮತ್ತು ಹರಿಣವು ಮುಂದೆ ಹೆಜ್ಜೆ ಹಾಕದೆ ನಿಲ್ಲುವುದನ್ನು ತಡೆಯುವುದು ಚಂದ್ರನಿಗೆ ಬಹಳ ಕಷ್ಟವಾಗುತ್ತಿತ್ತು.

ನಿಶಾಸು ಸೌಧೋಪರಿ ಸಂಸ್ಥಿತಾನಾಂ
ಮೃಗೀದೃಶಾಂ ಯತ್ರ ಚ ಚಾರುಗಾನಂ ।
ಆಕರ್ಣಯಂತಂ ಸ್ವಮೃಗಂ ಸುಧಾಂಶು
ರ್ವಾರ್ತಾಯ ಕೃಚ್ಛ್ರಾತ್ತರಯಾಂ ಬಭೂವ ॥೨-೮॥

ಭದ್ರೇಶ್ವರದಲ್ಲಿ ಬಹಳ ಶ್ರೀಮಾಲಿ ವಣಿಕರಿದ್ದರು. ಅವರು ವಿಶ್ವಮಾತೆಯ ಮಾಲೆಯಿಂದ ತಮ್ಮ ಕುಲವು ಜನಿಸಿತೆಂದು ಹೇಳುತ್ತಿದ್ದರು. ಜಗಡುವೆಂಬವನು ಅವರ ಮುಖಂಡನಾಗಿದ್ದನು. ಪರದೇಶಗಳೊಡನೆ ವ್ಯಾಪಾರ ಮಾಡಿ ಅವನು ವಿಪುಲಧನವನ್ನು ಸಂಗ್ರಹಿಸಿದ್ದನು. ಅನೇಕ ಯಾತ್ರಿಕರೊಡನೆ ಅವನ ಜೈನರ ಯಾತ್ರಾಸ್ಥಳವಾದ ಶತ್ರುಂಜಯ ಮತ್ತು ಗಿರ್ನಾರ ಮೊದಲಾದವುಗಳಿಗೆ ಭೆಟ್ಟಿಯಿತ್ತನು.

ಅಸಂಖ್ಯಸಂಘ ಲೋಕೇನ ಸಮಂ ಯಾತ್ರಾಂ
ವಿಧಾಯ ಸಃ । ಶತ್ರುಂಜಯಂ ರೈವತಕಂ
ಪ್ರಾಪ ಚಾತ್ಯುತ್ಸವಂ ವರಂ ॥೬-೩೦॥

ಸಂಘತಿಯ ಅಶ್ವಗಳ, ಹಸ್ತಿಗಳ ಮತ್ತು ರಥಗಳ ಸಂಚಲನದಿಂದೆದ್ದ ಧೂಳು ಮುಗಿಲು ಮುಟ್ಟಿತು; ದೇವಾಂಗನೆಯರ [illegible]ಗಳು ಕಡಿದು ಹೋದವು; ಅವುಗಳಲ್ಲಿ ಸೂರ್ಯರಶ್ಮಿಗಳು ಸೂರ್ಯನ ರಥವನ್ನು ಎಳೆಯಲಾರದಾದವು.

ತಥಾ ಚಚಾಲ ನದೀ ತೀರೇ ಸಂಘಜಂ ಪಾಂಸುಜಾಂ
ರಜಃ । ಯಥಾಶ್ವ ಮಗ್ನ ಮರ್ಕಾಶ್ವಾ
ರಥಮೂಹುಃ ಕಥಂಚನ ॥೬-೩೪॥

ಅವನು ಮುಸ್ಲಿಮರಿಂದಲೂ ಇತರರಿಂದಲೂ ಧನವನ್ನು ಸಂಪಾದಿಸಿದ್ದರಿಂದ ದೇವಾಲಯಗಳ ಜೊತೆಗೆ ಮಸೀದೆಯೊಂದನ್ನೂ ಕಟ್ಟಿಸಿದನು.

ಮಸೀತಿಕಾರಯನ್ಮಾಸ್ತಿಮಲೀಸಂಜ್ಞಿತಾ
ಮಸೌ । ಭದ್ರೇಶ್ವರಪುರೇ ಮ್ಲೇಚ್ಛ
ಲಕ್ಷ್ಮೀ ಕಾರಣತಃ ಖಲು ॥೬-೬೪॥

ಜಗಡುವು ತಾನು ಭೆಟ್ಟಿಯಿತ್ತ ಪ್ರತಿಯೊಂದು ಹಳ್ಳಿ ಪಟ್ಟಣದಲ್ಲೂ ಬಾವಿ ತೋಡಿಸಿದನು.

ಶತಶಃ ಕಾರಯಾಮಾಸ ಗ್ರಾಮೇ ಗ್ರಾಮೇ
ಪುರೇ ಪುರೇ । ಸುಧಾಸ್ವಾದು ಜಲಾ
ವಾಪೀರ್ಜಗಡೂಃ ಕ್ಷಿತಿಭೂಷಣಂ ॥೬-೬೫॥

ಒಂದು ದಿನ, ೧೩೧೨ನೆಯ ಸಂವತ್ಸರದಲ್ಲಿ ಜೈನ ಮುನಿಯೊಬ್ಬನು ಜಗಡುವನ್ನು ಕುರಿತು, "ದೇವಪ್ರಿಯನೆ, ಧನಿಕನಿಗೆ ಸಾಮಾಜಿಕ ಹೊಣೆಯಿದೆ; ಬಹಳ ಕಷ್ಟದ ಕಾಲ ನಮ್ಮ ಮುಂದಿದೆ. ಆಗ ನಿನಗೆ ನಿನ್ನ ಆ ಹೊಣೆಯನ್ನು ನಿರ್ವಹಿಸಲು ಅತ್ಯಂತ ಉತ್ತಮವಾದ ಅವಕಾಶ ಒದಗಿಬರುತ್ತದೆ. ಮನುಷ್ಯನಿಗೆ ಪ್ರಿಯವಾದ ಸರ್ವವನ್ನೂ ಯಾರ ಪ್ರೀತಿಗಾಗಿ ಮಹಾವೀರನು ತ್ಯಜಿಸಿದನೋ ಆ ಸಮಸ್ತ ಚರಾಚರಗಳ ಸೇವೆಮಾಡುವ ಸುಸಂದರ್ಭ ನಿನಗೆ ಸಿಕ್ಕಲಿದೆ. ೧೩೧೨ರ ಬಳಿಕ, ಎಂದರೆ ಈ ವರ್ಷ ಮುಗಿದ ಮೇಲೆ ಮೂರು ವರ್ಷಗಳ ವರೆಗೆ ಕ್ಷಾಮ ಬಂದು ನಿಲ್ಲಲಿದೆ.

ದ್ವಿಚಂದ್ರಾಗ್ನಿ ಶಶಾಂಕೈಕ ವರ್ಷೇಷು
ವ್ಯತೀತೇಷ್ವಥ ವಿಕ್ರಮಾತ್ ।
ದುರ್ಭಿಕ್ಷಂ ಸರ್ವತ್ರ ಭಾವಿ
ಭಾವಿ ವರ್ಷತ್ರಯಾವಧಿ ॥೬-೬೮॥

"ಆದುದರಿಂದ ನೀನು ದಯವಿಟ್ಟು ದೇಶದ ಮೂಲೆ ಮೂಲೆಗೂ ನಿನ್ನ ಪ್ರತಿನಿಧಿಗಳನ್ನು ಕಳುಹಿಸು ಮತ್ತು ಅವರ ಮೂಲಕ ನಾಡಿನ ಸಂತೆಗೆ ಬಳ್ಳಿರುವ ಪ್ರತಿಯೊಂದು ಧಾನ್ಯ ಕಣವನ್ನೂ ಸಂಗ್ರಹಿಸಿಡು.

ಪ್ರೇಷ್ಯಾಖಿಲೇಷು ದೇಶೇಷು
ನಿಜಗ್ರಾಮಾನ್ ಪೂರುಷಾನ್ ।
ಸರ್ವ[illegible] ಧಾನ್ಯಾನಾಂ
ತ್ವಂ ಕೃತ್ವಾಚಯ ಸಂಗ್ರಹಂ ॥

"ಕ್ಷಾಮ ಬಂದೊಡನೆ ಜನರೆದುರು ನಿನ್ನ ಸಂಗ್ರಹವನ್ನು ತೆರೆದಿಡು ಮತ್ತು ಹೀಗೆ ಕ್ಷೀರಸಾಗರದಲೆಯಷ್ಟು ಬೆಳ್ಳಗಿರುವ ಕೀರ್ತಿಯನ್ನು ಪಡೆ."

ಕ್ಷೀರೋದವೀಚಿವಿಮಲಂ ತ್ವಮರ್ಜಯ ಯಶೋಧನಂ । ಸಮಗ್ರ ಜಗತೀ ಲೋಕಸಂಜೀವನ ನಿದಾನತಃ ॥೬-೭೮॥

ಹೀಗೆ ಜಗಡುವು ಬಹಳ ಧಾನ್ಯವನ್ನು ಸಂಗ್ರಹಿಸಿದನು. ಕ್ಷಾಮವು ತಲೆದೋರಿದೊಡನೆ ದೀನದರಿದ್ರರಿಗೆ ಅದನ್ನು ಹಂಚಿದನು.

ಪ್ರಚಕ್ರಮೇ ಕಣಾನ್ ದಾತುಮಯಂ
ಸೋಲಕನಾಭವಃ ದುರ್ಭಿಕ್ಷ
ಪೀಡ್ಯಮಾನಾಭ್ಯೋ ಜನತಾಭ್ಯೋ
ಕೃಪಾನಿಧಿಃ ॥ ೬-೭೪ ॥

ಎರಡುವರ್ಷ ಕ್ಷಾಮದ ನಂತರ ಚಾಲುಕ್ಯ ರಾಜನಾದ ಗುಜರಾತಿನ ವಿಶಾಲದೇವನು ಕೂಡ ತತ್ತರಿಸಿದನು; ಜಗಡುವನ್ನು ತನ ಆಸ್ಥಾನಕ್ಕೆ ಕರೆಸಿ ಒಳ್ಳೆಯ ಧಾನ್ಯವನ್ನು ಬೇಡಿದನು; ಏಕೆಂದರೆ, ಜಗಡುವು ೭೦೦ ಕಣಜಗಳಲ್ಲಿ ಧಾನ್ಯವನ್ನು ಸಂಗ್ರಹಿಸಿಟ್ಟದ್ದನೆಂದು ಅವನು ಮೊದಲೇ ಕೇಳಿದ್ದನು.

ಸಪ್ತಾಗ್ರ ಕಣಕೋಷ್ಠಾಃ
ಶತಾನ್ಯ[illegible]
ಶ್ರುತ್ವಾ ಮಯಶ್ಚ ತ್ವಮಾಹೂತಃ
ಸಂಗೃಹೀತಂ ಕಣಕಾಂಕ್ಷಿಣಾ ॥ ೬-೮೪॥

ಜಗಡುವು ಆಗ 'ದೇವಾ ನಾನು ನನ್ನದೆಂದು ಎಲ್ಲಿಯೂ ಒಂದು ಕಣ ಧಾನ್ಯವನ್ನೂ ಇಟ್ಟಿಲ್ಲ' ಎಂದನು.

ಊಚೇ ನಾಥ ನ ಸಂತ್ಯತ್ರ ಮಮ ಕ್ವಾಪಿ
ಕಣಾಃ ಖಲು ॥೬-೮೫॥

"ನನ್ನ ಮಾತಿನಲ್ಲಿ ನಿನಗೆ ಸಂದೇಹ ತೋರಿದರೆ ಕಣಜಗಳಲ್ಲಿ ಇಟ್ಟ ಗೆಗಳೊಳಗೆ ಇಟ್ಟಿರುವ ತಾಮ್ರಶಾಸನಗಳನ್ನು ಬೇಕಾದರೆ ನೋಡು"

ಮದ್ವಾಕ್ಯೇ ಯದಿ ಸಂದೇಹಃ ಕಣಕೋಷ್ಠೇ
ಘಟೇಷ್ವಪಿ ಇಷ್ಟಕಾಂತಃಸ್ಥ
ಸತ್ತಾಮ್ರಪತ್ರವರ್ಣಾನ್ ವಿಲೋಕಯ ॥
॥೬-೮೬॥

ವಿಶಾಲದೇವನು ಪರೀಕ್ಷಿಸಿದಾಗ
ಜಗಡೂಕಲ್ಪಯ[illegible] ರಂಕಾರ್ಥಂ ಹಿ
ಕಣಾನಮೂನ್ ॥೬-೮೮॥

"ಜಗಡುವು ಬಡವರಿಗಾಗಿ ಆಹಾರಧಾನ್ಯವನ್ನು ಕೊಟ್ಟುಬಿಟ್ಟನು" ಎಂಬ ಶಾಸನವನ್ನು ಕಂಡನು.

"ಆದುದರಿಂದ, ದೇವಾ, ಉಪವಾಸದಿಂದ ಯಾವನಾದರೂ ಸತ್ತರೆ ನಾನು ಅವನನ್ನು ಕೊಂದ ಪಾಪಕ್ಕೆ ಗುರಿಯಾಗುತ್ತೇನೆ" ಎಂದು ಜಗಡುವು ವಿಶಾಲ ದೇವನಿಗೆ ಹೇಳಿದನು.

ತನ್ನೇ ಪಾಪಂ ಮ್ರಿಯಾತೇ ಚೇಜ್ಜನಾ
ದುರ್ಭಿಕ್ಷ ಪೀಡಿತಾಃ ॥೬-೮೯॥

ಅನಂತರ ಅವನು ೮೦೦೦ ಚೀಲ ಧಾನ್ಯಗಳನ್ನು ಬಡವರಿಗೆ ದಾನ ಮಾಡಲು ವಿಶಾಲದೇವನಿಗೆ ಕೊಟ್ಟನು.

ದದಾವಷ್ಟ ಸಹಸ್ರಾಣಿ ಸ ತಸ್ಮೈ ಕಣ
ಮೂಟಕಾನ್ । ಶ್ರೀಮಾಲಾನ್ವಯ
ಕೋಟೀರಸ್ತಥಾ ವೀರತ್ವಮಾಶ್ರಿತಃ ॥೬-೯೦॥

ಸಿಂಧು ಉಜ್ಜಯಿನಿ ಕಾಶಿ, ಕ್ಯಾಂಥಿಲ ಮತ್ತು ದಿಲ್ಲಿಯ ರಾಜರಿಗೆ ಅದೇ ರೀತಿಯಾಗಿ ಸಹಾಯಮಾಡಿದನು. ಅವನು ೧೧೨ ದಾನಶಾಲೆಗಳನ್ನು ಸ್ಥಾಪಿಸಿದನು.

ದ್ವಾದಶಾಭ್ಯಧಿಕಂ ದಾನಶಾಲಾಶತಂ
ಮುದಾರಧೀಃ । ಜಗಡೂಃ ಸುಕೃತಾ
ಧಾರೋ ಜಗಜ್ಜೀವಾತುರಾತನೋತ್ ॥
॥೬—೧೩೦॥

ಬೇಡುವುದಕ್ಕಿಂತ ಸಾಯುವುದೇ ಮೇಲೆಂಬ ಗೌರವಸ್ಥರ ಮನೆಗಳಿಗೆ ಉಂಡಿಗಳೊಳಗೆ ಬಂಗಾರದ ನಾಣ್ಯವಿಟ್ಟು ಕೊಟ್ಟು ಕಳುಹಿದನು.

ಸ್ವರ್ಣದೀನಾರ ಸಂಯುಕ್ತಾನ್
ಲಜ್ಜಾಪಿಂಡಾನ್ ಸ ಕೋಟಿಶಃ ।
ನಿಶಾಯಾಮರ್ಪಯಾಮಾಸ
ಕುಲೀನಾಯ ಜನಾಯ ಚ ॥೬-೧೩೦॥

ಹೀಗೆ ಅವನು ಕ್ಷಾಮ ಕಾಲದಲ್ಲಿ ೯,೯೯,೦೦೦ ಚೀಲ ಧಾನ್ಯವನ್ನೂ ೧೮ ಕೋಟಿ ರೂಪಾಯಿಗಳನ್ನು ಹಂಚಿದನು.

ನವನವತಿ ಸಹಸ್ರಯುತಾನ್ನವ ಲಕ್ಷಾನ್
ಧಾನ್ಯಮೂಟಕಾನಾಂ ಸಃ ।
ಅಷ್ಟಾದಶ ಕೋಟೀರಥ[illegible]
ದತ್ತ ದುರ್ಭಿಕ್ಷೇ ॥೬-೧೩೩॥

ವಿ. ಜೆ. ಬಿ.

ಕರ್ನಾಟಕ

ಧಾರವಾಡ

ಹಿರೇಹಾಳ ಪೋಲೀಸ ಠಾಣೆಯ ಕಾನ್ಸ್‌ಟೇಬಲ್ ಸಣ್ಣಮೂಕಪ್ಪ ಇವರು ಮೂರು ಗಾಡಿ ಹತ್ತಿಕಾಳನ್ನು ಜಪ್ತ ಮಾಡಿಕೊಂಡು ಹೋದರೆಂದು ತಿಳಿಯುತ್ತದೆ.

ಗದಗ ತಾಲೂಕಿನ ಮಲ್ಲಸಮುದ್ರದಲ್ಲಿ ಕ್ಷಯ ರೋಗ ನಿವಾರಣಾಲಯಕ್ಕೆ ಒಂದು ಭವ್ಯವಾದ ೧೮೦ ಎಕರೆ ಜಮೀನು ದೊರೆತಿದೆ. ಇದೊಳ್ಳೆ ಉತ್ತಮ ಸ್ಥಳವಿದ್ದು ನೈಸರ್ಗಿಕ ಅನುಕೂಲತೆಗಳೂ ಇವೆ.

ಧಾರವಾಡ ಬೋರ್ಸ್ಟಲ್ ಸ್ಕೂಲಿಗೆ ಮುಂಬಯಿ ಸರಕಾರದವರು ಎಸ್. ಕೆ. ಬಣಕಾರ, ರಾ. ಸಾ. ಡಿ. ಎಲ್ ಪಾಟೀಲ ಎಂ. ಎಂ. ಹನಸಿಯವರನ್ನು ಸರಕಾರೇತರ ಸಂದರ್ಶಕರನ್ನಾಗಿ ನೇಮಿಸಿದ್ದಾರೆ.

ಗದಗದ ಪ್ರಸಿದ್ಧ ವ್ಯಾಪಾರಸ್ಥರೂ ಉತ್ಸಾಹಿ ತರುಣ ಮುಂದಾಳುಗಳೂ ಆದ ಶ್ರೀ ಮಹಾದೇವಪ್ಪ ಕರಡಿಗುಡ್ಡ ಅವರು ಕಳೆದ ಬುಧವಾರ ಸಾಯಂಕಾಲ ಅಕಸ್ಮಾತ್ ಮೋಟಾರ ಅಪಘಾತದಲ್ಲಿ ಸಿಕ್ಕು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಹುಬ್ಬಳ್ಳಿಯ ಪ್ರಮುಖ ವ್ಯಾಪಾರಸ್ಥರೂ ನಾಗರಿಕರೂ ಆಗಿದ್ದ ರಾವಸಾಹೇಬ ಗಣಪತರಾವ ಮಡಿಮನ್ ಇವರು ೧೦ ನೇ ತಾರೀಖು ರಾತ್ರಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಅನೇಕ ಸಂಸ್ಥೆಗಳಿಗೆ ಉದಾರ ಹಸ್ತದಿಂದ ಸಹಾಯಮಾಡಿದ್ದಾರೆ. ಇವರ ಸ್ಮಶಾನ ಯಾತ್ರೆಗೆ ಅನೇಕರು ನೆರೆದಿದ್ದರು. ಇವರ ನಿಧನದ ನಿಮಿತ್ತ ಹಲವಾರು ಸಂಘ ಸಂಸ್ಥೆಗಳು ಮುಚ್ಚಿದ್ದವು.

ಹುಬ್ಬಳ್ಳಿ ಭಾರತ ಗಿರಣಿಯ ವ್ಯವಸ್ಥಾಪಕರು ಇದೇ ತಿಂಗಳ ೧೦ರಿಂದ ತಮ್ಮ ನೇಗಿಯ ಶಾಖೆಯ ರಾತ್ರಿ ಪಾಳಿಯನ್ನು ಬಂದುಮಾಡಿದ್ದರಿಂದ ೪೦೦ ಜನ ನಿರುದ್ಯೋಗಿಗಳಾಗಿರುವರು. ಗಿರಣಿ ಕಾಮಗಾರರು ಇದನ್ನು ಪ್ರತಿಭಟಿಸಲು ಕೂಲಿಕಾರರನ್ನು ಬೋಧಿಸುತ್ತಿರುವರು. ದಂಗೆಯಾಗಬಹುದೆಂದು ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಕಲಮಿನನ್ವಯ ನೋಟೀಸ ಪ್ರಯೋಗಿಸಿ ಗಿರಣಿಯಿಂದ ಸುತ್ತ ನಾಲ್ಕು ಫರ್ಲಾಂಗ ಯಾರೂ ಸಭೆ ಮೊದಲಾದವುಗಳನ್ನು ಮಾಡಬಾರದೆಂದು ವಿಧಿಸಿದ್ದಾರೆ.

ಅಮರಗೋಳದಲ್ಲಿ ಕಳೆದ ಶುಕ್ರವಾರ ಒಬ್ಬ ಹೆಂಗಸಿನ ಮತ್ತು ಒಬ್ಬ ಗಂಡಸಿನ ಕೊಲೆಯಾಗಿದೆ. ವ್ಯಭಿಚಾರದ ಸಂಶಯವೇ ಕಾರಣವೆಂದು ಹೇಳಲಾಗುವದು.

೯ ನೇ ತಾರೀಖು ಹುಬ್ಬಳ್ಳಿ ಹರಿಹರ ಲೋಕಲ್ ಗಾಡಿಯಲ್ಲಿ ಜನದಟ್ಟಣೆ ಬಹಳಿದ್ದುದರಿಂದ ಕುಂದಗೋಳದಿಂದ ಅನೇಕರು ಕಾಲಮಣೆಯ ಮೇಲೆ ಪ್ರವಾಸ ಮಾಡುತ್ತಿದ್ದರು. ಆಗ ಹೆಂಗಸೊಬ್ಬಳು ಕೆಳಗೆ ಬಿದ್ದು ಬಹಳ ಗಾಯಗೊಂಡಳು. ಅವಳನ್ನು ಹುಬ್ಬಳ್ಳಿ ಆಸ್ಪತ್ರೆಯಲ್ಲಿ ದಾಖಲಾಗಿದೆ.

ದಿವಂಗತ ಹರ್ಡೇಕರ ಮಂಜಪ್ಪನವರ ಸ್ಮಾರಕ ಸಮಿತಿಯವರು ಅವರ ಸ್ಮಾರಕ ಗ್ರಂಥ ಹೊರಡಿಸಲು ಶ್ರೀ ಕೆ. ವಿ. ಪುಟ್ಟಪ್ಪ ಡಾ. ನಂದೀಮಠ ಮೊದಲಾದವರನ್ನೊಳಗೊಂಡ ಜನರ ಒಂದು ಸಮಿತಿಯನ್ನು ನೇಮಿಸಿದ್ದಾರೆ. ಲೇಖನಗಳನ್ನು ಬರೆಯಲೊಪ್ಪಿದವರು ಕೂಡಲೆ ಲೇಖನಗಳನ್ನು ಕಳಿಸಬೇಕಾಗಿ ಸ್ಮಾರಕ ಸಮಿತಿಯವರು ಬಿನ್ನವಿಸಿದ್ದಾರೆ.

ವಿಜಾಪುರ

ಮುಂಬಯಿ ಸರಕಾರದ ಅರ್ಥಸಚಿವರಾದ ಶ್ರೀ ವೈಕುಂಠಲಾಲ ಮೆಹತಾರವರು ಬಾಗಲಕೋಟೆಯಲ್ಲಿಯ ಗುಜರಾಥಿ ಶಾಲೆಯ ಉದ್ಘಾಟನ ಸಮಾರಂಭವನ್ನು ಶನಿವಾರ ೧೦ ನೇ ತಾರೀಕಿನ ದಿವಸ ಜರಗಿಸಿದರು. ಗುಜರಾಥಿಗಳು ವಾಸಿಸುವ ಸ್ಥಳಗಳಲ್ಲಿಯ ಜನರೊಡನೆ ಸಮರಸರಾಗಿರಬೇಕು ತಮ್ಮ ಶಾಲೆಗಳಲ್ಲಿ ಆಯಾ ಪ್ರಾಂತ ಭಾಷೆಗಳಿಗೆ ಮನ್ನಣೆ ಕೊಡಬೇಕೆಂಬ ಮುಂತಾಗಿ ಮಾನ್ಯ ಮಂತ್ರಿಗಳು ಉಪದೇಶಿಸಿದರು.

ಮಾನ್ಯ ಮಂತ್ರಿಗಳು ಕಲಾದಗಿಗೆ ಹೋಗಿ ಚರಖಾ ಸಂಘದವರು ಏರ್ಪಡಿಸಿದ ನೂಲುವ ಪ್ರದರ್ಶನವನ್ನು ನೋಡಿಕೊಂಡು ಬಂದರು. ನೂಲುವ ಹೆಣ್ಣುಮಕ್ಕಳ ಕೆಲವು ಹಣದಲ್ಲಿ ಅವರಿಗೆ ಸೀರೆಗಳನ್ನು ಹಂಚಿದರು.

ಬಾಗಲಕೋಟೆಯ ಮುನಸಿಪಾಲಟಿಗೆ ಶ್ರೀ ಶಂಕರರಾವ ಏಡಕೆಯವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಭಂಗಿ ಜನರಿಗೆ ಕೊಡತಕ್ಕ ಅಂತರಿಕ ಪರಿಹಾರದ ೬೦ ರೂಪಾಯಿಗಳನ್ನು ಪ್ರತಿ ತಿಂಗಳದ ೫ ರೂ. ಕಂತಿನಂತೆ ಕೊಡಬೇಕೆಂದು ಮುನಿಸಿಪಾಲಟಿಯವರು ನಿರ್ಧರಿಸಿರುವರು.

ಮುಂಬಯಿಯ ಶ್ರೀ ಕೆ. ಎಚ್. ಕಬ್ಬೂರರು ಇಪ್ಪತ್ತು ಸಾವಿರ ರೂಪಾಯಿಗಳನ್ನು ದಾನ ಮಾಡಿದ ವಿಜಾಪುರದ ಹರಿಜನ ಸೇವಕ ಸಂಘದ ಹರಿಜನ ವಿದ್ಯಾರ್ಥಿ ನಿಲಯದ ವಸತಿ ಗೃಹ ಕಟ್ಟಿಸಲು ಸರಕಾರದವರು ಕೆಲವು ಕರಾರುಗಳನ್ನು ಹಾಕಿ ಸುಮಾರು ೬೦೦೦ ಚೌರಸ ಗಜ ಭೂಮಿಯನ್ನು ಕೊಟ್ಟಿದ್ದಾರೆಂದು ತಿಳಿಯುತ್ತದೆ.

ಬೆಳಗಾವಿ

ಬೆಳಗಾವಿ ಉತ್ತರಭಾಗದ ಪರವಾಗಿ ನಡೆದ ಮುಂಬಯಿ ಶಾಸನಸಭೆಯ ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಧಿಕೃತ ಉಮೇದವಾರ ಶ್ರೀ ವೆಂಕರೆಡ್ಡಿ ಹೂಲಿಯವರು ೧೮೩೧೧ ಮತಗಳನ್ನು ಪಡೆದು ಆರಿಸಿಬಂದಿದ್ದಾರೆ. ಪ್ರತಿಸ್ಪರ್ಧಿ ನಾವಲಗಟ್ಟಿಯವರಿಗೆ ೮೭೪೯ ಮತದಿತ್ತು ಪರಾಜಯ ಹೊಂದಿದರು. ೫೬೦ ಮತಗಳು ರದ್ದಾದವು.

ಶಿರಸಂಗಿಯಿಂದ ಲಮಾಣಿಜನರು ಕಳವಿನಿಂದ ತಿರುವಿಕೊಂಡು ಹೋಗುತ್ತಿದ್ದ ಮೂರು ದೊಡ್ಡ ಎಮ್ಮೆ ಒಂದು ಸಣ್ಣಕರ, ೬ ಹೋರಿ, ೧೧ ಆಕಳಗಳನ್ನು ಶಿರಸಂಗಿ ಕೊಂಡವಾಡೆಯಲ್ಲಿ ಇಟ್ಟಿರುತ್ತದೆ. ಆರೋಪಿಗಳು ಫರಾರಿಯಾಗಿರುವರು. ಆಯಾ ದನಗಳ ಒಡೆಯರು ಬಂದು ಅವುಗಳನ್ನು ಬಿಡಿಸಿಕೊಂಡು ಹೋಗಬೇಕೆಂದು ಪೋಲೀಸ ಪಾಟೀಲರು ತಿಳಿಸಿದ್ದಾರೆ.

೨೦ ನೇ ತಾರೀಖು ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸಮಂಡಳದ ಪ್ರಥಮ ಸಾಧಾರಣಸಭೆ ಕಿತ್ತೂರ ಕಲ್ಮಠದಲ್ಲಿ ಕೂಡುವದು, ವರದಿ ಓದುವದು. ಹಿಂದಿನ ಲೆಕ್ಕದ ಮಂಜೂರಿ ಹೊಸವರ್ಷದ ಕಮಿಟಿ ನೇಮಕ ಮೊದಲಾದ ವಿಷಯಗಳ ವಿಚಾರವಾಗುವದು.

ಬೆಳಗಾವಿ ಜಿಲ್ಹೆಯ ಪ್ರಮುಖ ಕಾಂಗ್ರೆಸ ಕಾರ್ಯಕರ್ತರಾಗಿದ್ದ ಶ್ರೀ ದ. ಲ. ಅಧ್ಯಾಪಕ ಇವರು ಕಳೆದ ಶನಿವಾರ ಉದರರೋಗದಿಂದ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ೧೯೩೦ ನೇ ಇಸ್ವಿಯಿಂದ ಇವರು ಕಾಂಗ್ರೆಸ ಚಟುವಟಿಕೆಗಳಲ್ಲಿ ಪ್ರತ್ಯಕ್ಷ ಭಾಗವಹಿಸಹತ್ತಿ ಈ ವರೆಗೆ ನಾಲ್ಕುಸಲ ತುರಂಗಕ್ಕೆ ಹೋಗಿದ್ದರು. ಇವರ ನಿಧನದಿಂದ ಕರ್ನಾಟಕಕ್ಕೆ ತುಂಬಿಬರಲಾರದ ಹಾನಿಯಾಗಿದೆ.

ಉತ್ತರ ಕನ್ನಡ

ಉತ್ತರಕನ್ನಡ ಜಿಲ್ಹೆಯ ಕಾರವಾರ, ನಂದನಗದ್ದೆ ಗೋಕರ್ಣ ಕುಮಟಾ ಸಿರಸಿ ಸಂಕೇರಿಬಾಗ ಹಳಿಯಾಳ ಹೊನ್ನಾವರ ಘಟಕಗಳಲ್ಲಿ ವಿದ್ಯುದ್ದೀಪಗಳ ಲಾಯಸೆನ್ಸ ಕೊಡಲು ಸರಕಾರ ನಿರ್ಧರಿಸಿದೆ. ಈ ಲಾಯಸೆನ್ಸ ಪಡೆಯಬಯಸುವವರು ಅವಶ್ಯಕನಮೂನೆಗಳಲ್ಲಿ ಅರ್ಜಿಮಾಡಿಕೊಳ್ಳಬೇಕು. ಸ್ಥಾನಿಕ ಸಂಸ್ಥೆಗಳಿಗೆ ಮತ್ತು ಸ್ಥಳಿಕರಿಂದ ಸ್ಥಾಪಿತವಾದ ಸಹಕಾರ ಸಂಘಗಳಿಗೆ ಪ್ರಾಶಸ್ತ್ಯ ಕೊಡಲಾಗುವದು.

ಕೊಲ್ಹಾಪುರ

ಕೊಲ್ಹಾಪುರದಲ್ಲಿ [illegible] ಮತ್ತು ಶನಿವಾರ [illegible] ಹರಿಜನ ಬಂಧುಗಳು ಅದರಲ್ಲಿ [illegible]ದ್ದರು. ಹರಿಜನರು ಭಜನೆ ಮಾಡಿ [illegible] ದೇವರನ್ನು ಪೂಜಿಸಿದರು.

ಪಂಢರಪುರದ ವಿಠೋಬ ದೇವಾಲಯ [illegible] ಅಲ್ಲಿಯ ಬಡವೆ ಜನರು ವಿರೋಧಿಸಿ [illegible] ವನ್ನು ಹೂಡಿದ್ದರು. ಬಡವೆ ಜನರ ವಿರೋಧವನ್ನು ಶ್ರೀ ಸಾನೇ ಗುರೂಜಿಯವರು [illegible] ಉಪವಾಸದ ಪಾರಣೆ ಮಾಡಿದರು.

ಬಳ್ಳಾರಿ

ಗ್ರಾ ಹರಪನಹಳ್ಳಿ ಹೈಸ್ಕೂಲಿನ ವಾರ್ಷಿಕೋತ್ಸವ ೬ನೇ ತಾರೀಕು [illegible] ತೀರ್ಥ ಚಂದ್ರಶೇಖರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಸಾಂಗವಾಯಿತು. ಡಾ. ಹನುಮಂತರಾವ [illegible] ನವರ ಹಿರಿಯತನದಲ್ಲಿ ಯುವಕರ [illegible] ಸಂಘದ ವಾರ್ಷಿಕೋತ್ಸವವೂ ನಡೆಯಿತು.

ಬಳ್ಳಾರಿಯಲ್ಲಿ ಆಯುರ್ವೇದ ವಿದ್ಯಾಲಯವನ್ನು ಸ್ಥಾಪಿಸಲು ನಿಶ್ಚಯವಾಗಿ [illegible] ಪೇಟೆಯ ಬಾಗಲಿಯಲ್ಲಿ ವಿದ್ಯಾಲಯ [illegible] ಸಲು ಏರ್ಪಾಟುಗಳು ನಡೆದಿವೆ. ಶ್ರೀ ವೇಣುಗೋಪಾಲಾಚಾರ್ಯರು ಮುತವರ್ಜಿಯಲ್ಲಿ ದುಡಿಯುತ್ತಿರುವರು.

ಕನ್ನಡ ಸಂಸ್ಥಾನ

ಫಲ್ಟಣದ ರಾಜಾಸಾಹೇಬರು ಫಲ್ಟಣ ಪ್ರಜಾಪರಿಷತ್ತಿನ ಶ್ರೀ. ಆರ್. ಎಚ್. ತಪಾಸೆ [illegible] ಎಸ್. ವಿ. ಬಾವಡೇಕರರನ್ನು [illegible] ಮತ್ತು ಶಿಕ್ಷಣ ಖಾತೆಗಳ ಮಂತ್ರಿಗಳನ್ನಾಗಿ ನೇಮಿಸಿದ್ದಾರೆ. ಈಗೆರಡು ವರುಷಗಳಿಂದ ಇದ್ದ ರಾಜಕೀಯ ಬಿಕ್ಕಟ್ಟು ಹಿಂದಿನ [illegible] ಮಂತ್ರಿ ಶ್ರೀ. ಎಸ್. ಆರ್. ಭೋಸಲೆಯವರನ್ನು ಅಧಿಕಾರದಿಂದ ತೆಗೆದು ಹಾಕಿದ [illegible] ಬಗೆಹರಿದಂತಾಯಿತು.

ಹಾಸನ ಜಿಲ್ಹೆಯ [illegible] ತಾಲೂಕುಗಳಲ್ಲಿ [illegible] ಅಧಿಕಾರಿಗಳು ಕಟ್ಟುನಿಟ್ಟಿನಿಂದ [illegible] ರೆಂದು ತಿಳಿದುಬಂದಿದೆ ಈ ಬಗೆಯಾಗಿ [illegible] ದಿಂದ ಕಾಳು ಎತ್ತುವದನ್ನು ನಡೆಸಬಾರದೆಂದು ಮೈಸೂರು ಸರಕಾರಕ್ಕೆ ಬಿನ್ನವಿಸಿಕೊಳ್ಳಲಾಗಿದೆ. ಇದರಿಂದ ರೈತರಲ್ಲಿ ಅತ್ಯಂತ ಕಳವಳವುಂಟಾಗಿದೆ

ಘಟನಾ ಸಮಿತಿ

***

ದಿಲ್ಲಿಯಲ್ಲಿ ಅಧಿವೇಶನ ನಡೆಯುತ್ತಿರುವಾಗಿನ ದೃಶ್ಯ.

ಹಿಂದುಸ್ಥಾನ

ಮುಂಬಯಿ

ಕಸ್ತೂರಬಾ ಸ್ಮಾರಕ ನಿಧಿಯ ಟ್ರಸ್ಟಿಗಳ [illegible] ಮತ್ತು [illegible] ಅಧಿಕಾರಿ ಮಂಡಳದ [illegible] ದೇವದಾಸ ಗಾಂಧಿ [illegible] ಪತ್ರಿಕೆಗೆ ಒಪ್ಪಿಗೆ ಕೊಟ್ಟಿರುವರು.

[illegible] ಮುಸಲ್ಮಾನರ [illegible] ಪ್ರತ್ಯೇಕ ಮತ್ತು ಸ್ವತಂತ್ರ [illegible] ಮುಂಬಯಿ [illegible] ಗೊತ್ತುವಳಿಯೂ [illegible]

[illegible] ದಿಂದ ಕಳೆದ ತಿಂಗಳ ಕೊನೆಯಲ್ಲಿ [illegible] ಲಕ್ಷ ರೂ. [illegible] ಪತ್ತೆ ಹಚ್ಚಿದ್ದಾರೆ. [illegible] ಬಂಗಾರ [illegible] ಸಾವಿರ [illegible] ರೂ. ದಂಡ ವಿಧಿಸಲಾಯಿತು.

[illegible] ದಿನಾಲು [illegible] ಕಮಿಟೀ [illegible] ಮಾಡಿದ್ದಾರೆ.

ಮುಂಬಯಿ [illegible] ಅವಧಿಯನ್ನು ಮೇ ೩೦ ರವರೆಗೆ ಬೆಳೆಸಿದ್ದಾರೆ.

ಮುಂಬಯಿ ಹಿಂದೂ ವಿವಾಹ ವಿಚ್ಛೇದನ [illegible] ಗವರ್ನರರ [illegible] ಆದೀಗ ಕಾಯದೆಯಾಗಿ [illegible] ಮೊದಲನೆ [illegible] ವಿವಾಹದಲ್ಲಿ [illegible]

ಮದ್ರಾಸ

[illegible] ಹಿಂದುಸ್ಥಾನದ [illegible] ಸಾಧ್ಯವೆಂದು ಡಾ. ರಾಜೇಂದ್ರ ಪ್ರಸಾದರು ಮದ್ರಾಸಿನಲ್ಲಿ [illegible] ಅ. ಭಾ. [illegible] ಭಾಷಣ ಮಾಡುತ್ತ [illegible] ಮುಖ್ಯ ಮಂತ್ರಿ [illegible] ಸ್ವಾಗತ ಬಯಸಿದರು.

ಮಧ್ಯಪ್ರಾಂತ

[illegible] ಶಿಕ್ಷಕರ [illegible] ಸರಕಾರದವರು [illegible] ಒಂದು ವರ್ಷದ ವರೆಗೆ [illegible] ಶಿಕ್ಷಕರಿಗೆ ತಿಂಗಳಿಗೆ [illegible] ಛತ್ರ [illegible] ಮಂಜೂರ ಮಾಡಿದ್ದಾರೆ. ಸರಕಾರಕ್ಕೆ ಇದರಿಂದ [illegible] ರೂ. [illegible] ಬರುವದು. ಈ ಬಗ್ಗೆ ಎಲ್ಲ [illegible] ಹೆಚ್ಚಿಸಲಾಗುವದು.

ಪಂಜಾಬ

ಅಮೃತಸರದಲ್ಲಿ ೧೨ ನೇ ತಾರೀಕು [illegible] ಹಾಗು [illegible] ನಡೆದವು. [illegible] ಪೋಲೀಸರ ಗೋಳೀಬಾರಿನಲ್ಲಿ [illegible] ಗಾಯಗೊಂಡಿರುವರು. [illegible] ಒಂದು ಕಡೆ [illegible]

ಹೊಸದಿಲ್ಲಿ

ಹಿಂದುಸ್ಥಾನದ ಗ್ರಾಮಾಂತರಗಳಲ್ಲಿ ಹೆಚ್ಚು ಡಾಕ್ಟರರು ದಾಯಿಗಳು ಆಸ್ಪತ್ರೆಗಳು ಮತ್ತು ಆರೋಗ್ಯಾಧಿಕಾರಿಗಳ ಅವಶ್ಯಕತೆ ಬಹಳ [illegible] ಡಾಯರೆಕ್ಟರ ಜನರಲ್‌ರ ಕಚೇರಿಯಲ್ಲಿ [illegible] ಅಭಿಪ್ರಾಯ [illegible] ಈಗಿದ್ದ ಯೋಜನೆಗಳು ಸಾಕಿಷ್ಟಿಲ್ಲ. ಈಗ [illegible] ಸಂಖ್ಯೆಯನ್ನು [illegible] ಕಡಿಮೆ [illegible] ಅಭಿಪ್ರಾಯಪಡುತ್ತಿರುವರು.

[illegible] ಅಪರಾಧಗಳು ಸಂಭವಿಸ [illegible] ಸರಕಾರದವರು ವಿಶೇಷ ಪ್ರಯತ್ನ ನಡೆಸುವರು. ಇದಕ್ಕಾಗಿ ಹೆಚ್ಚು ಪೋಲೀಸ ಅಧಿಕಾರಿಗಳನ್ನು ಶಿಬ್ಬಂದಿಗಳನ್ನು ನೇಮಿಸಲಾಗುವದು. ವಿಶೇಷ ಪಡೆ [illegible] ಹೆಣ್ಣುಮಕ್ಕಳ [illegible] ಸರಕಾರದವರು ಹೆಚ್ಚು ದಕ್ಷತೆ [illegible] ಪ್ರಕಟಿಸಲಾಗಿದೆ.

೧೯೪೭—೧೯೪೮ ರಲ್ಲಿ ಹಿಂದುಸ್ಥಾನದಿಂದ [illegible] ಟನ್ನು [illegible] ಹೊರಗೆ ಕಳಿಸಲು ಗೊತ್ತುಪಡಿಸಲಾಗಿದೆ.

ನವಾನಗರದ ಜಾಮಸಾಹೇಬರು ಸರದಾರ ವಲ್ಲಭಭಾಯಿ ಪಟೇಲ ಮೊದಲಾದವರನ್ನು [illegible] ಗುಜರಾಥ, ಪಶ್ಚಿಮ ಹಿಂದುಸ್ಥಾನ, ರಜಪುತಾನಾ, ಮಧ್ಯ ಹಿಂದುಸ್ಥಾನ ಸಂಸ್ಥಾನಗಳು ಸಾಮೂಹಿಕವಾಗಿ ಘಟನಾ ಸಮಿತಿಯಲ್ಲಿ [illegible] ಬಗ್ಗೆ ಚರ್ಚೆ ಮಾಡಿದರು.

ಕೇರಳದ ಕೆ. ಕೇಳಪ್ಪನವರು ಐಕ್ಯ ಕೇರಳ [illegible] ಕರ್ನಾಟಕ ವಿಭಾಗವನ್ನು [illegible] ಅಭಿಪ್ರಾಯವನ್ನು ಅಧ್ಯಕ್ಷ ಭಾಷಣದಲ್ಲಿ ವ್ಯಕ್ತಪಡಿಸಿದುದನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷ ಡಾ. [illegible] ಗಪ್ಪನವರು ಕೊಡಗಿನ ಪ್ರಮುಖರಾದ ಶ್ರೀ. [illegible] ಇವರು ಪ್ರಕಟನೆಯ ಮೂಲಕ ಖಂಡಿಸಿದ್ದಾರೆ.

ಕಾಂಗ್ರೆಸ್ ಕಾರ್ಯ ಸಮಿತಿಯ ಸಭೆ ಮೇ ೩೧ ಕ್ಕೆ ಕರೆಯಲಾಗಿದೆ.

ಸರಕಾರ ಹಿಂದೂ ಧರ್ಮದಲ್ಲಿ ಕೈಹಾಕಬಾರದೆಂಬ ಬೇಡಿಕೆಯನ್ನು ಮುಂದಿಟ್ಟು ಎಪ್ರಿಲ ೨೪ ನೇ ತಾರೀಕು ಘಟನಾ ಸಮಿತಿಯೆದುರಿಗೆ ಸನಾತನ ಧರ್ಮವೀರ ಶ್ರೀ ಕರಪಾತ್ರಜಿ ಸ್ವಾಮಿ ಮಹಾರಾಜರು ಸತ್ಯಾಗ್ರಹ ಹೂಡಿದರು. ಅವರನ್ನು ಮತ್ತು ಅ. ಭಾ. ಧರ್ಮ ಸಂಘದ ಮಂತ್ರಿಗಳಾದ ಪಂಡಿತ ಸೂರ್ಯನಾಥ ಪಾಂಡೇ ಬ್ರಹ್ಮಚಾರಿ [illegible] ಮತ್ತು ಇತರ ೫೭ ಜನ ಧರ್ಮವೀರರನ್ನು ಬಂಧಿಸಿದರು. ಬಂಧಿಸಲ್ಪಡುವ ಮೊದಲು ಸ್ವಾಮಿಗಳವರು [illegible] ಭಾಷಣ ಮಾಡಿದರು. ಬಂಧನದ ನಿಮಿತ್ತ ದಿಲ್ಲಿಯಲ್ಲಿ ಹರತಾಳ ಆಚರಿಸಲಾಯಿತು. ೫೦೦೦ ಜನ ಈ ಧರ್ಮಯುದ್ಧದಲ್ಲಿ ಸೇರಲು ಸಿದ್ಧರಿದ್ದಾರೆ.

ಎಪ್ರಿಲ ೨೯ ಕ್ಕೆ ಗೋರಖಪುರದ ಕೇದಾರನಾಥ ತ್ರಿಪಾಠಿಗಳ ನೇತೃತ್ವದಲ್ಲಿ ನಡೆದ ಸತ್ಯಾಗ್ರಹದಲ್ಲಿ ೧೫ ಜನ ಸೆರೆ ಹಿಡಿಯಲ್ಪಟ್ಟರು. ಕರಪಾತ್ರಜಿಯವರ ದಂಡವನ್ನು ಕಸಿದುಕೊಂಡು ಮುರಿದದ್ದಕ್ಕಾಗಿ ಸ್ವಾಮಿಯವರು ಉಪವಾಸ ಪ್ರಾರಂಭಿಸಿದ್ದಾರೆ. ಈ ಸತ್ಯಾಗ್ರಹ ಈಗಲೂ ನಡೆಯುತ್ತಿದೆ. ಕರಪಾತ್ರಜಿ ಮೊದಲಾದವರಿಗೆ ಒಂದು ತಿಂಗಳ ಶಿಕ್ಷೆ ವಿಧಿಸಿದ್ದಾರೆ. ಲಾಹೋರ ಜೇಲಿನಲ್ಲಿ ಇವರನ್ನು ಇಡಲಾಗಿದೆ. ಸನ್ಯಾಸ ಧರ್ಮಾನುಸಾರವಾಗಿ ಉಗಿಬಂಡಿಯಲ್ಲಿ ಕೂಡ್ರುವದಿಲ್ಲೆಂದು ಹೇಳಿದರೂ ಬಲಾತ್ಕಾರದಿಂದ ಸ್ವಾಮಿಜಿಯವರನ್ನು ಟ್ರೈನಿನಲ್ಲಿ ಕೂಡ್ರಿಸಿ ಕರೆದುಕೊಂಡು ಹೋದರಂತೆ.

ಬಿಹಾರ

ಬಿಹಾರ ಮತ್ತು ಬಂಗಾಲ ಗಣಿಗಳಲ್ಲಿ ಕೆಲಸ ಮಾಡುತ್ತಿರುವ ಗಣಿ ಕೆಲಸಗಾರರು ಟ್ರಾಲೀ ಮನ್ ಮತ್ತು ವಾಗನ್ ಲೋಡರರ ಮೂಲ ಕೂಲಿಯಲ್ಲಿ ನೂರಕ್ಕೆ ೫೦ ರಷ್ಟು ರೂ. ಹೆಚ್ಚಳ ಮಾಡಬೇಕು. ತಿಂಗಳಿಗೆ ೩೦ ಮತ್ತು ಅದಕ್ಕೆ ಕಡಿಮೆ ಕೂಲಿ ಇರುವವರಿಗೆಲ್ಲ ೧೦೦ ಕ್ಕೆ ೧೫೦ ರಷ್ಟು ತುಟ್ಟಿಭತ್ತೆಯನ್ನು ಕೊಡಬೇಕು ಎಂಬದಾಗಿ ಗಣಿ ಕೆಲಗಾರ ನ್ಯಾಯಮಂಡಳದವರು ತಮ್ಮ ವರದಿಯಲ್ಲಿ ಶಿಫಾರಸು ಮಾಡಿರುವರು. ಪ್ರಾವಿಡೆಂಟ ಫಂಡು ಮತ್ತು ಬೋನಸ್ಸನ್ನೂ ಕೊಡಬೇಕೆಂದು ಬೋರ್ಡಿನವರು ಸೂಚಿಸಿದ್ದಾರೆ.

ಬಂಗಾಲ

ಕಲಕತ್ತಾ ಕಾರಪೊರೇಶನದ ಸಭೆ ೧೨ ನೇ ತಾರೀಕು ಮೇಯರರ ಅಧ್ಯಕ್ಷತೆಯಲ್ಲಿ ನಡೆಯಿತು. ಅಂದಿನ ಮುಂದರಿದ ವಿಶೇಷ ಸಭೆಯಲ್ಲಿ ಬಂಗಾಲವನ್ನು ವಿಭಜಿಸಬೇಕು. ಹಾಗು ಲೀಗ ಮಂತ್ರಿಮಂಡಳವನ್ನು ವಿಸರ್ಜಿಸಬೇಕು ಎಂಬ ಗೊತ್ತುವಳಿ ಬರಲಿದ್ದದರಿಂದ ವಾತಾವರಣ ಕ್ಷುಬ್ಧವಾಗಿತ್ತು. ನ್ಯಾಯಮೂರ್ತಿ ಖಂಡಕರರ ನಿಧನದ ಸಂಬಂಧದಲ್ಲಿ ದುಃಖ ಪ್ರದರ್ಶಕ ಗೊತ್ತುವಳಿ ಪಾಸಾಗಿ ೧೦ ನಿಮಿಷ ಸಭೆ ಮುಂದರಿಯಿತು. ಅನಂತರ ಸಭೆ ಸೇರುವ ಪೂರ್ವದಲ್ಲಿ ಮುಸ್ಲಿಂಲೀಗಿನ ಸದಸ್ಯರಾದ ಹಾಫಿಜ ಎಂಬವರು ಮೇಯರರ ಖುರ್ಚಿಯನ್ನು ಆಕ್ರಮಿಸಿದ್ದರು. ಮೇಯರರು ಸಂತಾಪ ವ್ಯಕ್ತಮಾಡಿ ಸಭೆಯನ್ನು ಮುಂದರಿಸಿದರು.

ಬಂಗಾಲ ವಿಭಜನೆಯನ್ನು ಬಂಗಾಲದ ದಲಿತ ವರ್ಗದವರು ಸ್ವಾಗತಿಸಿದ್ದಾರೆಂದು ನನ್ನ ಖಂಡಿತ ಅಭಿಪ್ರಾಯವಾಗಿದೆ. ಉತ್ತರ ಬಂಗಾಲದ ದಲಿತ ವರ್ಗದವರಂತೂ ಈ ಯೋಜನೆಯನ್ನು ಸಮರ್ಥಿಸುತ್ತಾರೆಂದು ಬಂಗಾಲದ ಮಂತ್ರಿಗಳಾಗಿದ್ದ ಪ್ರೇಮ ಹರಿ ಬರ್ಮನ್‌ರು ಪ್ರಕಟನೆ ಹೊರಡಿಸಿದ್ದಾರೆ

ಢಾಕಾ ಜಿಲ್ಹಾ ಮ್ಯಾಜಿಸ್ಟ್ರೇಟರ ಅಪ್ಪಣೆ ಮೇಲೆ ಪೋಲೀಸರು ೧೧ ನೇ ತಾರೀಕು ಒಂದು ಬ್ಯಾಂಕಿನ ಶಿಳ್ಳಕ್ಕೆ ಬಂದು ೨೨ ರಜಿಸ್ಟರ್ಡ ಅಂಚೆ ಪಾರ್ಸಲುಗಳನ್ನು ತೆರೆದು ನೋಡಲಾಗಿ ಅವುಗಳಲ್ಲಿ ೩೨೪ ಚೂರಿಗಳು ೧೪೬ ಚಾಕುಗಳು ಸಿಕ್ಕಿದ್ದರಿಂದ ಅವುಗಳನ್ನೆಲ್ಲ ಜಪ್ತ ಮಾಡಿದರು. ನಿಜಾಮಬಾದದಿಂದ ಇವು ಬಂದಿರುವವು. ಮತ್ತೊಂದು ಬ್ಯಾಂಕಿಗೆ ೯ ನೇ ತಾರೀಕಿಗೆ ಚೂರಿಗಳ ೩ ಪಾರ್ಸಲಗಳು ಬಂದದ್ದನ್ನು ಪೋಲೀಸರು ಜಪ್ತ ಮಾಡಿರುವರು.

ಪೋಲೀಸರು ೧೨ ನೇ ತಾರೀಕು ಸೈನಿಕರೊಂದಿಗೆ ಬೆಲಿಘಾಟಾ ಪೋಲೀಸ ಠಾಣೆ ಹದಿಯಲ್ಲಿರುವ ಒಂದು ಬಸ್ತಿಗೆ ಮುತ್ತಿಗೆ ಹಾಕಿ ಕೆಲವು ಕಾಡತೂಸುಗಳನ್ನು ಜಪ್ತ ಮಾಡಿ ೪೦ ಜನರನ್ನು ಸೆರೆ ಹಿಡಿದರು. ಬಂದೂಕ ಲಾಯಸೆನ್ಸದಾರರು ಬಂದೂಕುಗಳನ್ನೆಲ್ಲ ತಮಗೆ ಒಪ್ಪಿಸಲು ಮ್ಯಾಜಿಸ್ಟ್ರೇಟರು ಅಪ್ಪಣೆ ಹೊರಡಿಸಿದ್ದರಿಂದ ೧೪೦ ಬಂದೂಕಗಳು ಒಪ್ಪಿಸಲ್ಪಟ್ಟಿರುವವು. ೩೦೦ ಸಶಸ್ತ್ರ ಪೋಲೀಸರನ್ನು ಸಹಾಯಕ್ಕೆ ಕರೆಲಾಗಿದೆ.

ಬಂಗಾಲದಲ್ಲಿಯ ಹಿಂದುಗಳಿಗೆ ಪ್ರತ್ಯೇಕ ಪ್ರಾಂತವನ್ನು ನಿರ್ಮಿಸಿ ಕೊಡುವವರೆಗೆ ಸದ್ಯದ ಲೀಗ ಮಂತ್ರಿಮಂಡಳವನ್ನು ವಿಸರ್ಜಿಸಿ ಬಂಗಾಲದಲ್ಲಿ ಒಬ್ಬನೆ ಗವರ್ನರನ ಕೈಕೆಳಗೆ ಎರಡು ಪ್ರಾದೇಶಿಕ ಮಂತ್ರಿಮಂಡಲಗಳನ್ನು ರಚಿಸಬೇಕು ಎಂದು ಜಾತೀಯ ಬಂಗಾಲ ಮಹಾಸಮ್ಮೇಲನ ಒಂದು ಗೊತ್ತುವಳಿಯನ್ನು ಅಂಗೀಕರಿಸಿದೆ.

ಬಿಹಾರ ಸರಕಾರದವರು ಈ ಶಿಫಾರಸಕ್ಕೆ ಒಪ್ಪುವ ಗೊತ್ತುವಳಿಯನ್ನು ಪಾಸ ಮಾಡಿದ್ದಾರೆ. ಇದರಿಂದ ೭ ವರ್ಷಕ್ಕೆ ೭ ಕೋಟಿ ರೂಪಾಯಿಗಳ ಹೆಚ್ಚು ವೆಚ್ಚ ತಗಲುವದು ಪ್ರತಿಯೊಬ್ಬ ಗಣಿ ಕೆಲಸಗಾರನ ಸಂಬಳ ದಿವಕ್ಕೆ ೧—೬ ಯಿಂದ ೨-೭-೯ ವರೆಗೆ ಹೆಚ್ಚಿಸಲಾಗಿದೆ. ಮತ್ತು ಗಣಿ ಮೇಲೆ ಕೆಲಸ ಮಾಡುವವರ ಸಂಬಳ ೧-೬ ಯಿಂದ ೧-೧೩-೨ ಗೇರಿಸಲಾಗಿವೆ. ಎಲ್ಲರಿಗೂ ಪ್ರಾವಿಡೆಂಟ ಫಂಡಿನ ವ್ಯವಸ್ಥೆಯನ್ನು ಮಾಡಲಾಗಿದೆ.

ಪದ್ಯಾಂಕ ೧

ಐ ಸ್ವ ರ

[ಮುಳೀಯ ತಿಮ್ಮಪ್ಪಯ್ಯ]

೧

ಉತ್ಪಲಮಾಲಾವೃತ್ತ ॥

ಇಂದ್ರಿಯ ವರ್ಗಮಂ ಮನದೊಳಾ ಮನಮಂ ಮತಿಯಾಳ್ಕೆಯಲ್ಲಿ ತಾಂ
[illegible] ಕಂಡು ಬೋ-
[illegible] ದೊಳಿಂತಿದೋ
ಒಂದನನುತ್ತ ಕೈಗೂಡುವ ನಾರವನಲ್ತೆ ಮಹಾತ್ಮನೆಂಬವಂ ॥

೨

ಚಂಪಕಮಾಲಾವೃತ್ತ ॥

[illegible] ಕೊಲ್ವರಿದುಂ ಮುತವಾಗೆ ಮಾರಣಂ
[illegible] ಮತವೆಂದು ವಿಶ್ವವಿ
[illegible] ಧರ್ಮದೊಂದಮೃತವಂ ವಸುಧೈವ ಕುಟುಂಬವೆಂಬ ವಾ-
[illegible] ಗುರುವಲ್ತೆ ಮಹಾತ್ಮನೆಂಬವಂ ॥

೩

ಮುಸಣಿವ ಕಂಡು ಹುಟ್ಟಿನ [illegible] ಹುಟ್ಟಿನೊಂದು ಸಂ
[illegible] ಸಲ್ಲೆ ಬೇ
[illegible] ವೆಂದು ನಾ
[illegible] ರುವಲ್ತೆ ಮಹಾತ್ಮನೆಂಬವಂ ॥

೪

ಉತ್ಪಲಮಾಲಾವೃತ್ತ ॥

[illegible] ಬಿಡವರ್ಗನೇ
[illegible] ಹರಿ ಕೈಗೆ ಮಾಡನೇ
[illegible]
[illegible] ದಿಂದವು ಮಾಡೋಗದೇ ॥

೫

ಚಂಪಕಮಾಲಾವೃತ್ತ ॥

[illegible] ಮೃತಿನೊಳ್
[illegible] ದೆಂದು ನಂ
[illegible] ಯಾಗುವೆನ್ನ ಮಂ
[illegible] ಮಹಾತ್ಮನೇ ॥
[illegible]

ನಾಲ್ಕು ಮಾತು — ರಂಗನಾಥ ದಿವಾಕರ

ರಾಜಧಾನಿಯಲ್ಲಿ

ವ್ಹಾಯಿಸರಾಯರು ಇದೇ ೧೭ ಕ್ಕೆ ಹಿಂದೀ ಮುಖಂಡರನ್ನು ಕಂಡು ಬ್ರಿಟಿಶ ಸರಕಾರದ ಕೊನೆಯ ನಿರ್ಣಯವನ್ನು ಅರುಹತಕ್ಕವರಿದ್ದರು. ಅದು ಈಗ ಜೂನಿನ ೨ ಕ್ಕೆ ಮುಂದರಿದಿದೆ. ಹೀಗೇಕೆ ಮುಂದೆಬಿತ್ತು ಎಂಬ ಬಗ್ಗೆ ತರ್ಕವಿತರ್ಕ ನಡೆದಿದೆ. ಕಾರಣವು ಏನೇ ಇರಲಿ, ನಿರ್ಣಯವು ಮುಂದಂತೂ ಬಿದ್ದಿದೆ. ಮುಂದೆ ಬಿದ್ದಷ್ಟು ಮತ್ತೆ ಹೆಚ್ಚು ತೊಡಕು ಉತ್ಪನ್ನವಾಗುವದೆಂಬಲ್ಲಿ ಸಂಶಯವಿಲ್ಲ. ಆ ತೊಡಕು ಹಿಂದುಸ್ತಾನದ ಅಖಂಡತ್ವ, ಹಿಂದುಸ್ತಾನದ ರಕ್ಷಣೆ, ಹಿಂದು ಮುಸಲ್ಮಾನ ಬಾಂಧವರ ಸ್ನೇಹ ಸೌಹಾರ್ದ ಇವುಗಳಿಗೆ ಘಾತಕವಾಗಿಯೆ ಪರಿಣಮಿಸುವದು ಎಂಬಲ್ಲಿ ಸಂಶಯವಿಲ್ಲ. ಆದುದರಿಂದ ತಡವಾದಷ್ಟು ಹಿಂದುಸ್ತಾನಕ್ಕೆ ಘಾತಕವು ಎಂದು ಹೇಳಿದರೆ ತಪ್ಪಾಗದು. ಆದರೆ ಈ ಮಾತು ಕಾಂಗ್ರೆಸಿನ ಕೈಯಲ್ಲಿ ಇಲ್ಲದಾಗಿದೆ. ಅದು ಪೂರ್ಣವಾಗಿ ಬ್ರಿಟಿಶರ ಕೈಯಲ್ಲಿದೆ, ಅಂತಃಕರಣದಿಂದ ಅವರ ಆತ್ಯಂತಿಕ ಹಿತದ ದೃಷ್ಟಿಯಿಂದ, ಹಿಂದುಸ್ತಾನದ ಸಂರಕ್ಷಣೆಯ ದೃಷ್ಟಿಯಿಂದ ಹಿಂದುಸ್ತಾನವು ಅಖಂಡವಿರಬೇಕು ಎಂದು ಬ್ರಿಟಿಶರಿಗೆ ಸಮ್ಮತವಿದೆ. ಆದರೆ ಈ ವಿಷಯದಲ್ಲಿ ಬ್ರಿಟಿಶ ಮುತ್ಸದ್ದಿಗಳು ತಮ್ಮ ಬಿಗುವನ್ನು ಕಳಕೊಂಡು ಕಾರಣಾಂತರಗಳಿಂದ ವಿಭಕ್ತ ಹಿಂದುಸ್ತಾನದ ಬೇಡಿಕೆಗೆ ಆಸ್ಪದ ಕೊಡುತ್ತಾ ಬಂದಿದ್ದಾರೆ. ಅದೇ ಈಗ ದೊಡ್ಡ ಪೆಡಂಭೂತವಾಗಿ ಕುಳಿತಿದೆ. ನಾವಾದರೂ ಹೆಚ್ಚಿನ ಜಗಳ ಬೇಡ, ಸಾಮೋಪಚಾರದಿಂದ ಬಗೆಹರಿಸುವ, ಎಂಬ ಭ್ರಮಕ್ಕೆ ಬಿದ್ದು ವಿಭಕ್ತ ಹಿಂದುಸ್ತಾನಕ್ಕೆ ತಲೆದೂಗುವ ಸ್ಥಿತಿಗೆ ಬಂದಿದ್ದೇವೆ. ಯಾವ ಯಾದವೀಯ ಕಲಹದ ಅಂಜಿಕೆಯಿಂದ ವಿಭಕ್ತ ಹಿಂದುಸ್ತಾನಕ್ಕೆ ಒಪ್ಪಬೇಕೆನ್ನುತ್ತಿದ್ದೆವೊ ಅದಂತೂ ತಪ್ಪಲಿಲ್ಲ. ಈಗ ಅದು ಬಂದುಬಿಟ್ಟಿದೆ. ಎಲ್ಲೆಲ್ಲಿಯೂ ವಾತಾವರಣವು ಭಯ, ದ್ವೇಷ, ಇವುಗಳಿಂದ ತುಂಬಿ ಹೋಗಿದೆ. ಯಾವಾಗ, ಎಲ್ಲಿ, ಏನಾಗುವದು. ಇದು ತಿಳಿಯದಂತಾಗಿದೆ. ಪ್ರತಿಯೊಬ್ಬನು ಆತ್ಮಸಂರಕ್ಷಣೆಮಾಡಿಕೊಳ್ಳುವ ವ್ಯವಸ್ಥೆ ಮಾಡಲಿಕ್ಕೆ ಬೇಕೆಂಬ ಪರಿಸ್ಥಿತಿಯುಂಟಾಗಿದೆ. ಯಾದವೀ ಕಲಹವಾಗುವದಿದ್ದರೆ ಆಗಿ ಹೋಗಲಿ, ಎನ್ನುವ ಮನಃಸ್ಥಿತಿ ಅನೇಕರಲ್ಲಿ ಉಂಟಾಗಿದೆ. ಹೀಗಿರುವಾಗ ಅಖಂಡ ಹಿಂದುಸ್ತಾನದ ಒಂದು ಸ್ಥಿರವಾದ ಧ್ಯೇಯಕ್ಕಾದರೂ ಅಂಟಿಕೊಂಡಿರುವದು ಉತ್ತಮವಲ್ಲವೆ? ಅದಕ್ಕಾಗಿ ಪ್ರಾಣಕೊಡಲು ಸಿದ್ಧರಾಗುವದು ಶ್ರೇಯಸ್ಕರವಲ್ಲವೆ? ಆದರೆ ಮಾತುಕತೆಯಿಂದ ಬಗೆಹರಿಯಬೇಕೆಂಬ ತಂತ್ರಕ್ಕೆ ಒಳಗಾಗಿರುವವರಿಗೆ ಮೇಲಿನ ವಿಚಾರಕ್ಕೆ ಎಡೆಯಿಲ್ಲದಾಗಿದೆ. ಆ ತಂತ್ರಜಾಲವನ್ನು ಹರಿದೊಗೆಯುವ ಪ್ರಸಂಗವೂ ಬರಬಹುದೆಂಬದನ್ನು ನಾವು ಲಕ್ಷಿಸಬೇಕಾಗಿದೆ.

ಪಾಕಿಸ್ತಾನದ ಶಾಖೋಪಶಾಖೆ

ಪಾಕಿಸ್ತಾನ ಬೇಡಿಕೆಗೆ ಯಾವ ಮಿತಿ ಮರ್ಯಾದೆ ಉಳಿಯುವಂತೆ ಕಾಣುವದಿಲ್ಲ. ಮುಸಲ್ಮಾನರಿದ್ದೆಡೆಗೆಲ್ಲ ಒಂದೊಂದು ಪಾಕಿಸ್ತಾನವಾಗಬೇಕೆಂಬ ಬೇಡಿಕೆ ಬಲದಿಂದ ಮುಂದೆ ಬರುತಿದೆ. ಯುಕ್ತಪ್ರಾಂತದ ಮುಸಲ್ಮಾನರು ದಿಲ್ಲಿ ಹಾಗು ಸುತ್ತುಮುತ್ತು ಒಂದು ಪ್ರಾಂತ ಬೇಕೆನ್ನುವರು. ಮುಂಬಯಿ ಪ್ರಾಂತದಲ್ಲಿಯೂ ಒಂದು ಪಾಕಿಸ್ತಾನದ ಬೇಡಿಕೆ ಮಾಡುವ ವಿಚಾರ ನಡೆದಿದೆಯೆಂದು ಪ್ರಸಿದ್ಧವಾಗಿದೆ. ಧರ್ಮದಗುಂಟ ಇಲ್ಲವೆ ಜಾತಿಗುಂಟ ರಾಜ್ಯವಿರಬೇಕು ಎಂಬ ತತ್ವವನ್ನು ಒಮ್ಮೆ ಒಪ್ಪಿಕೊಂಡು ಬಿಟ್ಟರೆ ಹೀಗೆ ಈ ಬೇಡಿಕೆಗಳು ಬರುವದು ಸ್ವಾಭಾವಿಕ! ನಾಳೆ ದಕ್ಷಿಣದಲ್ಲಿಯ ಮುಸಲ್ಮಾನರೆಲ್ಲರೂ ಹೈದರಾಬಾದ ಸಂಸ್ಥಾನದಲ್ಲಿ ಸೇರಿ ಅಲ್ಲಿಯ ಹಿಂದುಗಳನ್ನು ಹೊರಗೆ ಹಾಕಿ ತಮ್ಮದೊಂದು ದಕ್ಷಿಣ ಪಾಕಿಸ್ತಾನವನ್ನು ಮಾಡಿಕೊಳ್ಳಬೇಕು ಎಂಬ ಕಲ್ಪನೆ ಹೊರಟರೆ ಅದರ ಬಗ್ಗೆ ನಾವು ಆಶ್ಚರ್ಯಪಡುವ ಕಾರಣವಿಲ್ಲ. ಅಂಥ ಕಲ್ಪನೆ ಮುಂದೆ ಬಂದೇತೀರುವದೆಂದು ಈಗ ಭವಿಷ್ಯ ನುಡಿಯಲು ಅಡ್ಡಿಯಿಲ್ಲ. ಆದರೆ ಇಂಥ ಮಾತುಗಳಿಗೆ ಸಕಾಲದಲ್ಲಿ ತಡೆಹಾಕದೆ ಹೋದರೆ ಮುಂದೆ ಅವೇ ಎಲ್ಲರ ತಲೆತಿನ್ನುವವೆಂಬುದನ್ನು ನಾವು ಲಕ್ಷದಲ್ಲಿಟ್ಟುಕೊಳ್ಳಬೇಕು. ಲೀಗಿನಲ್ಲಿಯಾಗಲಿ, ಮುಸಲ್ಮಾನ ಬಾಂಧವರಲ್ಲಿಯಾಗಲಿ ಸಮಂಜಸ ಜನರು ಇಲ್ಲೇ ಇಲ್ಲವೆಂದು ಹೇಳಲಿಕ್ಕಾಗುವದಿಲ್ಲ. ಆದರೆ ಅವರು ಇಂಥ ಪ್ರಸಂಗದಲ್ಲಿ ಸ್ವಸ್ಥ ಕುಳಿತರೆ ಅವರು ಇದ್ದರೂ ಅಷ್ಟೆ, ಇಲ್ಲದಿದ್ದರೂ ಅಷ್ಟೇ. ಅವರು ಸುಮ್ಮನಿದ್ದು ತಮ್ಮ ಹಾಗೂ ಇತರ ಸಮಾಜಗಳ ನಾಶಕ್ಕೆ ಕಾರಣರಾಗಬಾರದೆಂದು ನಾನು ಬಯಸುವೆನು. ಅದೇ ರೀತಿ ಮುಸಲ್ಮಾನೇತರ ಧರ್ಮದವರು ಹಾಗೂ ಸಮಾಜದವರು ಇಂಥ ವ್ಯವಹಾರ್ಯ ಬೇಡಿಕೆಗಳಿಗೆ ಆಸ್ಪದವುದೊರೆಯಲಿಕ್ಕಿಲ್ಲ. ಇಂಥ ಹುಚ್ಚುಚ್ಚಾರ ನಡೆಯಲಿಕ್ಕಿಲ್ಲ ಎಂದು ಸ್ಪಷ್ಟವಾಗಿ ಹೇಳಲಿಕ್ಕೆಬೇಕು, ಇಲ್ಲದಿದ್ದರೆ ಅವರು ತಮ್ಮ ಕರ್ತವ್ಯವನ್ನು ಮಾಡಿದಂತಾಗಲಿಕ್ಕಿಲ್ಲ.

ಹೊಸ ಹೊಸ ಬೇಡಿಕೆಗಳು

ತಾವು ಮುಂದಿಟ್ಟ ಪಾಕಿಸ್ತಾನದ ಬೇಡಿಕೆಯನ್ನೆ ಎಲ್ಲರೂ ಒಪ್ಪಿ ಅದು ತಮಗೆ ಪ್ರಾಪ್ತವಾಗಬಹುದೆಂಬ ಭ್ರಮದಲ್ಲಿ ಲೀಗಿನವರು ಇದ್ದಿರಬಹುದು. ಆದರೆ ಈಗ ಮುಸ್ಲಿಮರ ಬಹುಸಂಖ್ಯೆ ಇದ್ದ ಪ್ರಾಂತಗಳಲ್ಲಿ ಕೂಡ ಹೊಸ ಬೇಡಿಕೆಗಳು ಬಲದಿಂದ ತಲೆಯೆತ್ತತೊಡಗಿವೆ. ಮೊದಲು ಸಿಂಧಪ್ರಾಂತವು ತಾನು ಸ್ವತಂತ್ರ ರಾಷ್ಟ್ರವೇ ಆಗಿ ಬಿಡಬೇಕೆಂದು ಹವಣಿಸಿ ತನ್ನದೊಂದು ಘಟನೆಯನ್ನು ಸಿದ್ಧಮಾಡಲು ಹೊರಟಿತು. ಹಾಗೆ ಮಾಡುವದು ಯೋಗ್ಯವಲ್ಲ, ಪಾಕಿಸ್ತಾನ ಪ್ರಾಂತದವರೆಲ್ಲರೂ ಕೂಡಿ ವಿಚಾರಮಾಡಬೇಕೆಂದು ಜನಾಬ ಜಿನ್ನಾ ಗರ್ಜಿಸಿದರು. ಈಗ ಬಂಗಾಲ ಮುಖ್ಯಮಂತ್ರಿಗಳಾದ ಸುರ್ಹವರ್ದಿ ಸಾಹೇಬರು ಸ್ವತಂತ್ರ ಬಂಗಾಲ ರಾಷ್ಟ್ರದ ಪುರಸ್ಕಾರವನ್ನು ಜೋರಿನಿಂದ ಮಾಡುತ್ತಿರುವರು. ಗಾಂಧೀಜಿಯವರ ಬೆಂಬಲವನ್ನು ಪಡೆಯಲು ಸಹ ಅವರು ಯತ್ನಿಸುತ್ತಿರುವರು. ಇವಲ್ಲದೆ ಗಡಿನಾಡ ಮಂತ್ರಿಗಳಲ್ಲಿ ಒಬ್ಬರ ಪುಶ್ತು ಭಾಷಾಪೇಕ್ಷಿಗಳಾದ ಪಠಾಣರು ಪಂಜಾಬ ಸಿಂಧ ಮುಂತಾದ ಪ್ರಾಂತಗಳಸಂಬಂಧವನ್ನೊಲ್ಲರು, ಅವರಿಗೊಂದು ಪ್ರತ್ಯೇಕ ಸ್ವಾತಂತ್ರ್ಯ ರಾಜ್ಯವಿರಬೇಕೆಂದು ಪ್ರತಿಪಾದಿಸುತ್ತಿರುವರು! ಯಾವ ಪಾಕಿಸ್ತಾನ ಬೇಡಿಕೆಯು ಏಕರಾಷ್ಟ್ರೀಯತೆಯನ್ನು ನಷ್ಟಪಡಿಸಲನುವಾಗಿದೆಯೋ ಆ ಪಾಕಿಸ್ತಾನ ಬೇಡಿಕೆಯನ್ನು ಮತ್ತೆ ಬೇರೆ ಬೇಡಿಕೆಗಳು ನಷ್ಟಪಡಿಸದೆ ಬಿಡಲಾರವು.

ಹೈದರಾಬಾದ

ಜೂನ ೧೯೪೮ರ ನಂತರ ಹೈದರಾಬಾದ ಸಂಸ್ಥಾನವು ಸ್ವತಂತ್ರವಾಗತಕ್ಕದ್ದಿದೆ ಎಂಬ ಮಾತು ಈಗ ಎಲ್ಲೆಲ್ಲಿಯೂ ಕೇಳಬರುತಿದೆ. ಆದರೆ ಹೈದರಾಬಾದ ಸಂಸ್ಥಾನವೆಂದರೆ ಯಾರು? ಅಲ್ಲಿಯ ನಿಜಾಮ ಸಾಹೇಬರೊ, ಅಲ್ಲಿ ಸಂಸ್ಥಾನದ ಹೊರಗಿನಿಂದ ಬಂದು ಅಧಿಕಾರಸ್ಥಾನದಲ್ಲಿ ಸ್ಥಾನಾಪನ್ನರಾದವರೊ, ಅಲ್ಲಿಯೆ ಹುಟ್ಟಿ ಅಲ್ಲಿಯೆ ಬೆಳೆದು ಅಲ್ಲಿಯೆ ದುಡಿದು ಅಲ್ಲಿಯೆ ಮಡೆಯುವ ಪ್ರಜೆಗಳೊ? ಈ ಪ್ರಶ್ನೆಗೆ ಇಪ್ಪತ್ತನೆ ಶತಮಾನದಲ್ಲಿ ಒಂದೇ ಒಂದು ಉತ್ತರವು—ಸಂಸ್ಥಾನವೆಂದರೆ ಪ್ರಜೆಗಳು. ಆ ಪ್ರಜೆಗಳಿಗೆ ಸಮ್ಮತವಾದ ಯಾವದೇ ಮಾತನ್ನು ಯಾರೇ ಮಾಡಿದರೂ ಅದು ಯೋಗ್ಯವಾಗಲಾರದು, ನ್ಯಾಯಸಮ್ಮತವಾಗಲಾರದು. ಪ್ರಜೆಗಳು ಅಥವಾ ಯಾವದೊಂದು ದೇಶ ಇವು ಆಯಾ ರಾಜರ ಸೊತ್ತಲ್ಲ. ಆಯಾ ಪ್ರಜೆಗಳು ಕೊಟ್ಟ ಅಧಿಕಾರವನ್ನು ಸರಿಯಾಗಿ ನಡೆಸಿಕೊಂಡು ಹೋಗುವವನೆ ನಿಜವಾದ ರಾಜನು. ಆ ದೃಷ್ಟಿಯಿಂದಲೆ ನಾವು ಈಗ ಎಲ್ಲ ಸಂಸ್ಥಾನಗಳ ಕಡೆಗೆ ಹಾಗೂ ಸಂಸ್ಥಾನಿಕರ ಕಡೆಗೆ ನೋಡಲಿಕ್ಕೆ ಬೇಕು. ಆದುದರಿಂದ ಹೈದರಾಬಾದ ಸಂಸ್ಥಾನವು ಸ್ವತಂತ್ರವಾಗಬೇಕಾಗಿದ್ದರೆ ಅದು ನಿಜಾಮ ಸಾಹೇಬರ ಮನಸಿನ ಮೇಲೆಯಾಗಲಿ, ಅವರ ದಿವಾಣರಾದ ಮಿರ್ಜಾ ಸಾಹೇಬರ ಅಭಿಪ್ರಾಯದ ಮೇಲೆಯಾಗಲಿ ಅವಲಂಬಿಸಿರಕೂಡದು. ಅದು ಪ್ರಜೆಗಳ ಅಭಿಮತವನ್ನೆ ಅವಲಂಬಿಸಿರಬೇಕು. ಅಲ್ಲಿಯ ಪ್ರಜೆಗಳೆಲ್ಲ ಈ ಸಂಗತಿಯ ಸಾಂಗೋಪಾಂಗ ವಿಚಾರ ಮಾಡಿ ಮುಂದೆ ಹೆಜ್ಜೆ ಇಡಬೇಕು. ಅಂದರೆ ಯಾರಿಗೂ ಏನೂ ಅನ್ನಲು ಆಸ್ಪದವೆ ಉಳಿಯಲಿಕ್ಕಿಲ್ಲ. ಇದೇ ಬರುವ ೩೦ನೇ ತಾರೀಖಿಗೆ ಅಲ್ಲಿಯ ಪ್ರಜಾಪರಿಷತ್ತು ಕೂಡತಕ್ಕದ್ದಿದೆ. ಆಗ ಈ ವಿಷಯದ ಸಾಂಗೋಪಾಂಗ ವಿಚಾರವಾಗುವದೆಂಬ ಭರವಸೆ ನಮಗಿದೆ.

ಮೈಸೂರು ಎಲ್ಲಿದೆ?

ಹಿಂದುಸ್ತಾನದ ಸಂಸ್ಥಾನಗಳಲ್ಲಿ ಉದ್ಯೋಗ, ವ್ಯಾಪಾರ ಸೌಂದರ್ಯ, ಶಿಕ್ಷಣ ಮುಂತಾದ ಅನೇಕ ವಿಷಯಗಳಲ್ಲಿ ಮುಂದರಿದ ಮೈಸೂರ ಸಂಸ್ಥಾನವು ರಾಜಕೀಯ ರಂಗದಲ್ಲಿ ಎಲ್ಲಿದೆಯೊ ಏನೊ ಎಂಬ ಪರಿಸ್ಥಿತಿ ಈ ಹೊತ್ತು ಕಾಣುತಿದೆ. ಹಿಂದುಸ್ತಾನದಲ್ಲಿಯ ರಾಜಕೀಯ ಪರಿಸ್ಥಿತಿ ಬುಡಮೇಲು ಆಗುತಿದೆ ಎಂಬುದರ ಎಚ್ಚರವು ಅಲ್ಲಿಯ ಅಧಿಕಾರಿ ವರ್ಗಕ್ಕೆ ಇದ್ದಂತೆ ಕಾಣುವದಿಲ್ಲ! ಹೈದರಾಬಾದ ತ್ರಾವಣಕೋರ ಈ ಎರಡು ಸಂಸ್ಥಾನಗಳು ಸ್ವತಂತ್ರವಾಗಬೇಕೆಂದು ಹೊರಟಿವೆ. ಮೈಸೂರ ಮಹಾರಾಜರಂತೂ ಬಾಯಿ ಬಿಚ್ಚುವದಿಲ್ಲ. ಆದರೆ ಅವರ ದಿವಾಣರು ಏನಾದರೂ ಒಡನುಡಿಯಬೇಕಿತ್ತು. ಶಾಸನ ವಿಧಿಗೆ ಆರಿಸಿ ಬಂದವರೊಳಗಿಂದ ಮುಂದಿನ ಮಂತ್ರಿಮಂಡಳವು ಏರ್ಪಡಿಸಲಾಗುವದು ಎಂಬ ದೊಡ್ಡ ಆಶ್ವಾಸನವನ್ನು ಅವರು ಕೊಟ್ಟು ಧನ್ಯರೆನಿಸಿಕೊಂಡಿರುವರು. ಮೈಸೂರು ಪ್ರಜೆಗಳು ಪೂರ್ಣ ಹೊಣೆಗಾರ ರಾಜ್ಯಪದ್ಧತಿಯನ್ನು ಬೇಡಿ ಕಾಡಿ ದಣಿದರು. ಅವರಿಗೆ ದಿವಾಣ ಸಾಹೇಬರ ಈ ಮೇಲಿನ ಉತ್ತರದಿಂದ ಸಮಾಧಾನವಾಗುವ ಬಗೆ ಹೇಗೆ? ಪ್ರಜೆಗಳ ಸಹನಶಕ್ತಿಯ ಪರೀಕ್ಷೆಯನ್ನು ಮಹಾರಾಜರಾಗಲಿ ಅವರ ಸಲಹೆಗಾರರಾಗಲಿ ಈ ರೀತಿ ಮಾಡುವದು ಸಂಸ್ಥಾನದ ಭವಿತವ್ಯಕ್ಕೆ ಹಿತಕಾರಕವಾಗಲಾರದು.

ಚಿಕ್ಕಪುಟ್ಟ ಹಿಂದುಳಿದ ಸಂಸ್ಥಾನಗಳು ಕೂಡ ಪೂರ್ಣ ಜವಾಬದಾರ ರಾಜ್ಯಪದ್ಧತಿಯನ್ನು ತಮ್ಮಲ್ಲಿ ಸ್ಥಾಪಿಸಲು ಸಿದ್ಧವಾಗಿರುವಾಗ ಮೈಸೂರ ಸಂಸ್ಥಾನದವರು ಹಿಂದುಳಿದುದು ಲಾಂಛನಾಸ್ಪದವೆ ಸೈ. ಇಂಥ ಪರಿಸ್ಥಿತಿಯಲ್ಲಿ ಪ್ರಜೆಗಳು ಸುಮ್ಮನೆ ಕೂಡುವದು ಸಾಧ್ಯವಿಲ್ಲ. ಅವರು ಶಾಂತಿಮಯ ಮಾರ್ಗಗಳಿಂದ ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವ ಪ್ರಯತ್ನ ಪ್ರಾರಂಭಿಸಬೇಕಾಗುವದು. ಮೈಸೂರಿನವರ ಮುಂದೆ ಎರಡು ಧ್ಯೇಯಗಳಿರುವವೆಂದರೂ ಸಲ್ಲುವದು—ಮೈಸೂರಿನಲ್ಲಿ ಪೂರ್ಣ ಜವಾಬ್ದಾರ ರಾಜ್ಯಪದ್ಧತಿಯ ಸ್ಥಾಪನೆ ಮತ್ತು ಸಂಯುಕ್ತ ಕರ್ನಾಟಕದ ಸಾಧನೆ. ಈ ವಿಷಯದಲ್ಲಿ ಕೋಚೀನದ ಮಹಾರಾಜರು ಎಲ್ಲ ಸಂಸ್ಥಾನಿಕರಿಗೂ ಮೇಲುಪಂಕ್ತಿಯನ್ನು ಹಾಕಿಕೊಟ್ಟಿರುವರು. ಆ ಮಾನವು ನಿಜವಾಗಿ ಮೈಸೂರ ಮಹಾರಾಜರಿಗೆ ಸಲ್ಲತಕ್ಕದ್ದಿತ್ತು. ಸಾಕಷ್ಟು ಕಲ್ಪಕತೆ ಕೋರಿ ಧೈರ್ಯದಿಂದ ಮುಂದೆ ಹೆಜ್ಜೆ ಇಟ್ಟರೆ ಈಗಲೂ ಸಂಯುಕ್ತ ಕರ್ನಾಟಕದ ಧ್ಯೇಯವನ್ನು ಸಾಧಿಸುವದು ಮೈಸೂರ ಮಹಾರಾಜರಿಗೆ ಅಸಾಧ್ಯವಿಲ್ಲ. ಮೈಸೂರ ಪ್ರಜೆಗಳು ಕೂಡ ಈ ವಿಷಯವನ್ನೆತ್ತಿ ಈಗಿನ ಸಂದರ್ಭದಲ್ಲಿ ಎತ್ತುಗಡೆ ಮಾಡುವದು ಅತ್ಯಾವಶ್ಯಕವು. ಆ ದೃಷ್ಟಿಯಿಂದ ಅಖಂಡ ಅಥವಾ ಅಖಿಲ ಕರ್ನಾಟಕದ ಧ್ಯೇಯವಾದ ಸಂಯುಕ್ತ ಕರ್ನಾಟಕವನ್ನು ಸಾಧಿಸುವ ಪ್ರಯತ್ನವನ್ನು ನಾವು ಈಗ ಮಾಡದೆ ಹೋದರೆ ಮುಂದೆ ಅದು ಅಸಾಧ್ಯಪ್ರಾಯವಾಗುವ ಸಂಭವವು ಬಹಳ. ಈಗ ಬಾಜು ಹಿಡಿದು ಮುಂದೆ ಇರಲಾರದು.

ಹೊಸ ಕೂಲಿಕಾರ ಕಾಂಗ್ರೆಸ್

ಹಿಂದುಸ್ತಾನದಲ್ಲಿ ಈಗ ಎರಡು ಅಖಿಲ ಭಾರತೀಯ ಕೂಲಿಕಾರ ಸಂಸ್ಥೆಗಳಿವೆ, ಒಂದು ಟ್ರೇಡಯೂನಿಯನ್ ಕಾಂಗ್ರೆಸ್, ಇನ್ನೊಂದು ಫೆಡರೇಶನ್ ಆಫ್ ಲೇಬರ. ಇವುಗಳಲ್ಲಿ ಮೊದಲನೆಯದು ಕಮ್ಯುನಿಸ್ಟ ಪಕ್ಷದ ಕೈಯಲ್ಲಿದೆ, ಇನ್ನೊಂದು ರಾಯ್‌ಪಕ್ಷಕ್ಕೆ ಸೇರಿದೆ. ಇದೇ ೩-೪ ದಿನಾಂಕಕ್ಕೆ ದಿಲ್ಲಿಯಲ್ಲಿ 'ರಾಷ್ಟ್ರೀಯ ಮಜದೂರ ಕಾಂಗ್ರೆಸ್' ಎಂಬ ಹೆಸರಿನ ಹೊಸ ಕೂಲಿಕಾರ ಸಂಸ್ಥೆಯೊಂದು ಸ್ಥಾಪನವಾಯಿತು. ಈಗ ೨೫ ವರುಷ ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಬಂದ ಅಹಮದಾಬಾದದ 'ಮಜದೂರ ಮಹಾಜನ' ಸಂಘದ ತತ್ವಗಳನ್ನೇ ಕೈಗೊಂಡು ಈ ಸಂಸ್ಥೆ ನಿರ್ಮಾಣವಾಗಿದೆ. ಆ ಸಂಸ್ಥೆ ಮೊದಲು ಗಾಂಧೀಜಿಯವರ ನೇತೃತ್ವದಲ್ಲಿ ಹೊರಟು ಏಕರೂಪವಾಗಿ ಬೆಳೆಯುತ್ತಿ ಬಂದಿದೆ. ಈಗ ಹೊರಟ ಸಂಸ್ಥೆ ಪೂರ್ತ ಸ್ವಾವಲಂಬಿಯೂ ಸ್ವತಂತ್ರವೂ ಇದ್ದು ಶಾಂತ ಹಾಗೂ ಯೋಗ್ಯ ಉಪಾಯಗಳಿಂದ ರಾಷ್ಟ್ರದಲ್ಲಿಯ ಎಲ್ಲ ಉದ್ಯೋಗಗಳನ್ನು ರಾಷ್ಟ್ರೀಕರಿಸಿ ಅವನ್ನು ಕೂಲಿಕಾರರ ತಂತ್ರದಿಂದಲೆ ನಡೆಯುವಂತೆ ಮಾಡುವ ಮುಖ್ಯೋದ್ದೇಶವನ್ನು ಇಟ್ಟುಕೊಂಡು ಹೊರಟಿದೆ. ಒಂದು ವರ್ಗವನ್ನು ಹಿಂಸಾಚಾರದಿಂದಾದರೂ ನಿರ್ಮೂಲನಗೊಳಿಸಿ ಕೂಲಿಕಾರರ ಕೈಯಲ್ಲಿ ರಾಜ್ಯವು ಬರುವಂತೆ ಮಾಡಲು ಕಮ್ಯುನಿಷ್ಟರು ಹೊರಟಿರುವರು. ಆದರೆ ಈಗ ಹೊಸದಾಗಿ ಹೊರಟ ಕೂಲಿಕಾರ ಸಂಸ್ಥೆಯು ವರ್ಗವಿರೋಧವು ಇರುವದೆಂಬದನ್ನು ಲಕ್ಷಿಸಿದರೂ ಹಿಂಸೆಯಿಂದ ವರ್ಗನಿರ್ಮೂಲನದ ತತ್ವವನ್ನು ಮನ್ನಿಸುವದಿಲ್ಲ. ಅದಕ್ಕೆ ಪ್ರತಿಯಾಗಿ ಶಾಂತವಾದ ಸಂಘಟನಾ ಸಾಮರ್ಥ್ಯವನ್ನು ಬೆಳೆಸಿ ಎಲ್ಲ ಉದ್ಯೋಗಗಳನ್ನು ರಾಷ್ಟ್ರೀಕರಿಸುವ ತತ್ವವನ್ನು ಮುಂದಿಟ್ಟುಕೊಂಡು ಅವರು ನಡೆಯಬೇಕೆನ್ನುವರು. ಇದೊಂದು ಅತ್ಯಂತ ಮಹತ್ವದ ಹೆಜ್ಜೆಯನ್ನು ಈ ಹೊಸ ಸಂಸ್ಥೆಯವರು ಕೂಲಿಕಾರ ಕ್ಷೇತ್ರದಲ್ಲಿಟ್ಟಿರುವರೆಂದು ಹೇಳಲು ಅಡ್ಡಿಯಿಲ್ಲ. ಈ ವಿಚಾರದವರಿದ್ದವರೆಲ್ಲರೂ ಈ ಮಾರ್ಗದಿಂದಲೆ ಹೋಗಿ ದೇಶದಲ್ಲಿಯ ಕೂಲಿಕಾರ ವರ್ಗದ ಹಿತಸಂಬಂಧಗಳನ್ನು ರಕ್ಷಿಸಿ ಕೊನೆಗೆ ದುಡಿಯುವವರ ರಾಜ್ಯವೆ ಹಿಂದುಸ್ತಾನದಲ್ಲಿ ಪ್ರಸ್ಥಾಪನವಾಗುವಂತೆ ಮಾಡುವದು ಎಲ್ಲರ ಕರ್ತವ್ಯವು.

೧೯೪೮ರ ಮೊದಲೇ ಬ್ರಿಟಿಶರ ಅಧಿಕಾರ ತ್ಯಾಗ?

(೪ನೇ ಪುಟದಿಂದ)

ದೃಢವಾಗಿ ನಂಬಿದ್ದಾರಂತೆ. ಮತ್ತು ಜೂನ ೨ ಕ್ಕೆ ಸೇರಲಿರುವ ಪಂಚ ಪ್ರಮುಖರ ಸಭೆಯಲ್ಲಿ ಈ ಮಾತನ್ನು ವಾಯಿಸರಾಯರು ಪುನಃ ಒತ್ತಿ ಹೇಳುವರಂತೆ. ಆದರೆ ಅದಕ್ಕೆ ಜಿನ್ನಾ ಸಾಹೇಬರು ಒಪ್ಪದೆ ಹೋದರೆ ಆಗ ವಿಭಜನೆಯ ಪ್ರಶ್ನೆ ಉದ್ಭೂತವಾಗುವದು. ಇದಕ್ಕಾಗಿ ವಾಯಿಸರಾಯರು ರಚಿಸಿದ ಯೋಜನೆಯಲ್ಲಿ ಬ್ರಿಟಿಶ ಸರಕಾರ ಅಲ್ಪಸ್ವಲ್ಪ ಬದಲಾವಣೆ ಮಾಡುವದಂತೆ. ಇನ್ನೊಂದು ವರದಿಯನ್ವಯ ಜೂನ ೨ ರ ಸಭೆಯಲ್ಲಿ ವಾಯಿಸರಾಯರು ಹಿಂದೀ ಪ್ರಮುಖರ ಮುಂದೆ ಅನೇಕ ಯೋಜನೆಗಳನ್ನು ಮಂಡಿಸಿ ಅವುಗಳಲ್ಲಾವುದಾದರೊಂದನ್ನು ಒಮ್ಮತದಿಂದ ಆರಿಸಲು ಕೇಳಿಕೊಳ್ಳುವರಂತೆ. ಜಾತಿ ಜಾತಿಗಳಲ್ಲಿ ಒಮ್ಮತವಾಗದಿದ್ದರೆ ಆಗ ಹಿಂದುಸ್ತಾನವನ್ನು ಹಿಂದುಸ್ತಾನ, ಪಾಕಿಸ್ತಾನವೆಂದಿಷ್ಟೇ ಅಲ್ಲ, ಸೀಖಿಸ್ತಾನವೆಂದು ಕೂಡ ವಿಭಾಗಿಸಬಹುದಂತೆ ಮತ್ತು ಅವುಗಳಿಗಾಗಿ ಬೇರೆ ಬೇರೆ ಘಟನಾ ಸಮಿತಿಗಳನ್ನು ಕರೆಯಬಹುದಂತೆ.

ವಾಯಿಸರಾಯರು ತಾವು ಹಿಂದುಸ್ತಾನಕ್ಕೆ ಬಂದಂದಿನಿಂದ ಏಳುವಾರಗಳ ವರೆಗೆ ನಡೆಸಿದ ಮಾತುಕತೆಗಳಿಂದ ಏನೂ ಮುನ್ನಡೆಯಾಗಿಲ್ಲವೆಂದೂ ಬದಲಿಗೆ ಪರಿಸ್ಥಿತಿ ಕೆಡುತ್ತಲೇ ಹೋಗುತ್ತಿದೆಯೆಂದೂ ಅದು ಕಾರಣ ಲಗುಬಗೆಯಿಂದ ದೃಢ ನಿರ್ಧಾರ ಮಾಡಿ ಕೂಡಲೆ ಮುಂದಡಿಯಿಡಬೇಕೆಂದೂ ಬ್ರಿಟಿಶ ಸರಕಾರಕ್ಕೆ ಸೂಚಿಸಿರುವದಾಗಿ ತಿಳಿಯುತ್ತದೆ. ಪರಿಸ್ಥಿತಿಯನ್ನು ಹಿಡಿತಕ್ಕೆ ತರುವ ಸಲುವಾಗಿ ಹಿಂದೀ ಪಕ್ಷಗಳಲ್ಲಿ ಒಮ್ಮತವಾದರೆ, ಬ್ರಿಟಿಶರು ೧೯೪೮ ಜೂನಿಗೆ ಮೊದಲೇ ಅಧಿಕಾರತ್ಯಾಗಮಾಡಲು ಕೂಡ ಸಿದ್ಧರಾಗಿರುವರೆಂದು ಹೇಳಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಬ್ರಿಟಿಶ ಸೈನ್ಯವನ್ನು ಬೇಗನೆ ಹಿಂತೆಗೆದುಕೊಳ್ಳಬಹುದೆಂದೂ ಸಾಂಕೇತಿಕವಾಗಿ ಈ ಸೈನ್ಯೋಪಸಂಹಾರವನ್ನು ಈಗಿಂದೀಗ ಪ್ರಾರಂಭಿಸಬಹುದೆಂದೂ ವರದಿಗಳು ಬಂದಿವೆ. ಆದರೆ ಇದಕ್ಕೆ ಮುಸ್ಲಿಂ ಮುಂದಾಳುಗಳು ಸಮ್ಮತಿಸುವ ಲಕ್ಷಣ ಕಾಣಿಸುವದಿಲ್ಲ. ಸರದಾರ ವಲ್ಲಭಭಾಯಿಯವರು, ಕಳೆದವಾರ, ಬ್ರಿಟಿಶರು ಒಡನೆ ಹಿಂದುಸ್ತಾನಕ್ಕೆ ವಸಾಹತು ಸ್ವರಾಜ್ಯ ಕೊಟ್ಟು ಹೊರಬೀಳಬೇಕೆಂದೂ ಆಗ ಹಿಂದೀ ವಿಭಜನೆಯ ಪ್ರಶ್ನೆಯನ್ನು ಸರಳವಾಗಿ ತೀರಿಸಬಹುದೆಂದೂ ಹೇಳಿದ್ದಕ್ಕೆ ಜಿನ್ನಾ ಸಾಹೇಬರು ರೊಚ್ಚಿನ ಉತ್ತರ ಹೊರಡಿಸಿ, ಬ್ರಿಟಿಶರು ಹೋಗುವುದಾದರೆ ಹಿಂದುಸ್ತಾನ ಪಾಕಿಸ್ತಾನ ಇವುಗಳ ಘಟನಾ ಸಮಿತಿಗಳಿಗೆ ಬೇರೆ ಬೇರೆಯಾಗಿ ಅಧಿಕಾರ ಕೊಟ್ಟು ಹೋಗಬೇಕೆಂದೂ ಸೈನ್ಯವನ್ನು ಕೂಡ ಪಾಲು ಮಾಡಿ ಕೊಟ್ಟು ಹೋಗಬೇಕೆಂದೂ ಹೇಳಿದರು. ಲೀಗಿನವರಿಗೆ ಇನ್ನೂ ಕಾಲ ಬೇಕಾಗಿದೆ. ಪಂಜಾಬ ಬಂಗಾಲ ವಿಭಜನೆಯ ಚಳವಳಿಗಳನ್ನು ಪರಿಣಾಮಕಾರಿಯಾಗಿ ಮಣ್ಣುಮುಕ್ಕಿಸಲು ಮತ್ತು ಕೆಲ ಸಂಸ್ಥಾನಗಳನ್ನು ಒಡೆಮುಕೊಳ್ಳಲು ಅವರಿಗೆ ಇನ್ನೂ ಸಮಯ ಬೇಕಾಗಿದೆ. ಆದುದರಿಂದ ಅವರು ಯಾವದೇ ಯೋಜನೆಗೆ ಒಪ್ಪಿಗೆ ಕೊಟ್ಟು ಒಡನೆ ಬ್ರಿಟಿಶರಿಗೆ ಹೊರಟು ಹೋಗಲು ಅವಕಾಶ ಕೊಡಲಿಕ್ಕಿಲ್ಲ.

ಚಂದಾದಾರರಿಗೆ ಸೂಚನೆ

ಮೂರು ತಿಂಗಳಿಗೆ ಅಥವಾ ಕಡಿಮೆ ಮುದ್ದತಿಗೆ ವ್ಹಿ. ಪಿ. ಕಳಿಸುವದಿಲ್ಲ. ಮುಂಗಡ ಹಣ ಕಳಿಸಬೇಕು. ಅಂಚೆಯ ಅವ್ಯವಸ್ಥೆಯಿಂದ ಪತ್ರಿಕೆ ತಲ್ಪದಿದ್ದರೆ ನಾವು ಹೊಣೆಯಲ್ಲ. ಅವಧಿ ಮುಗಿಯುವದೆಂಬದನ್ನು ನೀವೇ ನೆನಪಿಟ್ಟು ಹಣ ಕಳಿಸಬೇಕು. ಯೋಗ್ಯ ವೇಳೆಗೆ ಹಣ ಬರದಿದ್ದರೆ ಏನನ್ನು ತಿಳಿಸದೆ ಪತ್ರಿಕೆ ನಿಲ್ಲಿಸಲಾಗುವದು.

ಕರ್ಮವೀರ ಚಂದಾವಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೬—೪—೦
೬ ತಿಂಗಳಿಗೆ	೩—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ಬೆಂಗಳೂರಿನಲ್ಲಿ ರಾಜೇಂದ್ರರು

ಅಹಿಂಸೆಯಿಂದ ಸ್ವರಾಜ್ಯ ಗಳಿಸಬೇಕು

ಘಟನಾಸಮಿತಿಯಲ್ಲಿ ಸೇರಲು ಮೈಸೂರಿಗೆ ವಿನಂತಿ

ಕೇಂದ್ರ ಸರಕಾರದ ಆಹಾರ ಮಂತ್ರಿಗಳಾದ ಡಾ. ರಾಜೇಂದ್ರ ಪ್ರಸಾದರು ದಕ್ಷಿಣ ಭಾರತದಲ್ಲಿ ಆಹಾರ ಪರಿಸ್ಥಿತಿಯ ಪರಿಶೀಲನೆಗಾಗಿ ಬಂದವರು ಮೈಸೂರು ಸಂಸ್ಥಾನಕ್ಕೂ ಭೆಟ್ಟಿ ಕೊಟ್ಟರು. ತಾ ೯ಕ್ಕೆ ಅವರು ಹೈದರಾಬಾದಿನಿಂದ ವಿಮಾನ ಮೂಲಕವಾಗಿ ಬೆಂಗಳೂರಿಗೆ ಬಂದರು. ಮೈಸೂರು ಸರಕಾರದ ಆಹಾರ ಮಂತ್ರಿಗಳಾದ ಶ್ರೀ ನಸರುಲ್ಲಾ ಷರೀಫ, ನ್ಯಾಯ ಮಂತ್ರಿ ಶ್ರೀ ಸಿದ್ದಪ್ಪ, ಶಾಸನಸಭಾಧ್ಯಕ್ಷ ಶ್ರೀ ಖಲೀಲ, ಶ್ರೀ ಕೆ. ಟಿ. ಭಾಷ್ಯಂ ಮೊದಲಾದ ಕಾಂಗ್ರೆಸ್ ಧುರೀಣರು ವಿಮಾನಗೃಹದಲ್ಲಿ ಅವರನ್ನು ಎದಿರುಗೊಂಡರು.

ಮೈಸೂರು ಸರಕಾರದ ಪ್ರತಿನಿಧಿಗಳು ಸಂಸ್ಥಾನಕ್ಕೆ ಕೇಂದ್ರದ ಆಹಾರ ಸಹಾಯ ಬೇಕಿದ್ದ ಕೊರತೆಯೊಂದನ್ನು ತೋರಿಸಿ ಉಳಿದ ಬೇಡಿಕೆಗಳನ್ನು ಪರಿಶೀಲಿಸಿ ಹಿಂದುಸ್ಥಾನ ಸರಕಾರದವರು ಸಹಾಯ ಮಾಡುವದಾಗಿ ಡಾ. ರಾಜೇಂದ್ರರು ಅಭಯವಿತ್ತಿರುವರೆಂದು ತಿಳಿಯುತ್ತದೆ. ಸಂಸ್ಥಾನದ ಆಹಾರ ಪರಿಸ್ಥಿತಿಯ ಬಗ್ಗೆ ಸರಕಾರದವರು ಅವರಿಗೊಪ್ಪಿಸಿದ ಮನವಿಯಲ್ಲಿ ಮೈಸೂರಿಗೆ ಒಟ್ಟು ೧,೬೫,೦೦೦ ಟನ್ ಆಹಾರ ಧಾನ್ಯಗಳ ಕೊರತೆ ಬೀಳುವದಿದ್ದು ಹಿಂದುಸ್ಥಾನ ಸರಕಾರದವರು ನೀಡುವ ಸಹಾಯ ೭೦ ಸಾವಿರ ಟನ್ ಮಾತ್ರ ವಿಧಿಯೆಂದು ಕಾಣಿಸಲಾಗಿದೆ. ಇನ್ನುಳಿದ ೯೫,೦೦೦ ಟನ್ ಧಾನ್ಯವಾದರೂ ಹೊರಗಿನಿಂದ ಬಾರದೆ ನಿರ್ವಾಹವಿಲ್ಲವೆಂದು ಅದರಲ್ಲಿ ಹೇಳಿದೆ. ಈಗಿರುವ ಸಂಗ್ರಹ ಬರಿ ೨ ತಿಂಗಳಿಗೆ ಸಾಲುವದಂತೆ.

ತಾ. ೧೦ ಮುಂಜಾನೆ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಅಲ್ಲಿ ನಡೆದ ಭಾಷಣಮಾಡಿ ರಾಜೇಂದ್ರ ಬಾಬುಗಳು ಹಿಂದುಸ್ಥಾನದ ಆಹಾರ ಪರಿಸ್ಥಿತಿಯನ್ನು ವಿವರಿಸಿದರು. ಹಿಂದುಸ್ಥಾನ ಆಹಾರ ವಿಷಯದಲ್ಲಿ ಯಾವಾಗಲೂ ಪರಾವಲಂಬನವಾಗಿ ಇರುವದು ಯೋಗ್ಯವಲ್ಲವೆಂದೂ ಶಕ್ಯವಿದ್ದಷ್ಟು ಹೆಚ್ಚು ಬೆಳೆಯಲು ಪ್ರಯತ್ನ ಮಾಡಬೇಕೆಂದೂ ಅವರು ಸಾರಿದರು. ಮುಂದಿನ ೫ ವರ್ಷಗಳಲ್ಲಿ ೪೦ ಲಕ್ಷ ಟನ್ ಧಾನ್ಯದ ಹೆಚ್ಚು ಬೆಳೆ ಹೆಚ್ಚಿಸುವ ಯೋಜನೆಯಾಗಿದೆ. ಅದರ ಇದು ನಮ್ಮ ಕೊರತೆಯಲ್ಲಿ ಕೇವಲ ನೂರಕ್ಕೆ ೧೫ ರಷ್ಟಾಗುವದೆಂದೂ ಅವರು ತಿಳಿಸಿದರು.

ಪತ್ರಕರ್ತರ ಪರಿಷತ್ತಿನಲ್ಲಿ ಮಾತಾಡುತ್ತ ಮೈಸೂರು ಸಂಸ್ಥಾನದ ಆಹಾರ ಪರಿಸ್ಥಿತಿ ಬೇರೆ ಇತರ ಭಾಗಗಳಲ್ಲಿದ್ದಂತೆಯೇ ಇದೆಯೆಂದು ಅವರು ಹೇಳಿದರು. ಸಂಸ್ಥಾನದ ಆಹಾರ ಆಡಳಿತ ಲೋಪದೋಷಗಳ ವ್ಯವಸ್ಥೆ ಬಗ್ಗೆ ಪ್ರಸ್ತಾಪವನ್ನು ಸೂಚಿಸಿದರು.

ರಾಜಕೀಯ ಪ್ರಶ್ನೆ

ತಾ. ೧೦ ಸಂಜೆ ಚಿಕ್ಕ ಲಾಲಬಾಗಿನಲ್ಲಿ ಸೇರಿದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ರಾಜೇಂದ್ರ ಬಾಬುಗಳು ಭಾಷಣ ಮಾಡಿದರು. ಅಲ್ಲಿ ಗಾಂಧಿಜಿ ಪ್ರತ್ಯುತ್ತರವೆಂದರೆ ಅಹಿಂಸೆಯೊಂದೆ. ಹಿಂದುಸ್ಥಾನ ಅಹಿಂಸೆಯಿಂದ ಸ್ವರಾಜ್ಯ ಗಳಿಸಿದರೆ ಅದು ಜಗತ್ತಿಗೆ ಆದರ್ಶವಾದೀತು ಎಂದು ಅವರು ಹೇಳಿದರು.

ಆ ಮೇಲೆ ಘಟನಾ ಸಮಿತಿಯ ವಿಷಯವನ್ನೆತ್ತಿಕೊಂಡು ಅವರು ಅದರಲ್ಲಿ ಲೀಗಿನವರು ಬಿಟ್ಟರೆ ಉಳಿದವರೆಲ್ಲ ಆಸ್ಥೆವಹಿಸುವರೆಂದರು. ಇನ್ನು ಸಂಸ್ಥಾನಗಳು ಒಂದೊಂದಾಗಿ ಸೇರುತ್ತ ಬಂದಂತೆ ಲೀಗಿನವರು ಹೆಚ್ಚು ಹೆಚ್ಚು ಏಕಾಕಿಗಳಾಗುವರು. ಕಾಂಗ್ರೆಸ್ಸಿಗರಾದ ತಮಗೆ ಅಖಂಡ ಭಾರತದಲ್ಲಿ ವಿಶ್ವಾಸವಿದ್ದರೂ ಇತರರ ಮೇಲೆ ಅದನ್ನು ಹೇರಿಸುವ ಇಚ್ಛೆಯಿಲ್ಲ. ಲೀಗು ವಿಭಜನೆಯನ್ನೆ ಬಯಸುವವಾದರೆ ಆದರಿಂದ ಕೊನೆಗೆ ಅದಕ್ಕೇ ಹಾನಿ. ವಿಭಜನೆಯಾಗಲೇಬೇಕಾದರೆ ಪಂಜಾಬ ಬಂಗಾಲಗಳ ವಿಭಜನೆಯೂ ಆಗಬೇಕಾಗುವದು. ಸ್ವಯಂನಿರ್ಣಯ ತತ್ವಕ್ಕೆ ಇದು ಒಪ್ಪುವ ಮಾತೆಂದು ಅವರು ಹೇಳಿದರು.

ಮುಂದೆ ಮೈಸೂರಿನ ವಿಷಯವನ್ನು ಪ್ರಸ್ತಾಪಿಸಿ ರಾಜೇಂದ್ರಬಾಬುಗಳು ಮೈಸೂರಲ್ಲಿ ಬೇಗನೆ ದ್ವಿಮುಖ ಕಾರ್ಯವಾಗಬೇಕಾಗಿದೆಯೆಂದರು. ಒಂದು, ಘಟನಾ ಸಮಿತಿಗೆ ಮೈಸೂರಿನ ಪ್ರತಿನಿಧಿಗಳನ್ನು ಕಳಿಸುವದು, ಇನ್ನೊಂದು, ಮೈಸೂರಿನಲ್ಲಿ ಹೊಸ ಘಟನೆಯನ್ನು ನಿರ್ಮಿಸಿ ಜವಾಬ್ದಾರ ಸರಕಾರವನ್ನು ಸ್ಥಾಪಿಸುವದು.

ಡಾ. ರಾಜೇಂದ್ರರು ಬಸವನಗುಡಿಯ ಸ್ವದೇಶಿ ಪ್ರದರ್ಶನ, ಹಿಂದೀ ವಿದ್ಯಾಲಯ, ಸ್ವದೇಶಿ ಪ್ರದರ್ಶನ, ಯುವಜನ ಸಂಘ, ಪತ್ರಿಕೋದ್ಯೋಗಿ ಸಂಘ ಮೊದಲಾದ ಸಂಸ್ಥೆಗಳಿಗೆ ಸಂದರ್ಶನವಿತ್ತು ಭಾಷಣ ಮಾಡಿದರು. ಬೆಳೆಗೆ ಸಂದರ್ಶನವಿತ್ತು ಭಾಷಣ ಕಾಲೇಜು ಮಹಾರಾಜೇಂದ್ರ ಉದ್ಯೋಗಿಕ ಶಾಲೆಗೂ

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೧೪

ಮುಂಬಯಿ ಶೇರ ಪೇಟೆಯಲ್ಲಿ ರಾಜಕೀಯ ವಾತಾವರಣದ ಅಸ್ಥಿರತೆ ಮತ್ತು ಹಣಕಾಸಿನ ರಂಗದಲ್ಲಿ ವ್ಯತಿಪ್ರಸರಣವುಂಟಾಗಿ ಮುಗ್ಗಟ್ಟು ಒದಗಬಹುದೆಂಬ ಭೀತಿ ಹಾಗು ಶೇರ ಪೇಟೆಯ ವ್ಯಾಪಾರವನ್ನು ಸರಕಾರ ನಿಯಂತ್ರಣಕ್ಕೊಳಪಡಿಸಲಾಗುವದೆಂಬ ಸುದ್ದಿಗಳಿಂದ ಬೆಲೆಗಳು ಇಳಿದುಹೋದವು. ಟಾಟಾ ಡೆಫರ್ಡ ಪಾಲುಗಳು ೨೧೪೫.೦.೦ ರಿಂದ ೨೦೭೫.೦-೦ ಕ್ಕಿಳಿದು ಇಂದು ೨೦೫೨—೦—೦ ದಲ್ಲಿ ಕೊನೆಗೊಂಡವು. ಡಾಯಿಂಗ್ ೧೭೬೧.೦.೦ ರಿಂದ ೧೦೬೦-೦.೦ ಕ್ಕಿಳಿದು ೧೦೫೬-೪-೦ ಕ್ಕೂ ಫಿನ್ಲೆ ೩೧೨-೦.೦ ರಿಂದ ೩೦೪-೦.೦ ಕ್ಕಿಳಿದು ೩೦೫-೦.೦ ಕ್ಕೂ ಕೊಹಿನೂರು ೬೮೬-೦-೦ ರಿಂದ ೬೬೫.೦-೦ ಕ್ಕಿಳಿದು ೬೭೯-೦-೦ ಕ್ಕೂ ಸ್ವದೇಶಿ ೬೧೮.೦.೦ ರಿಂದ ೫೯೭-೦.೦ ಕ್ಕಿಳಿದು ೬೧೪.೦.೦ ಕ್ಕೂ ಗೋಕಾಕ ೩೦೩-೦-೦ ರಿಂದ ೨೯೬-೦-೦ ಕ್ಕಿಳಿದು ೨೯೮—೦—೦ ಕ್ಕೂ ಸುಧಾರಿಸಿದವು. ಇಂಡಿಯನ್ ಅಯರ್ನ ಮತ್ತು ಸ್ಟೀಲ ೨೫೯—೦.೦ ರಿಂದ ೨೫೨-೦.೦ ಕ್ಕಿಳಿದು ೨೫೩-೦ ೦ ಕ್ಕೂ ಅಸೊ. ಸಿಮೆಂಟ್ಸ ೧೭೭-೮-೦ ರಿಂದ ೧೭೪.೦ ೦ ಕ್ಕಿಳಿದು ೧೭೫-೦-೦ ಕ್ಕೂ ಸುಧಾರಿಸಿದವು ಬ್ಯಾಂಕುಗಳಲ್ಲಿ ಸೆಂಟ್ರಲ ೧೦೪—೦—೦ ರಿಂದ ೧೦೨—೦—೦ ಕ್ಕಿಳಿದರೆ ಇಂಪೀರಿಯಲ್ ಎಸ್ ಬಿ. ೨೩೭೦—೦— ರಿಂದ ೨೪೦೫-೨-೦ ಕ್ಕೇರಿ ೨೩೮೨-೮.೦ ಕ್ಕಿಳಿಯಿತು. ರಿಝರ್ವ ೧೦೯-೮—೦ ರಿಂದ ೧೧೬.೦.೦ ಕ್ಕಿಳಿಯಿತು.

ಸರಕಾರಿ ಜಿ. ಪಿ. ನೋಟು ೧೦೧—೧೪—೬ ರಿಂದ ೧೦೨—೧—೦ ಕ್ಕೇರಿ ೧೦೧—೧೩-೬ ಕ್ಕಿಳಿಯಿತು. ಹ್ಯಾಲಿ ಸಾಲ (೧೯೪೭—೫೦) ೧೦೧.೨.೦ ರಿಂದ ೧೦೧.೫.೦ ಕ್ಕೇರಿತು.

ಚಿನ್ನ ಬೆಳ್ಳಿ

ವೈಶಾಖ ವಾಯಿದೆಯ ತೀರ್ಮಾನ ಹೇಗಾಗಬೇಕೆಂಬ ವಿವಾದ ಬಗೆ ಹರಿದು ಚಿನ್ನ ೧೫೧ ರಲ್ಲಿಯೂ ಬೆಳ್ಳಿ ೧೬೩-೧೨-೦ ರಲ್ಲಿಯೂ ತೀರ್ಮಾನಿಸಲ್ಪಡಬೇಕೆಂದು ನಿರ್ಣಯ ವಾಯಿತು. ಆದರೆ ಪೇಟೆ ಯಲ್ಲಿ ಚಿನ್ನದ ಅಭಾವವಿರುವ ಕಾರಣ ಬೆಲೆಗಳು ಬಿಗಿಯಾಗಿತ್ತಿವೆ. ವಾಯಿದಾ ವ್ಯಾಪಾರ ಇನ್ನೂ ಪ್ರಾರಂಭವಾಗಿಲ್ಲ. ಚಿನ್ನ ತಯಾರಿ ೧೦೯-೦-೦ ರಿಂದ ೧೧೦-೮.೦ ಕ್ಕೇರಿತು. ಬೆಳ್ಳಿ ತಯಾರಿ ೧೭೦.೧೨-೦ ರಿಂದ ೧೬೮-೮-೦ ಗಿಳಿದು ೧೬೯-೮.೦ ಗೆ ಹೋಗಿದೆ.

ಅರಳಿ

ಹೊರದೇಶಗಳಿಗೆ ಹಿಂದೀ ಅರಳೆಯನ್ನು ಕಳಿಸುವ ವಿಷಯದಲ್ಲಿ ಸರಕಾರ ಬಹಳವಾಗಿ ಅರಳಿ ಕೊರತೆಯನ್ನು ನೋಡಿ ಬೆಲೆಗಳು ಸುಧಾರಿಸಿದರೂ ಕೊನೆಗೆ ಬಿಟ್ಟವು. ಮೇಲಿನ ನಿಯಂತ್ರಣ ತೆಗೆಯುವರೆಂಬ ಮೊದಲಾದ ಸುದ್ದಿಗಳಿಂದ ಈ ಪರಿಸ್ಥಿತಿ ಸ್ಥಿರವಾಗಲಿಲ್ಲ. ಹೀಗೆ ಜುಲೈ ಅರಳಿ ೪೩೪-೪-೦ ರಿಂದ ೪೦೬-೨-೦ ಕ್ಕೇರಿದ್ದು ತಿರುಗಿ ೪೩೪-೮-೦ ಕ್ಕಿಳಿದು ಹೋಯಿತು. ಸೆಪ್ಟೆಂಬರ ೪೪೩-೦-೦

ಎಣ್ಣೆ ಕಾಳು

ಶೇಂಗಾ	೧೬೫-೦-೦
ಅಗಸಿ	೨೮-೪-೦
ಅಗಸಿ ಎಣ್ಣೆ	೦೯-೪-೦

ಬೆಲೆಗಳು ಏರಿವೆ.

ಶಿವಮೊಗ್ಗೆ

ತಾ. ೦೪

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೪೭-೫೦
„ „ ೨	೪೫-೪೭
ಬೆಟ್ಟ ಪಂತಿ	೩೦-೩೨
ಬೆಟ್ಟ	೨೬-೨೮
ಕೊರಸಾಲು	೪೦-೪೬
ರಾಶಿ ಆಲವು	೪೨-೪೪
ಸುಲಿ	೪೫-೪೮

ಸಾಂಗಲಿ ಪೇಟೆ

ತಾ. ೧೪

ಅರಿಷಣ ಹೇರು	೯೭-೧೦೨
ಮೆಣಸಿನಕಾಯಿ ಹೇರು „	೬೦-೧೭೫
ಶೇಂಗಾ ಖಂಡಿ	೧೫೦

ಹುಬ್ಬಳ್ಳಿ ಪೇಟೆ

ಜಯವಂತ ಹತ್ತಿ	ನಂ. ೧	೨೬೦-೨೬೫
„	ನಂ. ೨	೨೩೫-೨೫೦
„	ನಂ. ೩	೨೧೦-೨೨೫
ಅಸಲಿಗರ ಹತ್ತಿ		೨೫೦-೨೬೫
ಜಿನ ಹೊಸದು		೧೬೦-೧೭೦
ಜಿನ ಹಳೇದು		೧೭೦-೧೮೦
ದಬಲರೋಲ		೧೫೫-೧೬೫
ಸಾಜಿನ		೧೬೦-೧೫೫

ಬೆಂಗಳೂರು—ಮೈಸೂರು

ಮೈಸೂರು ಪೌರ ಸಭೆಯ ಅಧ್ಯಕ್ಷರಾದ ಶ್ರೀ ರಾಮಚಂದ್ರ ಚೌಘೋರೆಯವರ ಮೇಲೆ ಅವಿಶ್ವಾಸ ಸೂಚಿಸುವ ಗೊತ್ತುವಳಿಯನ್ನು ಮುಂದಿಡಲು ಸದಸ್ಯರು ಕರೆಯಬೇಕೆಂದು ಹೇಳಿದ ಸಭೆಯನ್ನು ಅಧ್ಯಕ್ಷರು ಕರೆಯಲಿಲ್ಲವಾಗಿ ಉಪಾಧ್ಯಕ್ಷರು ಆ ಬಗ್ಗೆ ಕರೆದ ಸಭೆ ತಾ. ೬ಕ್ಕೆ ಸೇರಿತು. ಶ್ರೀ ಚೌಘೋರೆಯವರು ಉಪಾಧ್ಯಕ್ಷರಿಗೆ ಒಂದು ಪತ್ರಬರೆದು, ಆಚಾರ್ಯ ಕೃಪಲಾನಿಯವರು ಮೈಸೂರಿಗೆ ಬರುವಾಗ ಅವರಿಗೆ ಆಗೌರವ ತೋರಿಸುವದು ತಮ್ಮ ಉದ್ದೇಶವಾಗಿದ್ದಿಲ್ಲವೆಂದೂ ಆದುದರಿಂದ ಹಿಂದಿನದನ್ನೆಲ್ಲ ಮರೆತು ಎಲ್ಲರೂ ಸಹಕಾರದಿಂದ ನಗರ ಸೇವೆ ಮಾಡೋಣವೆಂದೂ ತಿಳಿಸಿದ್ದರಿಂದ ಈ ವಿವರಣೆಯನ್ನು ಗಮನಿಸಿ ಅವರ ಮೇಲಿನ ಅವಿಶ್ವಾಸ ಗೊತ್ತುವಳಿಯನ್ನು ಹಿಂತೆಗೆದುಕೊಳ್ಳಲಾಯಿತು.

ಮೈಸೂರು, ಮಂಡ್ಯ, ಹಾಸನ ಜಿಲ್ಲೆಗಳ ಮುನಿಸಿಪಲ್ ಸ್ಥಾನಕ್ಕೆ ನ್ಯಾಯವಿಧಾಯಕ ಸಭೆಗೆ ಆರಿಸಿ ಬಂದಿದ್ದ ಮೈಸೂರು ಮುಸ್ಲಿಂ ಲೀಗಿನ ಅಧ್ಯಕ್ಷರಾದ ಶ್ರೀ ಮಹಮ್ಮದ ಷರೀಫರ ಆಯ್ಕೆಯ ವಿರುದ್ಧ ಶ್ರೀ ಮಹಮ್ಮದ ಕೆ.ಶರು ತಂದಿದ್ದ ತಕರಾರಿನ ಪರೀಕ್ಷೆಯಾಗಿ ತೀರ್ಪು ಚುನಾವಣೆ ರದ್ದಾಗಿಸಲ್ಪಟ್ಟಿದೆ. ಆ ಬಗ್ಗೆ ಉಪಚುನಾವಣೆ ನಡೆಯುವದಿದ್ದು ನಾಮಪತ್ರ ಹಾಕುವ ಕೊನೆಯ ದಿನದ ವರೆಗೂ ಶ್ರೀ ಷರೀಫರ ಹೊರತು ಬೇರಾವ ಹುರಿಯಾಳೂ ನಾಮಪತ್ರ ಸಲ್ಲಿಸದಿದ್ದುದರಿಂದ ಅವರೇ ಅನಿರೋಧ ಆರಿಸಿ ಬಂದಂತಾಗಿದೆಯೆಂದು ತಿಳಿಯುತ್ತದೆ.

ಹರಿಜನರ ದೇವಾಲಯ ಪ್ರವೇಶ ಮತ್ತು ಅಸ್ಪೃಶ್ಯತಾ ನಿವಾರಣೆಯ ಬಗ್ಗೆ ನ್ಯಾಯವಿಧಾಯಕ ಸಭೆಯ ಮುಂದಿನ ಅಧಿವೇಶನದಲ್ಲಿ ಮಂಡಿಸಲು ಶ್ರೀ ಎಂ. ಎ ಗೋಪಾಲಸ್ವಾಮಿ ಅಯ್ಯಂಗಾರರು ಕಳಿಸಿದ ಮಸೂದೆಗಳಿಗೆ ದಿವಾನ ಅಧ್ಯಕ್ಷರ ಸಮ್ಮತಿ ದೊರೆತಿಲ್ಲವೆಂದು ತಿಳಿಯುತ್ತದೆ.

೧,೫೦,೦೦೦ ರೂಪಾಯಿ ಮೋಸಮಾಡಿದರೆಂಬ ಆರೋಪ ಹೊರಿಸಿ ಇಬ್ಬರು ಕೊಟ್ಟ ಫಿರ್ಯಾದನ್ನು ಅನುಲಕ್ಷಿಸಿ ಧರ್ಮದರ್ಶಿ ಶ್ರೀ ಬಿ. ಎನ್. ಗೋಪಾಲರಾಯರನ್ನು ಬಂಧಿಸಿ ಬೆಂಗಳೂರು ದಂಡಿನ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರ ಮುಂದೆ ಹಾಜರುಪಡಿಸಲಾಯಿತು. ಅವರನ್ನು ೫೦೦೦ ರೂಪಾಯಿ ಜಾಮೀನ ಮೇಲೆ ಬಿಡುಗಡೆ ಮಾಡಲು ಅಪ್ಪಣೆಯಾಗಿದೆ.

ಮೈಸೂರು ದಿವಾನರು ಸಂಸ್ಥಾನದಲ್ಲಿ ಬರಲಿರುವ ಸುಧಾರಣೆಗಳ ಬಗ್ಗೆ ಕೊಟ್ಟ ಹೇಳಿಕೆ ಮೈಸೂರು ಕಾಂಗ್ರೆಸ್ಸಿನ ಬೇಡಿಕೆಗಳನ್ನು ಮನ್ನಿಸುವಂಥದಿರದೆ ಕೇವಲ ಕಾಲಹರಣ ಮಾಡುವ ಸೋಗಾಗಿರುವದರಿಂದ ಕಾಂಗ್ರೆಸ್ ಕಾರ್ಯಸಮಿತಿ ಸತ್ಯಾಗ್ರಹವನ್ನು ಮುಂದೆ ಹಾಕಬಾರದಾಗಿತ್ತೆಂದೂ ಒಡನೆ ಸತ್ಯಾಗ್ರಹವನ್ನಾರಂಭಿಸಬೇಕೆಂದೂ ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷದ ಕಾರ್ಯಸಮಿತಿ ಒತ್ತಾಯಪಡಿಸಿದೆ.

೧೯೪೪ ರಲ್ಲಿ ಹಿಂದುಸ್ಥಾನದಿಂದ ಗಡಿಪಾರು ಮಾಡಲ್ಪಟ್ಟಿದ್ದ ರೆವರೆಂಡ ಆರ್ ಆರ್ ಕೈತಾನರು ಜೂನ ಮೊದಲನೆ ವಾರದಲ್ಲಿ ಅಮೇರಿಕೆಯಿಂದ ಬೆಂಗಳೂರಿಗೆ ಮರಳುವರೆಂದು ತಿಳಿಯುತ್ತದೆ.

೪ ವರ್ಷದ ಮಗುವೊಂದು ನಗರ್ತರ ಪೇಟೆಯ ಹೆದ್ದಾರಿಯಲ್ಲಿ ಒಂದು ಲಾರಿಯ ಕೆಳಗೆ ಸಿಕ್ಕು ತತ್ಕ್ಷಣ ಮೃತವಾಯಿತು.

ಮೈಸೂರು ಕಾಂಗ್ರೆಸ್ಸಿನ ಕಾರ್ಯನೀತಿಯ ಬಗೆಗೆ ಅಖಿಲಭಾರತ ಕಾಂಗ್ರೆಸ್ ಮುಂದಾಳುಗಳು ಸಂತುಷ್ಟರಾಗಿದ್ದಾರೆಂದು ಮೈಸೂರ ಕಾಂಗ್ರೆಸ್ ಅಧ್ಯಕ್ಷರಾದ ಕೆ. ಚೆಂಗಲರಾಯ ರೆಡ್ಡಿಯವರು ದಿಲ್ಲಿಯಿಂದ ಮರಳಿದವರು ಪತ್ರಿಕೋದ್ಯೋಗಿಗಳಿಗೆ ಹೇಳಿದರು.

ದಿಲ್ಲಿಗೆ ಹೋಗಿದ್ದ ಮೈಸೂರ ದಿವಾಣ ಸರ್ ರಾಮಸ್ವಾಮಿ ಮೊದಲಿಯಾರರು ಬೆಂಗಳೂರಿಗೆ ಮರಳಿದ್ದು ರಾಜಕೀಯ ಸುಧಾರಣೆಗಳ ಬಗ್ಗೆ ಮಾತುಕತೆಗಳನ್ನು ಮುಂದುವರಿಸಲು ಕಾಂಗ್ರೆಸ ಅಧ್ಯಕ್ಷರನ್ನು ಮತ್ತೊಮ್ಮೆ ಬೇಗನೆ ಬರಮಾಡಿಕೊಳ್ಳಬಹುದೆಂದು ತಿಳಿಯುತ್ತದೆ.

ಈಚೆಗೆ ನಡೆದ ಜಿಲ್ಲಾ ಬೋರ್ಡ ಚುನಾವಣೆಗಳಲ್ಲಿ ಮೈಸೂರು ಕಾಂಗ್ರೆಸ್ಸಿನ ಹುರಿಯಾಳುಗಳಿಗೆ ೧೭೫ ಸ್ಥಾನಗಳಲ್ಲಿ ೧೦೦ ಸ್ಥಾನಗಳ ದೊರಕಿವೆ. ೩೭ ಜನರು ಪ್ರತಿಸ್ಪರ್ಧೆಯಿಲ್ಲದೆ ಆರಿಸಿ ಬಂದರು.

ಮೇ ಕೊನೆಯಲ್ಲಿ ಇಲ್ಲವೆ ಜೂನ ಮೊದಲನೆ ವಾರದಲ್ಲಿ ಅ. ಭಾ. ಮಕ್ಕಳ ಸಮ್ಮೇಳನದ ೯ ನೇ ಅಧಿವೇಶನ ಬೆಂಗಳೂರಲ್ಲಿ ಜರುಗಲಿದ್ದು ರಾಯಚೂರಿನ ಪ್ರಸಿದ್ಧ ವಕೀಲರಾದ ಶ್ರೀ ಕೊಪ್ಪ ಹನುಮಂತರಾಯರ ಕುಮಾರ ವಿಠಲಚಾರ್ಯರು ಅಧ್ಯಕ್ಷನಾಗಿಯೂ ಬೆಂಗಳೂರು ಹೈಸ್ಕೂಲಿನ ಅಧ್ಯಾಪಕ ಶ್ರೀ ಸೋಬದ ಸುಬ್ಬರಾಯರ ಕುಮಾರ ಗುರುರಾಜನು ಸ್ವಾಗತಾಧ್ಯಕ್ಷನಾಗಿಯೂ ಆರಿಸಲ್ಪಟ್ಟವಾರೆ. ಮಕ್ಕಳ ಮೇಲ್ಮೆಗಾಗಿ ಕೆಲಸಮಾಡುತಿರುವ ಸಂಸ್ಥೆಗಳೆಲ್ಲ ಸಹಕರಿಸಬೇಕೆಂದೂ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಬರುವವರ ಊಟೋಪಚಾರದ ವ್ಯವಸ್ಥೆ ಪ್ರತ್ಯೇಕವಾಗಿ ಮಾಡಲಾಗುವದೆಂದೂ ತಿಳಿಯುತ್ತದೆ.

ದರ್ಶನವಿತ್ತು ಅದರ ಕಾರ್ಯವನ್ನು ಪ್ರಶಂಸಿಸಿದರು.

ತಾ. ೧೧ ರಾತ್ರಿ ಅವರು ತಿರ್ವಾಂಕೂರ, ಹೈದರಾಬಾದ, ಕೊಚ್ಚಿ ಸಂಸ್ಥಾನಗಳ ಪ್ರವಾಸಕ್ಕಾಗಿ ಮದರಾಸಿಗೆ ಹೋದರು.

ದಕ್ಷಿಣ ಕನ್ನಡ

ತಾ ೪ ದಿನ ಮಂಗಳೂರಲ್ಲಿ ದ. ಕ. ಟ್ರೇಡ ಯೂನಿಯನ್ನಿನವರು ಕೂಲಿಕಾರ ದಿನವನ್ನಾಚರಿಸಿದರು. ಕೂಲಿಕಾರರ ಪಂದ್ಯಾಟಗಳು, ಸಭೆ ಭಾಷಣಗಳು, ಧ್ವಜಾರೋಹಣ, ವಿವಿಧ ವಿನೋದ ಮೊದಲಾದ ಕಾರ್ಯಕ್ರಮಗಳು ಸಾಂಗವಾದವು.

ಜೂನ ೨೫ಕ್ಕೆ ಮದ್ರಾಸ ಪ್ರಾಂತದಲ್ಲಿ ಶಿಕ್ಷಕರು ಹೂಡಬೇಕೆಂದಿರುವ ಮುಷ್ಕರ ಬಗ್ಗೆ ನಿರ್ಣಯ ಮಾಡಲು ಮೇ ೨೫ಕ್ಕೆ ದ. ಕನ್ನಡ ಪ್ರಾಥಮಿಕ ಶಿಕ್ಷಕರ ಪ್ರಥಮ ಸಮ್ಮೇಳನವನ್ನು ಕರೆಯಲಾಗಿದೆ

ಪರಂಧಾಮ—ದರ್ಶನ

[ಲೇ:— ರಾ. ವಿ. ಹೆಗಡೆ, ದೊಡ್ಮನೆ]

ತಲೆಬರಹವನ್ನು ನೋಡಿ ವಾಚಕರು ಪರಲೋಕದ ಕಲ್ಪನೆಯಿಂದ ಬಳಲಬೇಕಾಗುವದು ಸಹಜ. ಆದರೆ ಈ 'ಪರಂಧಾಮ'ವು ಪರಲೋಕದ್ದಿರದೆ ಸ್ವಲೋಕದ್ದೇ ಇದೆ. ಪವನಾರಿನಲ್ಲಿ, ಪೂಜ್ಯ ವಿನೋಬಾಜೀ ಭಾವೆಯವರ ನಿವಾಸಸ್ಥಾನ ಅಥವಾ ಆಶ್ರಮಕ್ಕೆ ಪರಂಧಾಮವೆಂದು ಹೆಸರು. 'ಪರಂಧಾಮ' ಈ ಹೆಸರಿಗೆ ವಾಚಕರು ಯಾವದಾದರೊಂದು ವಿಶೇಷ ಗಂಭೀರ ಅರ್ಥವನ್ನು ಕಟ್ಟುವ ಪ್ರಯಾಸದಲ್ಲೂ ಬೀಳಬಾರದು. ಯಾಕಂದರೆ ಅದು ಅತಿ ಸಾದಾ ಮತ್ತು ಸರಳವಿದೆ. ಧಾಮನದಿಯ ಆಚೆಗೆ (ಪರಂ—ಆಚೆ, ಧಾಮ—ಧಾಮನದಿ) ಇದ್ದದ್ದರಿಂದ 'ಪರಂಧಾಮ' ಇದೇ ಅದರ ವ್ಯಾಖ್ಯೆ. ಇದು ವಿನೋಬಾಜಿಯವರ ನಾಮಕರಣ ಮಾಡುವದರಲ್ಲಿದ್ದ ಅಪೂರ್ವ ಕುಶಲತೆ.

ವರ್ಧಾ ಯಾತ್ರೆ ಮಾಡುವವರಿಗೆ, ಈಗ, ಸೇವಾಗ್ರಾಮಕ್ಕೆ ಹೋಗಲು ಮನಸ್ಸಾಗುವದಿಲ್ಲ. ಹೋದರೂ ಅಂಥ ಪ್ರಯೋಜನವಿಲ್ಲ. ಕಾರಣ, ಬಾಪೂಜಿ ಇಲ್ಲದೆ ಸೇವಾಗ್ರಾಮವು ಕಡುಬೇಸಿಗೆಯ ಹಳ್ಳದಂತೆ. ನಂತರ ಅವರ ಪಾಲಿಗೆ ಉಳಿಯುವ ದರ್ಶನೀಯ ಸ್ಥಾನಗಳು, ಪವನಾರ, ಮಹಿಳಾಶ್ರಮ, ಮಗನವಾಡಿ, ನಾಲವಾಡಿ ಮೊದಲಾದವುಗಳು. ಪವನಾರದ ಪರಂಧಾಮವು ಈಗ ಮೊದಲಿನ ಸೇವಾಗ್ರಾಮದ ಬದಲಿಗಿದೆ ಎನ್ನಬಹುದು.

ವರ್ಧಾದಿಂದ ಪವನಾರಿಗೆ ಹೋಗಬೇಕಾದರೆ ವರ್ಧಾ-ನಾಗಪುರ ರಸ್ತೆಯನ್ನು ಮರಿಹೋಗಬೇಕಾಗುವದು. ರಸ್ತೆಯು ಧೂಳಿನಿಂದ ತುಂಬಿದ್ದರೂ ಚನ್ನಾಗಿದೆ ಎನ್ನಲಡ್ಡಿಯಿಲ್ಲ. ದಾರಿಯುದ್ದಕ್ಕೂ ಮನೋಹರ ದೃಶ್ಯಗಳು ಕಾಣಿಸುತ್ತವೆ. ರಸ್ತೆಯ ಎರಡೂ ಪಕ್ಕಗಳಲ್ಲಿ ಹಕ್ಕಿ-ಪಕ್ಕಿ ಮುಂಗಕೊಂಗಗಳಿಂದ ಕೂಡಿದಸಾಲುಮರಗಳು. ಎರಡೂ ದಿಕ್ಕಿನಲ್ಲಿ ಬಹುದೂರದ ವರೆಗೆ ಹಬ್ಬಿದ ಹೊಲಗಳು, ನಡುನಡುವೆ ಕಿತ್ತಳೆ, ಪೇರಲ, ಬಾಳೆ, ಪಪ್ಪಾಯಿ (ಅಕ್ಕತಂಗಿ) ಮೊದಲಾದ ಹಣ್ಣುಮರಗಳ ತೋಟಗಳು ಕಣ್ಣುಮನಗಳನ್ನು ಆಕರ್ಷಿಸುವವು. ಯಾವಾಗಲೂ ಗಾಳಿಯು ಭರದಿಂದ ಬೀಸುತ್ತಿರುವದು. ಇವೆಲ್ಲವರ ಜೊತೆಗೆ ತೆರಪಿಲ್ಲದೆ ಓಡಾಡುತ್ತಿರುವ ಮೋಟಾರು-ಲಾರಿಗಳು ಎಬ್ಬಿಸುವ, ಧೂಳಿನ ರಾಶಿಯಿಂದುಂಟಾಗುವ ಸುಖವನ್ನೂ ಎದಿರುಗೊಳ್ಳುವ ಸಿದ್ಧತೆ ಮಾಡಿಕೊಳ್ಳಬೇಕಾಗುವದು.

ಹೀಗೆ ಸುಮಾರು ೫-೫॥ ಮೈಲು ಉದ್ದವಾದ ರಸ್ತೆಯನ್ನು ಹಿಂದೆ ಹಾಕಿದರೆ ನಾವು ಪವನಾರಕ್ಕೆ ಹತ್ತಿದವರಾಗುವೆವು.

ಪವನಾರ ಒಂದು ಚಿಕ್ಕ ಗುಡ್ಡದ ಮೇಲೆ ಹಬ್ಬಿದ ಹಳ್ಳಿ. ಅಂಥ ದೊಡ್ಡದೂ ಅಲ್ಲ. ತೀರಾ ಚಿಕ್ಕದೂ ಅಲ್ಲ, ಊರು ಧಾಮನದಿಯನ್ನು ಅರ್ಧಚಂದ್ರಾಕಾರವಾಗಿ ಸುತ್ತಿಕೊಂಡಿದೆ. ಧಾಮ ನದಿಯ ಈಚೆಯ ದಂಡೆಗೆ ಪವನಾರ ಊರು ಇದ್ದರೆ, ಪರಂಧಾಮವು ಊರಿಗೆ ಹೊರತಾಗಿ ನದಿಯ ಆಚೆಯ ದಡದ ಮೇಲಿದೆ. ಪರಂಧಾಮಕ್ಕೆ ಹೋಗುವಾಗ ಊರು ಬಲ ಪಕ್ಕದಲ್ಲಿ ಉಳಿಯುವದು.

ಧಾಮ ನದಿಯೇನೂ ತೀರಾ ದೊಡ್ಡದಲ್ಲ. ಈಗಾಗಲೇ ಅದರ ನೀರಿನ ಬಹ್ವಂಶವು ಬಿಸಿಲಿಗೆ ಸುತ್ತಾಗಿ ಹೋಗಿದೆ. ಆದರೂ ಶಕ್ತಿ ಮೀರಿದ ಸಾಹಸದಿಂದ ಗುಳುಗುಳು ಹರಿಯುತ್ತದೆ. ಹೆಚ್ಚು ತಗ್ಗಾದ ಒಂದು ಬದಿಯಲ್ಲಿ ಕ್ಷೀಣವಾದ ಧಾರೆಯು ಬಿದ್ದು ಚಿಕ್ಕ ಧಬೆಧಬೆಯ ರೂಪವನ್ನು ಕೊಂಡಿದೆ. ವರ್ಧಾಕ್ಕೆ ನೀರು ಪೂರೈಸುವದಕ್ಕಾಗಿ ಮೇಲು ಬದಿಗೆ ಕಟ್ಟಲ್ಪಟ್ಟ ಕಟ್ಟೆಯು ನೀರ ಕ್ಷೀಣತೆಗೆ ಮತ್ತೊಂದು ಕಾರಣ. ಇಷ್ಟು ದಿನ ನೀರೊಳಗೆ ಮುಳುಗಿ ತಪಸ್ಗೈಯ್ಯುತ್ತಿದ್ದ ದೊಡ್ಡ ದೊಡ್ಡ ಬಂಡೆಗಳು ಈಗ ಜಗಕ್ಕೆ ದರ್ಶನವನ್ನು ದಯಪಾಲಿಸಹತ್ತಿವೆ.

ನದಿಯ ಉದ್ದವಾದ ಪೂಲನ್ನು ದಾಟುತ್ತಿರುವಾಗಲೇ ತುಸು ದೂರದಲ್ಲಿ ನದಿಗೆ ತಾಗಿದ ಒಂದು ದಿನ್ನೆಯ ಮೇಲೆ ವಿರಾಜಮಾನವಾಗಿದ್ದ, ಸುಂದರ, ಶಾಂತ, ಭವ್ಯವಾದ ಕೆಂಪು ಬಂಗಲೆಯೊಂದು ಕಾಣಿಸುತ್ತದೆ. ಆ ಚೋಳು ಬಂಗಲೆಯ ಮೇಲೆ ಎತ್ತರದಲ್ಲಿ ಫಡ ಫಡಿಸುತ್ತ ಗಾಳಿಯೊಡನೆ ಚಿನ್ನಾಟವಾಡುತ್ತಿರುವ ವಿಶಾಲ ತ್ರಿವರ್ಣ ಬಾವುಟವು ಕೂಡಲೇ ನಮ್ಮ ಕಣ್ಣನ್ನು ಸೆಳೆಯುತ್ತದೆ. ಇದೇ ಪರಂಧಾಮ, ವಿನೋಬಾಜೀಯವರ ನಿವಾಸಧಾಮ.

ಎಂಥ ಸುಂದರ ಭವ್ಯ ದೃಶ್ಯವದು! ಬಂಗಲೆಯ ಹಿಂಬದಿಗೆ ವಿಸ್ತೀರ್ಣವಾಗಿ ಹಬ್ಬಿದ ಹೊಲಗದ್ದೆಗಳು, ಮುಂಬದಿಗೆ ಹರಿಯುತ್ತಿರುವ ನದಿ! ಎಡಬದಿಗೆ ನದಿಯು [illegible] ಅಖಂಡ 'ಓಂ' ಕಾರವಾದರೆ ಇತ್ತ "ಸೋಽಹಂ" ಕಾರ! ನದಿಯ ದಂಡೆಗೆ ತಾಗಿ ಬಂಗಲೆ ಇದ್ದದ್ದರಿಂದ ಬಂಗಲೆಯ ಮನೋಹರತೆಯು ಮತ್ತಷ್ಟು ಹೆಚ್ಚಿದೆ. ಬಂಗಲೆಯ ಕೆಳಗಡೆ ನದಿಯು ಹರಿಯುತ್ತಿರುವದರಿಂದ ನದಿಯ ಸುಂದರತೆಗೆ ಪೂರ ಬಂದಿದೆ. ಮತ್ತು ಇವೆರಡರಿಂದ ಕೂಡಿದ ಆ ಸ್ಥಾನವು ದೂರದಿಂದ ಅಪೂರ್ವವಾಗಿ ಶೋಭಿಸುತ್ತದೆ.

ದಿನ್ನೆಯನ್ನೇರಿದ ಕೂಡಲೇ ಮೊದಲು ನಮಗೆ ದರ್ಶನವಾಗುವದು "ಭರತಭೇಟಿ" ಮಂದಿರ. "ಭರತಭೇಟಿ" ಸುಂದರ ಮೂರ್ತಿ. ರಾಮನು ಅಯೋಧ್ಯೆಗೆ ಮರಳಿದಾಗ ತಪಸ್ವಿ ಭರತನು ಅಣ್ಣನನ್ನು ಎದಿರ್ಗೊಂಡ ದೃಶ್ಯವನ್ನು ಸಂದರ್ಭವಾಗಿಟ್ಟುಕೊಂಡು ಕಡೆದ ಮೂರ್ತಿಯದು. ಅದು ವಿನೋಬಾ ಗದ್ದೆಯನ್ನು ಅಗೆಯುವಾಗ ಸಿಕ್ಕಿತಂತೆ. ವಿನೋಬಾರಿಗೆ ಅದರ ಮೇಲೆ ಪ್ರೇಮ ಅಪ್ಪಿಷ್ಟಲ್ಲ. ಬಂದವರಿಗೆಲ್ಲ ಅದರ ದರ್ಶನವನ್ನು ಏರ್ಪಡಿಸುತ್ತಾರೆ. ಮೊನ್ನೆ ಮೊನ್ನೆ ಅದನ್ನು ಬಂಗಲೆಯ ಬಲಗಡೆಯಲ್ಲಿರುವ ಒಂದು ಚಿಕ್ಕ ಮನೆಯಲ್ಲಿ ಸ್ಥಾಪಿಸಿದ್ದಾರೆ. ಮೊದಲು ಅಡಿಗೆಮನೆಯಾಗಿದ್ದ ಆ ಗುಡಿಸಲು ಈಗ ಗುಡಿಯಾಗಿ ಹೋಗಿದೆ.

ಹಾಗೇ ಮುಂದಕ್ಕೆ ಹೋದರೆ ನಮಗೆ ಅಡಿಗೆ ಮನೆಯು ಹತ್ತುವದು. ಅಡಿಗೆ ಸಮಯವಾಗಿದ್ದರೆ ಅಲ್ಲಿ ನಮಗೆ M. Sc. B. Sc. ಪಾಸು ಮಾಡಿದ ಇಬ್ಬರು ಸೈಂಟಿಸ್ಟರು ರೊಟ್ಟೀ ತಟ್ಟುವದು, ಭಾಜೀ ಬೇಯಿಸುತ್ತಿರುವದು ಕಂಡುಬರುವದು. ಆಶ್ರಮಕ್ಕೆ ಯಾರೇ ಬರಲಿ, ಅವರನ್ನು ಅಡಲು ಹಚ್ಚುತ್ತಾರೆ ವಿನೋಬಾಜೀ.

ನಂತರ ನಮಗೆ ಅಕ್ಷಿ ಕಾಣಿಸುವದು ನೇಯುವ ಮನೆ, ಮೋಥೇಜೀ (ಆಶ್ರಮವಾಸಿಯೊಬ್ಬರು) ಯವರ ಕಾರಖಾನೆ. ನೇಯುವ ಮನೆಯಲ್ಲಿ ಆಶ್ರಮವಾಸಿಗಳು ಕೂಡಿ ೮-೧೦ ಜನ ನೇಕಾರರು ಬಟ್ಟೆಯನ್ನು ಹುಟ್ಟಿಸುತ್ತಾರೆ. ಮೋಥೆಜೀಯವರ ಕಾರಖಾನೆಯಲ್ಲಿ ಆಶ್ರಮಕ್ಕೆ ಬೇಕಾಗುವ ಎಲ್ಲಾ ಮರದ ಸಾಮಾನುಗಳು ತಯಾರಾಗುತ್ತವೆ.

ವಿನೋಬಾರ ಭೆಟ್ಟಿಗೆ ಬರುವವರಿಗೆ ಸಮಯ ಸಾಮಾನ್ಯವಾಗಿ ಸಂಜೆ ನಾಲ್ಕರ ನಂತರ. ಈ ವೇಳೆಯಲ್ಲಿ ವಿದ್ಯಾರ್ಥಿ-ಶಿಕ್ಷಕರು, ಕಾರ್ಯಕರ್ತ-ಮಂತ್ರಿಗಳು, ದೀನ-ದೊಡ್ಡವರು, ಹಿಂದು-ಮುಸಲ್ಮಾನರು, ಎಲ್ಲರೂ ಬರುತ್ತಿರುತ್ತಾರೆ—ಸಲಹೆ ಕೇಳಲು, ಚರ್ಚೆಮಾಡಲು.

ಸಂಜೆ ೬ ಗಂಟೆಗೆ ವಿನೋಬಾರು ಬಂಗಲೆಯ ಎದುರಿನ ಲಾನ (lawn) ದಂತಿದ್ದ ಚಿಕ್ಕ ಅಂಗಳದಲ್ಲಿ ತಿರುಗಾಡಹತ್ತುವರು ಭೆಟ್ಟಿಗಾಗಿ ಬಂದವರಿಗೂ ಅವರೊಡನೆ ಉಪಾಯವಿಲ್ಲದೆ ತಿರುಗಾಡಬೇಕಾಗುವದು.

ನಡೆಯುವದೆಂದರೆ ವಿನೋಬಾಜಿಯವರಿಗೆ ಬಹಳ ಸೇರುತ್ತದೆ. 'ಚರೈವೇತಿ ಚರೈವೇತಿ'—ತಿರುಗಿರೋ ತಿರುಗಿರಿ—ಈ ವೈದಿಕ ಸಂದೇಶವನ್ನು ಅವರು ಸ್ವೋದಾಹರಣೆಯಿಂದ ಕೊಡುತ್ತಿರುತ್ತಾರೆ. ಪ್ರತಿದಿನ ಬೆಳಿಗ್ಗೆ ಭಂಗಿಕೆಲಸ ಮಾಡಲು ಹತ್ತಿರದೊಂದು ಹಳ್ಳಿಗೆ ಹೋಗುವರು. ಆ ೬-೭ ಮೈಲು ನಡೆದದ್ದಷ್ಟೇ ಸಾಲದೆ ಸಂಜೆಗೆ ಬೇರೆ ೩-೪ ಮೈಲುಗಳಷ್ಟು ತಿರುಗಬೇಕು. ಅಷ್ಟು ಹೊಟ್ಟೀಬಾಕ ಅವರ ಕಾಲುಗಳು. ಅವರು ಹೀಗೆ ನಡೆಯುತ್ತಿರುವಾಗ ಅವರವಿಚಾರಗಳೂ ನಡೆದೇ ಇರುತ್ತವೆ. ಇಲ್ಲವೆ ಬಂದವರೊಡನೆ ಚರ್ಚೆಯು ಸಾಗಿರುತ್ತದೆ. ಎಷ್ಟೋ ಜನರಿಗೆ ಕಾಲು ಕೆಲಸ ಮಾಡುತ್ತಿರುವಾಗ ತಲೆಯು ಸ್ತಬ್ಧವಾಗುತ್ತದೆ. ಮತ್ತು ತಲೆಯು ಗೆಯ್ಯುತ್ತಿರುವಾಗ ಕಾಲು ಸಂಪು ಹೂಡುತ್ತದೆ ಆದರೆ ವಿನೋಬಾರದು ಇದಕ್ಕೆ ವ್ಯತಿರಿಕ್ತ. ಅವರ ಕಾಲುಗಳೂ ವಿಚಾರಚಕ್ರವೂ ಇಲ್ಲವೆ ವಾಣಿಯ ಪ್ರವಾಹವೂ ಒಂದೇ ಸವನೆ ಒತ್ತರದಿಂದ ಸಾಗಿರುತ್ತವೆ. ಆಗ ಅವರಿಗೆ ಮತ್ತಿಷ್ಟು ಹುರುಪು ಬರುತ್ತದೆ. ಅವರ ಕೆಲವು ಗ್ರಂಥಗಳ ಜನ್ಮವು ಹೀಗೆ ತಿರುಗುತ್ತಿರುವಾಗಲೇ ಆಗಿದೆ ಎನ್ನಬಹುದು. ಕಾಲಿನಲ್ಲಿಯೇ ಸರ್ವ-ಚಾಲಕತ್ವವಿದೆ ಎನ್ನುವದರಲ್ಲಿ ಸಂದೇಹವಿಲ್ಲ. ಭಾಗ್ಯ ಚಕ್ರದ ಚಾಲಕವೂ ಕಾಲೇ ಆದ್ದರಿಂದಲೇ ಹೇಳಿರುವರು: "ಚರಾತಿಚರತೋ ಭಗಃ" "ಕೃತಂ ಸಂಪದ್ಯತೇ ಚರನ್"

೭॥ ಘಂ ವಿನೋಬಾರ ರಾತ್ರಿ ಊಟದ ಸಮಯ. ಆದೇ ಅಂಗಳದಲ್ಲಿ ನದಿಯ ಕಡೆ ಮೋರೆ ಮಾಡಿ ಒಂದು ಚಿಕ್ಕ ಕಾಲುಮಣೆಯ ಮೇಲೆ ತಾಟನ್ನಿಟ್ಟು ಉಣ್ಣುವರು. ಆ ತಾಟಿನಲ್ಲಿರುವ ಪಕ್ವಾನ್ನವಾವದು? ಪವನಾರ ಜೋಳದ [illegible] ಪಲ್ಲೆ, ನಾಲವಾಡಿಯಿಂದ ತಂದ ಗೋರಸ (ಆಕಳ ಹಾಲು) ಮತ್ತು ಸ್ಥಾನೀಯ ಪಪ್ಪಾಯ್ಯಾ ಹಣ್ಣು. ತೊಲೆಗಳಿಂದ ತೂಗಲ್ಪಟ್ಟ ಇವಿಷ್ಟು ಪದಾರ್ಥ. ಊಟದ ಸಲುವಾಗಿ ಹೆಚ್ಚೆಂದರೆ ೩ ಮೈಲು ದೂರಕ್ಕಿಂತ ಹೊರಗಿನ ಅವಲಂಬನೆ ಇಲ್ಲ. ಪರಾವಲಂಬನೆಯ ಕಾರಣದಿಂದ ಅವರು ಉಪ್ಪನ್ನೂ ತೊರೆದಿರುವರೆಂದರೆ! ದೀಪವೂ ಸ್ವಾವಲಂಬಿ, ಸ್ವಸಿದ್ಧವಾದದ್ದು. ಮೋಥೇಜೀಯವರ ಕಾರಖಾನೆಯಲ್ಲಿ ತಯಾರಾದ 'ಪರಂಧಾಮ ದೀಪ'ದ ಎದುರಿಗೆ ಕುಳಿತು, ಒಬ್ಬ ಕನ್ನಡ ಬಂಧುವಾದ ರಾಮಕೃಷ್ಣನು ಮರಾಠಿ ಕನ್ನಡ ಶಬ್ದಾವಲಿಯನ್ನು ತಯಾರಿಸುತ್ತಿರುವದು ಆ ವೇಳೆಯಲ್ಲಿ ಕಂಡುಬರುವದು. ದೀಪದ ಎಣ್ಣೆ ಬ್ರಹ್ಮದೇಶದ್ದಲ್ಲ ಮತ್ತೆ! ಸುರಗಾಂವಿನದು. ಮತ್ತೊಂದು, ಆ ದೀಪದ ವಿಶೇಷತೆ ಏನಂದರೆ ಮಾಡುತ್ತಿರುವ ಕೆಲಸದ ಮೇಲಷ್ಟೇ ಪ್ರಕಾಶ ಉಳಿದ ಸುತ್ತಲೂ 'ಬ್ಲ್ಯಾಕ ಔಟ್' ಅದು ನೇತ್ರದೀಪಕವಲ್ಲ ಕರ್ಮಪ್ರಕಾಶಕ. ಶಾಂತಜೀವನಕ್ಕೆ ತಕ್ಕದಾದ ಶಾಂತ ಜ್ಯೋತಿಯದು. ಇಂಥ ದೀಪದೆದುರು ಕುಳಿತ ರಾಮಕೃಷ್ಣನೊಡನೆ ತುತ್ತನ್ನು ಸಾವಕಾಶವಾಗಿ ಅಗಿಯುತ್ತ ಒಂದೊಂದು ಶಬ್ದವನ್ನು ಕೂಲಂಕಷವಾಗಿ ಚರ್ಚಿಸುತ್ತಾರೆ ವಿನೋಬಾ. ಇಬ್ಬರೂ ಸಾವಕಾಶವಾಗಿ ರಸಗ್ರಹಣ ಮಾಡಿಕೊಳ್ಳುವರು. haste ಇಲ್ಲ rest ಇಲ್ಲ. ಅಖಂಡ ಕೆಲಸ. ಅಖಂಡ ವಿಶ್ರಾಂತಿ.

ಊಟವಾದ ಕೂಡಲೇ ವಿನೋಬಾ ಹಲ್ಲು ತೊಳೆಯಹತ್ತುವರು. ಅವರ ಕೃತಕ ಹಲ್ಲುಗಳು ಸ್ವಚ್ಛಮಾಡಿಕೊಳ್ಳಲು ದಿನಾ ಕಡಿಮೆ ಎಂದರೆ ೪೦-೫೦ ನಿಮಿಷ ಸಮಯವನ್ನಾದರೂ ನುಂಗುತ್ತವೆ. ಆದರೆ ಕಾಲ—ಕೃಪಣರಾದ ವಿನೋಬಾರು ಈ ಕಾಲವನ್ನು ಒಂದಿಲ್ಲೊಂದು ಬಗೆಯಿಂದ ಉಪಯೋಗಿಸಿಕೊಳ್ಳದೇ ಬಿಡುವದಿಲ್ಲ.

ಪರಂಧಾಮದ ಮತ್ತೊಂದು [illegible] ಆನಂದದ ಸಂಗತಿಯೆಂದರೆ ಕನ್ನಡಕ್ಕೆ ಅಲ್ಲಿರುವ ಮುಖ್ಯಸ್ಥಾನ. ೮-೧೦ ಜನ ಒಟ್ಟು ಆಶ್ರಮವಾಸಿಗಳಲ್ಲಿ ನಾಲ್ಕು ಜನರು ಅಚ್ಚ ಕನ್ನಡಿಗರು. ಉಳಿದ ೩-೪ ಜನರು ಕನ್ನಡವನ್ನು ಮಾತಾಡಬಲ್ಲರು. ಇಲ್ಲವೆ ತಿಳಿದುಕೊಳ್ಳಬಲ್ಲರು. ಸ್ವತಃ ವಿನೋಬಾಜಿ ಕನ್ನಡವನ್ನು ಚನ್ನಾಗಿ ಬಲ್ಲರು. ಆದ್ದರಿಂದ ಕನ್ನಡಿಗರಿಗೇನೂ ಪರಂಧಾಮವು ಪರಧಾಮವೆನಿಸಲಾರದು.

ರಾತ್ರಿ ೮॥ ಘಂಟೆಗೆ ಸಾಮುದಾಯಿಕ ಸಾಯಂ ಪ್ರಾರ್ಥನೆಯು ಶುರುವಾಗುವದು. ಅನೇಕ ಜನರು ಕೂಡುವರು. ಪವನಾರ ಊರಿನಿಂದಲೂ ಜನರು ಬರುವರು. ಮೊದಲು ಗೀತಾಯಿಯ (ಮರಾಠಿ ಗೀತಾ) ಎರಡನೆಯ ಅಧ್ಯಾಯದ 'ಸ್ಥಿತಪ್ರಜ್ಞ' ಭಾಗವನ್ನು ಎಲ್ಲರೂ ಕೂಡಿ ಹೇಳುವರು. ನಂತರ ವಿನೋಬಾಜಿಯವರು ೪-೫ ಅಭಂಗಗಳನ್ನು ತಮ್ಮ ಮಧುರ ಕಂಠದಿಂದ ಹೇಳಿಕೊಡುವರು. ಮತ್ತು ಆ ಮೇಲೆ ಸುಮಾರು ೧೫ ನಿಮಿಷ ತಮ್ಮದೇ ಕೃತಿಯಾದ 'ಸ್ಥಿತಪ್ರಜ್ಞ-ಲಕ್ಷಣ' ಪುಸ್ತಕವನ್ನು ಓದಿ, ವಿವರಿಸಿ, ತಿಳಿಸಿ ಹೇಳುವರು. ಸುಮಾರು ೯ಕ್ಕೆ ಪ್ರಾರ್ಥನೆ ಮುಗಿಯುವದು. ಮತ್ತು ಬೆಳಗಿನ ಮುಂಜಾವಿನ ೪॥ ಘಂಟೆಯ ಪ್ರಾತಃಪ್ರಾರ್ಥನೆಯ ವರೆಗೆ ವಿನೋಬಾರ ಮೌನವಿರುವದು.

ಇವನ್ನೆಲ್ಲಾ ನೋಡಿ ಮನತಣಿದು ಮರಳಿದ ನಮಗೆ 'ಪರಂಧಾಮ'ದ ಪುನರ್ದರ್ಶನವು ಕನಸಿನಲ್ಲಿ ಮರುಕಳಿಸದಿರಲಾರದು.

ಐಕ್ಯ ಕೇರಳ ವಾದಿಗಳ ವಿಚಿತ್ರ ವಾದ

(೧ ನೇ ಪುಟದಿಂದ ಮುಂದರಿದುದು)

ವರು, ಎಂಬುದನ್ನು ಸೂಚಿಸುತ್ತೇನೆ. ಈ ಸಿದ್ಧಾಂತಕ್ಕೆ ಆಧಾರವನು ಬೇಕಾದಷ್ಟು ಕೊಡಬಹುದು ನಮ್ಮ ಕನ್ನಡ—ತುಳುವ ರಾಜರು, ಶ್ರೀ ಕೇಳಪ್ಪನವರೇ ಒಪ್ಪುವಂತೆ ಅತಿಕ್ರಮಿಸಿ ಕೇರಳವನ್ನು ಹೊಕ್ಕು ಆಳಲಿಲ್ಲ. ಅವರ ಪ್ರಾರ್ಥನೆಯಂತೆ, ತಂತಮ್ಮ ಪೂರ್ವ ರಾಜಧಾನಿಗಳಲ್ಲಿ ನೆಲಸಿ ಕೇರಳವನ್ನು ಆಳಿದ್ದರು. ಆ ಕೇರಳೀಯರು ರಾಜ್ಯಭರಣ ಸಮರ್ಥರಾದರು ಕೂಡಲೆ ಆ ರಾಜರು ಹಿಂಜರಿದಿದ್ದಾರೆ ಎಂಬುದು ಅವರ ಮಾತಿನಿಂದಲೆ ಸಿದ್ಧವಾಗುತ್ತಿದೆ ಅದು ಕನ್ನಡ ರಾಜರಿಗೆ, ನಾಡಿನವರಿಗೆ ಆದಿಯಿಂದಲೂ ವಿಶೇಷವಾಗಿರುವ ಲಕ್ಷಣ ಕಳಚ್ಚ-ತುಳುಚ್ಚ (ಕದಂಬ ತುಳುವ) ಎಂಬ ಆ ನಮ್ಮ ರಾಜರ ಕುಲನಾಮವೇ ಅವರು ಕೇರಳೀಯರಲ್ಲ, ಕನ್ನಡಿಗರು ಮತ್ತು ತುಳುವರು ಎಂಬುದನ್ನು ಸೂಚಿಸುತ್ತಿದೆ. ನಮ್ಮ ಕನ್ನಡ—ತುಳುನಾಡುಗಳಲ್ಲಿ ಅಂಥ ವಾದವೇನೂ ಇಲ್ಲ; ಇದ್ದರೆ ಅದನ್ನು ನಾವೇ ನಿರ್ಧರಿಸಿಕೊಳ್ಳಲು ಸಾಕಾಗಿದ್ದೇವೆ.

ಉತ್ತರ ಕನ್ನಡದ ಗೋಕರ್ಣದಿಂದ ದಕ್ಷಿಣ ಕನ್ನಡದ ತೆಂಕಣಗಡಿ ವರೆಗಿನ ಪ್ರಾಂತೀಯ ಭಾಷಾ ಸಾಹಿತ್ಯದ ವಿಷಯವಾಗಿ ಒಂದಿಷ್ಟು ಪರಾಂಬರಿಸುವ. ೩— ಕ್ರಿ. ಶ. ೧೦ ನೆ ಶತಮಾನದಿಂದಿತ್ತಣ ಹಲವು ಶಾಸನಗಳು ದೊರೆತಿವೆ. ಆದರಿಂದ ಹಿಂದಣವುಗಳೂ ದೊರಕುವಂತಿವೆ. ಇಲ್ಲಿಯ ಶಾಸನಗಳೆಲ್ಲವೂ ಕನ್ನಡ ಲಿಪಿ-ಕನ್ನಡಭಾಷೆಗಳಲ್ಲಿ ಇರುವುವು.

ಅವರಂತೆ ಇಲ್ಲಿ ಪುರಾತನಗಳಾದ ಹಲವು ಕನ್ನಡ ಸಾಹಿತ್ಯ (ಕಾವ್ಯ-ಅಲಂಕಾರ ವ್ಯಾಕರಣಾದಿ) ಗ್ರಂಥಗಳು ಉದಯಿಸಿವೆ. ಶಾಸನಸಾಹಿತ್ಯವನ್ನೂ ಕನ್ನಡ ಕವಿಚರಿತೆಯನ್ನೂ ಒಂದಿಷ್ಟು ಪರಾಂಬರಿಸಿದಲ್ಲಿ ಸ್ಫುಟವಾಗುವ ಸಂಗತಿ ಇದು. ಈ ಶಾಸನಸಾಹಿತ್ಯ ಗ್ರಂಥಗಳೊಳಗೆ ಒಂದೇ ಒಂದಾದರೂ ಮಲಯಾಳ ಲಿಪಿ-ಮಲಯಾಳ ಭಾಷೆಯಲ್ಲಿದ್ದರೆ ಶ್ರೀ ಕೇಳಪ್ಪನ್ ಅವರ ಮಾಹೂದೆಯನ್ನು ಮತ್ತು ಅನುಮೋದಕ ಮಹಾಶಯರ ಸಮರ್ಥನೆಯನ್ನು ನಾವೂ ಅಂಗೀಕರಿಸುತ್ತೇವೆ.

೪

ಆರ್ಥಿಕ ಸಾಂಸ್ಕೃತಿಕ-ಆಚಾರಾದಿ ವ್ಯಾವಹಾರಿಕ ಸಂಗತಿಗಳಲ್ಲಿಯೂ ಕನ್ನಡಿಗರಾದ ನಾವು (ಕನ್ನಡ ತುಳು ಕೊಡಗು ನೀಲಗಿರಿ ಪ್ರಾಂತದವರು) ಕೇರಳೀಯರಿಂದ ಭಿನ್ನರು ಎಂಬುದನ್ನು ಕರ್ನಾಟಕ ಏಕೀಕರಣ ಸಮಿತಿಯವರು ಈ ಮೊದಲೆ ಸಾಧಾರವಾಗಿ ಪ್ರಕಟಿಸಿದ್ದಾರೆ ಹೀಗಿರುವಲ್ಲಿ ತಿಳಿದೂ ತಿಳಿದೂ ಐಕ್ಯ ಕೇರಳ ಸಮಿತಿಯವರು ಇಂಥ ಹವ್ಯಾಸಕ್ಕೆ ಕೈಗಾಗಬಾರದು. [illegible] ರಿಸುವದೂ ಅದೇ ನ್ಯಾಯವೆಂದು ಸಾಧಿಸುವದಕ್ಕಾಗಿ ಚಾರಿತ್ರಿಕವಲ್ಲದ ತಮ್ಮದೇ ಆದೊಂದು ಪೌರಾಣಿಕಾಧಾರವನ್ನು ಕೊಡುವುದೂ [illegible]ಧನೆಗಾಗಿ ಕನ್ನಡಿಗರಲ್ಲಿ ಹೇಳದೆ ಕೇಳದೆ, ಹೊರಗಿನವರಾದ ಮತ್ತು ಒಳಗಿನ ಗುಟ್ಟನ್ನರಿಯದ ನಾಯಕರೆಂಬವರ ಅನುಮೋದನೆಯ ಡಂಗುರದನ್ನು ಸಾರಿಸುವುದೂ ಶುದ್ಧ ರಾಷ್ಟ್ರೀಯ ಮಾರ್ಗಕ್ಕೆ ಸಮ್ಮತವಲ್ಲ. ಅದು ಪ್ರಾಂತಿಕಸ್ವತ್ವವಾದಿಗಳಿಗೆ ಮಾತ್ರ ಒಪ್ಪುವ ಸಂಗತಿ. ಶ್ರೀ ಕೇಳಪ್ಪನ್ ಅವರ ಐಕ್ಯ ಕೇರಳ ಪ್ರಾಂತರಚನೆಯನ್ನು ಕಾಸರಗೋಡು ತಾಲೂಕಿನ ಚಂದ್ರಗಿರಿಯಿಂದ ತೆಂಕಣ ಭಾಗದಿಂದತ್ತ—ಮಾನ್ಯ ಮಧ್ಯಸ್ಥರು ನಿರ್ಣಯಿಸುವ ಗಡಿನಾಡಿನ ನಿರ್ಧಾರಕ್ಕನುವಾಗಿ—ಇಕ್ಕಡೆಯವರೂ ಅನುಮೋದಿಸುವುದಾದರೆ ನಾವು ಒಪ್ಪುತ್ತೇವೆ. ಅದನ್ನೊಂದನ್ನೂ ಗಣಿಸದ ಈ ಐಕ್ಯ ಕೇರಳಸಮಿತಿಯ ಕೇರಳ ಪ್ರಾಂತರಚನೆ, ಸಕಾರಣವಾದ ಕರ್ನಾಟಕ—ಏಕೀಕರಣ ದೃಷ್ಟಿಯಿಂದ ಪ್ರಾಂತರಚನೆಯಲ್ಲ. ಭ್ರಾಂತರಚನೆಯೇ ಸರಿ.

೫

ಕನ್ನಡ ಬಂಧುಗಳೇ ಜಾಗ್ರತರಾಗಿರಿ. ಹೀಗೆ ಕನ್ನಡನಾಡನ್ನು ನಮ್ಮ ಸಂಸ್ಕೃತಿಯನ್ನು ದಾಯಾದಬಂಧುಗಳು—ಅವರು ರಾಷ್ಟ್ರೀಯ ಪಕ್ಷದವರಾಗಿರಲಿ, ಅನ್ಯಪಕ್ಷೀಯರಾಗಿರಲಿ— ಎಲ್ಲರೂ ಒಗ್ಗಟ್ಟಾಗಿ ಒತ್ತೊತ್ತುತ್ತಿರುವ ಕೊಡಕನ್ನು ಹಿಂದಿನಿಂದಿಂದಿನವರೆಗೂ ಅನುಭವಿಸುತ್ತಿದ್ದೇವೆ. ಇದು ಆತ್ಮೀಯ ನಿರ್ಧಾರವೆಂಬ [ಸ್ವಯಂ ನಿರ್ಣಯ] ತತ್ವಕ್ಕೆ ಸರ್ವರೂ ಸಾರುವ ತತ್ವಕ್ಕೆ ವಿರುದ್ಧವಿದೆ. ಇದು ತಪ್ಪೆಂಬುದು ತಮ್ಮ ಮನಸ್ಸಾಕ್ಷಿಗೇ ಗೊತ್ತಿದ್ದರೂ, ಸ್ವಾರ್ಥದ ಸರಳೆಯಲ್ಲಿ ಬದ್ಧರಾಗಿ ನಿರ್ಧಾರವಿದು ಸತ್ಯಾನುಸಾರವೆಂದೇ ವಾದಿಸುತ್ತಿದ್ದಾರೆ. ನಿದ್ರೆ ಬಂದವನನ್ನು ಎಚ್ಚರಿಸಬಹುದು, ನಿದ್ರೆಬಂದಂತೆ ನಟಿಸುವವನನ್ನು ಎಚ್ಚರಿಸುವುದಸಾಧ್ಯ. ಪರಭಾಷೆ ಅಥವಾ ಪರಭಾಷೆಗಳು ಪ್ರಬಲವಾದ ಪ್ರಾಂತಗಳಲ್ಲಿ ಸಿಲುಕಿ ಹೋದ ನಮ್ಮ ಅಖಂಡಕರ್ನಾಟಕದ ತುಂಡು ತುಣುಕುಗಳು ಈಗ ಹೇಗೆ ನರಳುತ್ತಿವೆ. ಎಂಬುದು ನಮಗೆ ಗೊತ್ತಿದೆ. [illegible] ಮುಂದೆಯೂ ಹೇಗೆ [illegible] ದೆಂಬುದು ಅವರಿಗೂ ಗೊತ್ತಿದೆ. ಆದರಿಂದಲೇ ಇಷ್ಟೆಲ್ಲ ಆಡಂಬರಗಳು. ಹಾಗಲ್ಲವಾದರೆ ಮುಖ್ಯಸ್ಥ ನ್ಯಾಯ ವಿಧಾಯಕಸಭೆಯಲ್ಲಿ ನಮ್ಮ ರಾಷ್ಟ್ರೀಯ ಪಕ್ಷದವರ ಸೂಚನೆಯಂತೆ ಭಾಷಾವಾರು ಪ್ರಾಂತರಚನೆಯು [illegible] ಅಂಗೀಕೃತವಾದ ಕೂಡಲೆ ಈ ಐಕ್ಯಕೇರಳಸಮಿತಿಯು ಭಿನ್ನಸ್ವರವನ್ನು ಬಾರಿಸಬೇಕೆ?

ಕರ್ಮವೀರಕ್ಕೆ

Reg. No. B. 3148 | LICENCE No 3 Licenced to Post without Prepayment | Karmaveer 19-5-47

ಭವಿಷ್ಯ

ಜ್ಯೋತಿಷಿ:-ಕೃಷ್ಣಶಾಸ್ತ್ರಿ ಭಟ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಮೇ ೧೯ ರಿಂದ ೨೫ ರ ವರೆಗೆ

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ ಆದರೆ ಮಕ್ಕಳಿಗೆ ಸ್ವಲ್ಪ ಕಾಯಿಲೆ. [illegible] ಪ್ರತಿಯೊಂದು [illegible] ಸ್ಪಷ್ಟ [illegible] ಮೌಲ್ಯವಾದ [illegible] ಉದ್ಯೋಗದಲ್ಲಿ [illegible] ಪ್ರಗತಿಯು. [illegible] ಲಾಭ ಅನುಕೂಲ. [illegible] ಪ್ರತಿಷ್ಠೆ ಬಹಳ [illegible] ಹೆಚ್ಚು ದೊಡ್ಡ [illegible] ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು [illegible] ಆದರೆ [illegible] ಮನೆಯಲ್ಲಿ ಪ್ರವೇಶ [illegible] ಮಿತ್ರರಲ್ಲಿ ಸ್ವಲ್ಪ ವಿರೋಧ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಉತ್ತಮ. [illegible] ತೊಂದರೆಯಿಂದಲೆ ಯಶಸ್ಸು. ತಾ. ೧೯, ೨೨, ೨೩, ೨೪ ಅನುಕೂಲ.

ವೃಷಭ

ಉಭಯತರ ಪ್ರಕೃತಿಯು ಸುಖ ಕರವಾಗಿ. ಆದರೆ ಮಕ್ಕಳಲ್ಲಿ ಒಬ್ಬರಿಬ್ಬರ ವಿಶೇಷ ಉನ್ನತಿ [illegible] ವಿಷಯಗಳಲ್ಲಿ [illegible] ಸುಖ [illegible]. ಉದ್ಯೋಗದಲ್ಲಿ [illegible] ಬಹಳ ಆದರೆ ಪ್ರತಿಷ್ಠೆ ಲಾಭ ಬಹಳ ಕಡಮೆ. [illegible] ಮಿತ್ರ [illegible] ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ [illegible] ಇಲ್ಲವೆ [illegible] ಆದರೆ [illegible] ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ [illegible] ಹೆಚ್ಚು ತೊಂದರೆ. ತಾ. ೨೦, ೨೧, ೨೪ ಅನುಕೂಲ.

ಮಿಥುನ

ಪ್ರಕೃತಿ ಸಾಧಾರಣವೆ. ಆ ಮಾನದಿಂದ [illegible] ಪ್ರಕೃತಿ [illegible] ಸುಖ [illegible] ಮಕ್ಕಳಲ್ಲಿ [illegible] ಸಂಭವಿಸುವವು. ಅದರಂತೆ [illegible] ಕೆಲ ಜನರ ಬಹಳ [illegible] ಇಲ್ಲವೆ ಕೆಲ [illegible] ಸಂಭವಿಸುವವು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ವ್ಯವಸ್ಥಿತ. ಇಲ್ಲದಿದ್ದರೆ ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ [illegible] ಯಶಸ್ಸು. ಆದರೆ [illegible] ಮತ್ತು [illegible] ಪ್ರವಾಸ ಮಿತ್ರ ಸುಖ ಉತ್ತಮ. ಪ್ರವಾಸ ಮತ್ತು ಭೆಟ್ಟಿ [illegible] ಅನುಕೂಲ. ಆದರೆ ಪತ್ರವ್ಯವ [illegible] ತೊಂದರೆಯಿಂದಲೆ ಯಶಸ್ಸು. ತಾ. ೧೯, ೨೩, ೨೪ ಅನುಕೂಲ.

ಕರ್ಕ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ. ಆದರೆ ಮಕ್ಕಳಲ್ಲಿ [illegible] ಬಹಳ ಸ್ಪರ್ಧೆ. [illegible] ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಲಾಭ ಅನುಕೂಲ ಮತ್ತು ಪ್ರತಿಷ್ಠೆ ಬಹಳ ಉತ್ತಮ. [illegible] ಜನರ ಭೆಟ್ಟಿ [illegible] ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. [illegible] ಮಿತ್ರ ಸುಖ ಉತ್ತಮ. [illegible] ಸ್ವಲ್ಪ [illegible] ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ [illegible] ತೊಂದರೆಯಿಂದಲೆ ಯಶಸ್ಸು. ತಾ. ೧೯, ೨೦, ೨೧, ೨೫ ಅನುಕೂಲ.

ಸಿಂಹ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಅನುಕೂಲ. ಆದರೆ ಹೆಂಡತಿಯ ಪ್ರಕೃತಿಯಲ್ಲಿ [illegible] ಉದ್ಯೋಗದಲ್ಲಿ [illegible] ಪ್ರಗತಿ [illegible] ಲಾಭ. ಆದರೆ ಪ್ರತಿಷ್ಠೆ [illegible] ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ [illegible] ಸ್ಥಾವರದಲ್ಲಿ ಒಂದು [illegible] ಅನುಕೂಲ ಆದರೆ [illegible] ಪ್ರವಾಸ [illegible] ಉತ್ತಮ. ಮತ್ತು ಭೆಟ್ಟಿ [illegible] ಪತ್ರವ್ಯವಹಾರ ಉತ್ತಮ. [illegible] ತೊಂದರೆಯಿಂದ ಯಶಸ್ಸು. ತಾ. ೧೯, ೨೦, ೨೧, ೨೨ ಅನುಕೂಲ.

ಕನ್ಯಾ

ಪ್ರಕೃತಿ ಉತ್ತಮ ಆದರೆ ಹೆಂಡತಿಗೂ ಮೊದಲಿನ [illegible] ವಿಷಯಗಳಲ್ಲಿ [illegible] ಬಹಳ ಉತ್ತಮ ಮತ್ತು [illegible] ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ [illegible] ಆದರೆ [illegible] ಉದ್ಯೋಗದಲ್ಲಿ ಪ್ರಗತಿ [illegible] ಲಾಭ ಮತ್ತು ಪ್ರತಿಷ್ಠೆ ಉತ್ತಮ. [illegible] ಪತ್ರವ್ಯವ [illegible] ತೊಂದರೆಯಿಂ-ದಲೆ ಯಶಸ್ಸು. ತಾ. ೧೯, ೨೧, ೨೨, ೨೫ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಹೆಂಡತಿಗೆ ಕಾಯಿಲೆ ಹೆಚ್ಚು ಆದರೆ ಕುಟುಂಬದಲ್ಲಿಯು ಇತರರೊಡನೆ ಬಹಳ ಮತಭೇದ. ಮತ್ತು ಒಬ್ಬರಿಬ್ಬರ [illegible]. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ. ಸ್ವಲ್ಪ ಅವಚಿತ ಲಾಭ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮಾನ್ಯ [illegible] ಸಂಭವ. ಮಿತ್ರರಲ್ಲಿ ಪ್ರೇಮ. ಸ್ಥಾವರದಲ್ಲಿ ಅನುಕೂಲ ಸಾಹಸ. ಪ್ರವಾಸಕ್ಕಿಂತ ಪತ್ರವ್ಯವಹಾರ ಮತ್ತು ಅದಕ್ಕಿಂತ ಭೆಟ್ಟಿ ಉತ್ತಮ. ಸ್ವಾತಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೯, ೨೨, ೨೪, ೨೫ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ಆದರೆ ತಲೆ, ಟೊಂಕ ಮತ್ತು ಕಣ್ಣು ಬೇನೆಯಂಥ ಚಿಕ್ಕ ಕಾಯಿಲೆ. ಹೆಂಡತಿ ಬಗ್ಗೆ ಯೂ ಚಿಕ್ಕ ತಕರಾರು. ಇತರ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ತೊಂದರೆಯದೆ. ಮಕ್ಕಳಿಂದ ಸ್ವಾತಂತ್ರ್ಯ ಪ್ರಿಯ ಆದರೆ ಜನರಿಗೆ ಅಪ್ರಿಯವಾದ ವರ್ತನ. ಉದ್ಯೋಗದಲ್ಲಿ ಪ್ರಗತಿ ಕಡಮೆ ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೂ ಅಷ್ಟೇ ಹಾನಿ. ಉದ್ಯೋಗಸ್ಥರಿಗಿಂತ ನೌಕರಿ ಮಾಡುವವರಿಗೆ ಹೆಚ್ಚು ಅನುಕೂಲ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಅನುರಾಧೆಗೆ ಹೆಚ್ಚು ತೊಂದರೆ. ತಾ. ೨೦, ೨೧, ೨೫ ಅನುಕೂಲ.

ಧನು

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಗೆ ಕ್ಲೇಶ. ಮಕ್ಕಳಲ್ಲಿ ವಿಶೇಷ ಉನ್ನತಿ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ವಿದ್ವಾಂಸರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಸಾಮಾನ್ಯ ಆದರೆ ಲಾಭ ಉತ್ತಮ. ಉದ್ಯೋಗಸ್ಥರಿಗಿಂತ ನೌಕರದಾರರಿಗೆ ಹೆಚ್ಚು ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಕಷ್ಟದ್ದು. ಪೂರ್ವಾಷಾಢಾಕ್ಕೆ ಹೆಚ್ಚು ತೊಂದರೆ. ತಾ. ೧೯, ೨೩, ೨೪ ಅನುಕೂಲ.

ಮಕರ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳಲ್ಲಿ ಒಬ್ಬರಿಗೆ ಬಹಳ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕ್ಷಣ ಕ್ಷಣಕ್ಕೆ ಬದಲಾಗುವದು. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಮತ್ತು ಪ್ರತಿಷ್ಠೆ ಹಾಗು ಲಾಭ ಹ್ಯಾಗೆ ಹುಟ್ಟುವವು ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಾದಿ ಕೆಲಸ ಹಿತಾವಹ. ಶ್ರವಣಾಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೨೦, ೨೧, ೨೫ ಅನುಕೂಲ.

ಕುಂಭ

ಶರೀರದ ಮತ್ತು ಹೆಂಡತಿಯ ಪ್ರಕೃತಿ ಒಂದೇ ವೇಳೆಗೆ ಮತ್ತು ಬಹುಶಃ ಒಂದೇ ಕಾರಣದಿಂದ ಕೆಡುವ ಸಂಭವ. ಕುಟುಂಬದಲ್ಲಿ ಬಹುತರ ಜನರೊಡನೆ ಹೆಚ್ಚು ಕಡಮೆ ಮತಭೇದ. ಆದರೆ ಆಪ್ತರು ನಿಮ್ಮ ಅಜ್ಞೆಯಂತೆಯೆ ವರ್ತಿಸುವರು. ಆಪ್ತರೊಡನೆ ಬಹಳ ಪ್ರೇಮರಹಸ್ಯ ಪ್ರಾರಂಭದಲ್ಲಿ. ಆದರೆ ಕೊನೆಗೆ ಅಷ್ಟೇ ಜೋರಾದ ತಿರಸ್ಕಾರ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಬಹಳ ಸಾಹಸ. ಮಿತ್ರರಿಗೆ ದೊಡ್ಡ ಸಹಾಯ ಮಾಡುವ ದೊಡ್ಡಸ್ತನ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಾಮಾನ್ಯ ಅನುಕೂಲತೆ. ಪ್ರವಾಸಾದಿ ಕೆಲಸ ಹಿತಕರ. ಶತತಾರಿಕೆಗೆ ತೊಂದರೆಯಿಂದಲೆ ಯಶಸ್ಸು. ತಾ. ೧೯, ೨೩, ೨೪ ಅನುಕೂಲ.

ಮೀನ

ಪ್ರಕೃತಿಗೆ ಕಿಂಚಿತ್ ಕ್ಷೀಣತೆ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ಉದ್ಯೋಗದಲ್ಲಿಯೂ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮಿತ್ರ ಸುಖ ಬಹಳ ಉತ್ತಮ. ರೋಖ ಸಂಗ್ರಹದಲ್ಲಿ ಹೆಚ್ಚಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಸ್ವಪ್ನ ಶುಭ ಮತ್ತು ಭಾವೀ ಸೂಚಕ. ಭೆಟ್ಟಿಗಿಂತ ಪ್ರವಾಸ ಪತ್ರವ್ಯವಹಾರ ಹೆಚ್ಚು ಅನುಕೂಲ. ಉತ್ತರಾಭಾದ್ರಪದಕ್ಕೆ ಮಾತ್ರ ತೊಂದರೆಯಿಂದಲೆ ಯಶಸ್ಸು. ತಾ. ೧೯, ೨೦, ೨೧, ೨೫ ಅನುಕೂಲ.

ಈ ಪತ್ರಿಕೆಯು [illegible]